# ಹೊಸ ಮನುಷ್ಯ

ಸಮಾಜವಾದಿ ಮಾಸಿಕ

ಜನವರಿ, ೨೦೧೫

ಸಂಪುಟ: ೪ ಸಂಚಿಕೆ: ೬

ಸಂಪಾದಕ : ಡಿ.ಎಸ್.ನಾಗಭೂಷಣ

**ಚಂದಾ** : ವಾರ್ಷಿಕ: ರೂ. ೧೫೦/-(ವ್ಯಕ್ತಿಗಳಿಗೆ) ರೂ.೨೫೦/-(ಸಂಸ್ಥೆ/ಗ್ರಂಥಾಲಯಗಳಿಗೆ) ಬಿಡಿ ಪ್ರತಿ: ರೂ. ೨೦/-

**ವಿಳಾಸ:** ಎಚ್.ಐ.ಜಿ.-೫, 'ನುಡಿ', ಕಲ್ಲಳ್ಳಿ ಬಡಾವಣೆ, ವಿನೋಬ ನಗರ, ಶಿವಮೊಗ್ಗ-೫೭೭ ೨೦೪

**ವಿಳಾಸ:** ಎಚ್.ಐ.ಜಿ.-೫, 'ನುಡಿ', ಕಲ್ಲಳ್ಳಿ ಬಡಾವಣೆ, ವಿನೋಬ ನಗರ, ಶಿವಮೊಗ್ಗ-೫೭೭ ೨೦೪

## ಸಂಪಾದಕರ ಟಿಪ್ಪಣಿಗಳು

ಪ್ರಿಯ ಓದುಗರೇ,

ಮೋದಿಯವರ ವಿರೋಧಿಗಳಿರಲಿ, ಅವರ ಅಭಿಮಾನಿಗಳೇ ಈಗ ಸ್ತಂಭೀಭೂತರಾಗಿ ಕೂತಿದ್ದಾರೆ. ಹೊಸ ಸರ್ಕಾರದ ಅಧಿಕಾರಾವಧಿಯ ಆರಂಭದ ದಿನಗಳಲ್ಲಿ ಮೋದಿಯವರು ತಮ್ಮ ಅನುಮಾನಾಸ್ಪದ ಹಿನ್ನೆಲೆಯನ್ನು ಹಿಂದೆ ಬಿಟ್ಟು ಬಂದಿದ್ದಾರೆಂಬ ನಂಬಿಕೆ ಹುಟ್ಟಿಸಿದ್ದ ಅವರ ಆರೋಗ್ಯಕರ ರಾಜಕೀಯ ಭಾವಭಂಗಿಗಳಿಂದ ಇದು ಕನಿಷ್ಠ ಹತ್ತು ವರ್ಷಗಳ ಸರ್ಕಾರ ಎಂದು ಭಾವಿಸಿದ್ದ ಜನತೆ ಈಗ ಇದು ಐದು ವರ್ಷಗಳ ಒಂದು ಅವಧಿಯನ್ನಾದರೂ ಪೂರೈಸಲು ಸಾಧ್ಯವೇ ಎಂದು ಅನುಮಾನಪಡಲಾರಂಭಿಸಿದ್ದಾರೆ. 'ಅಭಿವೃದ್ಧಿ' ಮಂತ್ರದ ಧ್ವನಿ ಕ್ಷೀಣವಾಗತೊಡಗಿದ್ದು, ಬಿಜೆಪಿ ಕೇಂದ್ರವನ್ನು ಗೆದ್ದುಕೊಂಡ ನಂತರ ಒಂದೊಂದೇ ರಾಜ್ಯವನ್ನೂ ಗೆದ್ದುಕೊಳ್ಳುತ್ತಿದ್ದಂತೆ ಹಿಂದುತ್ವದ ಹಳೆಯ ಕೂಗು ಎಲ್ಲೆಲ್ಲೂ ಕೇಳತೊಡಗಿದೆ.

ಅಧಿಕಾರಕ್ಕೆ ಬಂದ ಆರು ತಿಂಗಳುಗಳ ನಂತರ ಪೂರ್ವನಿಯೋಜಿತವಾದಂತೆ ಸಂಘ ಪರಿವಾರದ ಅಂಗಸಂಸ್ಥೆಗಳು ಒಂದಾದರಮೇಲೊಂದರಂತೆ ಆಡುತ್ತಿರುವ ಮಾತುಗಳು ಮತ್ತು ತೋರುತ್ತಿರುವ ವರ್ತನೆಗಳು ನಿಜವಾಗಿಯೂ ಆಘಾತಕಾರಿಯಾಗಿವೆ ಮತ್ತು ಜನರ ನಿದ್ದೆಗೆಡಿಸುವಂತಿವೆ. 'ಎಂಟು ನೂರು ವರ್ಷಗಳ ನಂತರ ಭಾರತದಲ್ಲಿ ಹಿಂದೂಗಳ ಆಡಳಿತ ಬಂದಿದೆ' ಎಂಬ ಈ ಸಂಸ್ಥೆಗಳ ಅಧಿಪತಿಯಂತಿರುವ ಆರೆಸ್ಸೆಸ್ಸಿನ ಪ್ರಮುಖ ಮೋಹನ ಭಾಗವತ್‌ರ ವಿಕೃತ ಮಾತು ಈ ಎಲ್ಲ ಮಾತುಗಳ ಮತ್ತು ವರ್ತನೆಗಳ ಕೇಂದ್ರಬಿಂದುವಾಗಿದೆ. ಅತ್ಯಂತ ಪ್ರಚೋದನಕಾರಿಯೂ ವಿಚ್ಛಿದ್ರಕಾರಿಯೂ ಆದ ಈ ಮಾತು ನಮ್ಮ ರಾಷ್ಟ್ರೀಯ ಹೋರಾಟದ ಮೌಲ್ಯಗಳನ್ನು ಆಧರಿಸಿ ನಾವು ರೂಪಿಸಿಕೊಂಡ ಸಂವಿಧಾನದ ಮುಖದ ಮೇಲೇ ಪ್ರಹಾರ ಮಾಡಿದಂತಿದೆ. ನಮ್ಮ ರಾಷ್ಟ್ರೀಯ ಹೋರಾಟದಲ್ಲಿ ಭಾಗವಹಿಸಲು ನಿರಾಕರಿಸಿ ಆಯಕಟ್ಟಿನ ಸಂದರ್ಭಗಳಲ್ಲಿ ವಸಾಹತು ಸರ್ಕಾರದೊಂದಿಗೆ ಶಾಮೀಲಾಗಿದ್ದ ಹಿಂದೂ ಪುರೋಹಿತಶಾಹಿ ಶಕ್ತಿಗಳ ವಾರಸುದಾರರಾಗಿರುವ ಇವರು, ಇಂತಹ ಮಾತುಗಳ ಮೂಲಕ ರಾಷ್ಟ್ರೀಯ ಹೋರಾಟದ ನೆನಪನ್ನೇ ಅಳಸಿ ಹಾಕಲು ಹೊರಟಿರುವುದು ಸಹಜವೇ ಆಗಿದೆ. ಇವರು ಮಹಾತ್ಮ ಗಾಂಧಿ ಜನ್ಮದಿನವನ್ನು ಸ್ವಚ್ಛತಾ ದಿನವನ್ನಾಗಿ ಕುಬ್ಜಗೊಳಿಸಿದಾಗಲೇ, ನೆಹ್ರೂ ಜನ್ಮ ದಿನವನ್ನು ಮಕ್ಕಳ ದಿನಾಚರಣೆಯ ಬದಲಾಗಿ ಗುರುಕುಲ ದಿನವನ್ನಾಗಿ ಆಚರಿಸಲಾರಂಭಿಸಿದಾಗಲೇ ಈ ಅಪಾಯದ ಸೂಚನೆಗಳು ದೊರೆತಿದ್ದವು.

ಈ ದೊಡ್ಡ ಹುನ್ನಾರದೊಂದಿಗೇ, ಈ ಸಂಸ್ಥೆಗಳು, ಹಿಂದೂ ರಾಷ್ಟ್ರ ಕಟ್ಟುವ, ಗೋಡ್ಸೆ ಮಂದಿರ **ನಿರ್ಮಿಸುವ**, ರಾಮನನ್ನು ನಂಬದವರನ್ನು ಅಸಭ್ಯ ಮಾತಿನ ವರಸೆಯಲ್ಲಿ 'ಅಡ್ಡ ಹುಟ್ಟಿದವರು' ಎಂದು ಕರೆಯುವ, ಅಮಾಯಕ ಮುಸ್ಲಿಂ ಯುವಕನನ್ನು ರಸ್ತೆಯಲ್ಲಿ ಕೊಚ್ಚಿ ಹಾಕಿದ ರಕ್ತಪಿಪಾಸುವನ್ನು 'ಹಿಂದೂ ಶೌರ್ಯ ಪ್ರಶಸ್ತಿ'ಯಿಂದ ಅಲಂಕರಿಸುವ, ತಮ್ಮ ನಾಯಕ ಅಟಲ್ ಬಿಹಾರಿ ವಾಜಪೇಯಿಯವರ ಜನ್ಮದಿನದ ನೆಪ ಮಾಡಿಕೊಂಡು ಕ್ರಿಸ್ಮಸ್ ದಿನದ ರಜೆಯನ್ನು ರದ್ದುಗೊಳಿಸುವ, ಅಮಾಯಕ ಬಡ ಮುಸ್ಲಿಂ ಗುಂಪುಗಳಿಗೆ ಬಿಪಿಎಲ್ ಕಾರ್ಡ್ ಮುಂತಾದ ಸರ್ಕಾರಿ ಆಮಿಷಗಳನ್ನೊಡ್ಡಿ ಅವರನ್ನು 'ಘರ್‌ವಾಪಸಿ' ಹೆಸರಿನಲ್ಲಿ ಮರುಮತಾಂತರಗೊಳಿಸುವ ಮಾತು ಮತ್ತು ವರ್ತನೆಗಳಲ್ಲಿ ತೊಡಗಿದ್ದಾರೆ. ಇದೆಲ್ಲವನ್ನೂ ಸುಬ್ರಮಣ್ಯ ಸ್ವಾಮಿ ಎಂಬ ಕುತ್ಸಿತ ಬುದ್ಧಿಗೆ ಹೆಸರಾದ ಬಿಜೆಪಿ ವಕ್ತಾರ ರಾಷ್ಟ್ರೀಯ ಟಿ.ವಿ. ವಾಹಿನಿಗಳಲ್ಲಿ 'ಈವರೆಗೆ ಹಿಂದೂಗಳು ಸಾಕಷ್ಟು ನೊಂದಿದ್ದಾರೆ. ಆ ನೋವನ್ನೀಗ ಪರಿಹರಿಸಿಕೊಳ್ಳುವ ಕಾಲ ಬಂದಿದೆ' ಎಂಬ ಮಾತುಗಳ ಮೂಲಕ ಹಿಂದೂ ಸಮುದಾಯದಲ್ಲಿ ಹುಸಿ ಹುತಾತ್ಮತೆಯನ್ನು ಪ್ರಚೋದಿಸಿ ಭಾವೋನ್ಮಾದದ ವಾತಾವರಣವನ್ನುಂಟು ಮಾಡುತ್ತಿದ್ದಾರೆ. ಅಷ್ಟೇ ಅಲ್ಲ, 'ಮೋದಿ ನೇತೃತ್ವದ ಬಿಜೆಪಿ ಅಭಿವೃದ್ಧಿಯ ಜೊತೆಗೇ ಹಿಂದುತ್ವವನ್ನು ತನ್ನ ಚುನಾವಣಾ ಕಾರ್ಯಕ್ರಮವನ್ನಾಗಿ ಮಂಡಿಸಿತ್ತು ಎಂದು ಈಗ ಘಂಟಾಘೋಷವಾಗಿ ಹೇಳುತ್ತಿದ್ದಾರೆ!

ಇವರೆಲ್ಲ ತಮ್ಮ ಮಾತು ವರ್ತನೆಗಳಲ್ಲಿ ಬಳಸುವ ಭಾರತ, ಹಿಂದೂ ಧರ್ಮ ಎಂಬ ಶಬ್ದಗಳಿಗೆ ಏನರ್ಥ ಎಂಬುದೇ ಗೊತ್ತಾಗದಾಗಿದೆ. ಇವರ ಭಾರತ ಮಧ್ಯಕಾಲೀನ ಭಾರತವೂ, ಇವರ ಹಿಂದೂ ಧರ್ಮ ಆ ಕಾಲದಲ್ಲಿದ್ದ ವೈದಿಕ ಪುರೋಹಿತಶಾಹಿಯೂ ಆಗಿರುವಂತಿದೆ. ಆ ಕಾಲದ ಭಾರತಕ್ಕೂ ಮತ್ತು ಹಿಂದೂ ಧರ್ಮಕ್ಕೂ ಇವರ ಈಗಿನ ಮಾತು-ವರ್ತನೆಗಳಿಗೂ ಸಾಮ್ಯತೆ ಇರುವುದನ್ನು ಗಮನಿಸಿದರೆ ಭಯವಾಗುತ್ತದೆ. ಇವರು ಪದೇ ಪದೇ ಉದ್ಧರಿಸುವ ಹಿಂದುತ್ವ ಕುರಿತ ಸುಪ್ರೀಂ ಕೋರ್ಟಿನ 'ಹಿಂದುತ್ವವೆಂದರೆ ಒಂದು ಜೀವನ ವಿಧಾನ' ಎಂಬ ವ್ಯಾಖ್ಯಾನದಲ್ಲಿ ಅಂತರ್ಗತವಾಗಿರುವ ಸ್ವಾತಂತ್ರ್ಯ ಮತ್ತು ಬಹುತ್ವಗಳಿಗೆ ತದ್ವಿರುದ್ಧವಾಗಿರುವ ಇವರ ಏಕರೂಪದ ಹಿಂದೂ ಧರ್ಮ, ಅದು ಕಾಲಕ್ರಮದಲ್ಲಿ ಮೈಗೂಡಿಸಿಕೊಂಡು ಬಂದ ಎಲ್ಲ ಸತ್ವ-ಸಂಪನ್ನತೆಗಳನ್ನೂ ಇಂಗಿಸಿಕೊಂಡು ಅನಾಧ್ಯಾತ್ಮಿಕವಾದ ಒಂದು ಬರಡು ರಾಜಕೀಯ ಅಸ್ತ್ರ ಮಾತ್ರವಾ ಕಂಡುಬರುತ್ತಿದೆ.

ನಿಜ, ಕಳೆದ ಅರವತ್ತು ವರ್ಷಗಳಲ್ಲಿ ಕಾಂಗ್ರೆಸ್ ಮತ್ತು ಕಮ್ಯೂನಿಸ್ಟರು ಎತ್ತಿಹಿಡಿಯುತ್ತಾ ಬಂದ ಸೆಕ್ಯುಲರಿಸಂ ವಕ್ರವಾಗಿತ್ತು. ಅವರು ಅಲ್ಪಸಂಖ್ಯಾತರಿಗೆ, ವಿಶೇಷವಾಗಿ ಮುಸ್ಲಿಮರಿಗೆ ರಚನಾತ್ಮಕವಾಗಿ ಏನನ್ನೂ ಮಾಡದಿದ್ದರೂ, ಅವರ ಮತೀಯ ನಾಯಕರ ಹುಚ್ಚಾಟಗಳನ್ನು ಸಹಿಸುತ್ತಲೇ, ಕೆಲವೊಮ್ಮೆ ಪ್ರೋತ್ಸಾಹಿಸುತ್ತಲೇ ಬರುತ್ತಾ ತಮ್ಮ ಸೆಕ್ಯುಲರಿಸಂ ಕುರಿತ ಬದ್ಧತೆಯನ್ನು ಅನುಮಾನಾಸ್ಪದಗೊಳಿಸಿಕೊಳ್ಳುತ್ತಲೇ ಹೋದರು. ಇಂದು ಜಗತ್ತಿನಲ್ಲಿ ಇಸ್ಲಾಂ ಧರ್ಮದ ಉತ್ಥಾನದ ಹೆಸರಿನಲ್ಲಿ ನಡೆಯುತ್ತಿರುವ ನರಹತ್ಯೆ, ನಿದಿಷ್ಟವಾಗಿ ಮೊನ್ನೆ ಪೆಷಾವರ್‌ನಲ್ಲಿ ನಡೆದ ಭೀಕರ ಸಾಮೂಹಿಕ ಶಿಶು ಹತ್ಯೆ ಇಸ್ಲಾಂ ಧರ್ಮದ ಅಧ್ಯಾತ್ಮಿಕ ಸತ್ವವನ್ನೇ ಪ್ರಶ್ನೆ ಮಾಡುವಂತಾಗಿದೆ. ಈ ಬಗ್ಗೆ ಮುಸ್ಲಿಂ ಧರ್ಮ ಚಿಂತಕರಿಂದಲೇ ಚರ್ಚೆ ಆರಂಭವಾಗಬೇಕಿತ್ತು. ಆದರೆ ನಮ್ಮ ಸೆಕ್ಯುಲರಿಸಂ ಅಂತಹ ವಾತಾವರಣವನ್ನು ನಿರ್ಮಿಸಲು ವಿಫಲವಾಗಿದೆ ಎಂದರೆ ಅದು ಈವರೆಗೆ ರಾಷ್ಟ್ರ ಆಚರಿಸಿಕೊಂಡ ಸೆಕ್ಯುಲರಿಸಂನ ಸೋಲು ಎಂದೇ ಹೇಳಬೇಕಾಗುತ್ತದೆ.

ಅಂದ ಮಾತ್ರಕ್ಕೆ ಹಿಂದೂಗಳೆನಿಸಿಕೊಂಡವರು ಸೆಕ್ಯಲರಿಸಂನ್ನು ವಿರೋಧಿಸಬೇಕೆಂದೇನೂ ಅಲ್ಲವಲ್ಲ? ಹಾಗೆ ಮಾಡಿದರೆ ಅದು ಅವಕಾಶದ ದುರುಪಯೋಗ ಮಾತ್ರವಾಗುತ್ತದೆ. ಬದಲಿಗೆ, ಬಹುಮತಗಳಿರುವ, ಬಹು ಸಂಸ್ಕೃತಿಗಳಿರುವ ಈ ದೇಶದಲ್ಲಿ ಅದು ಜನಾಭ್ಯುದಯಕಾರಿ ಆಡಳಿತದ ದೃಷ್ಟಿಯಿಂದ ಅತ್ಯಗತ್ಯವಾಗಿದ್ದು, ಅದನ್ನು ಸಮತೋಲಿತಗೊಳಿಸುವ ವಿಧಾಯಕ ಕೆಲಸಕ್ಕೆ ಮುಂದಾಗಬೇಕೇ ಹೊರತು, ಇಸ್ಲಾಂ ಧರ್ಮದ ಮಾದರಿಯನ್ನು ಅನುಕರಿಸ ಹೊರಡುವುದಲ್ಲ; ಹಿಂದೂ ಧರ್ಮವನ್ನು ಒಂದು ಬರಡು ರಾಜಕೀಯ (ಲೌಕಿಕ) ಅಸ್ತ್ರವನ್ನಾಗಿ ಮಾಡುವುದಲ್ಲ. ಅದು ಹಿಂದೂ ಧರ್ಮಕ್ಕೇ ಮಾಡುವ ಅಪಚಾರ.

ಆದರೆ ಇಂದಿನ ನಿಜವಾದ ತೊಂದರೆ, ಭಯ ಎಂದರೆ, ಈ ರಾಜಕೀಯ ಹಿಂದುತ್ವದ ಶಕ್ತಿಗಳ ಕುಚೇಷ್ಟೆಗಳ ಆತಂಕಗಳನ್ನು ನಿವಾರಿಸಿದ ವರಸೆಯಲ್ಲಿ ಜನರಿಗೆ ಸುಖ-ಶಾಂತಿಗಳ('ಅಚ್ಚೇ ದಿನ್'ಗಳ) ಅಭಿವೃದ್ಧಿಯ ಭರವಸೆ ನೀಡಿ

ಅಧಿಕಾರಕ್ಕೆ ಬಂದ ಮೋದಿ ಈಗ ಈ ಶಕ್ತಿಗಳನ್ನು ನಿಯಂತ್ರಿಸುವುದಿರಲಿ, ಏಕೆ ಖಂಡಿಸಲು ಮುಂದಾಗುತ್ತಿಲ್ಲ ಎನ್ನುವುದು. ಇದು ಮೋದಿಯವರೂ ಸೇರಿಕೊಂಡಂತೆ ರಚಿಸಲಾದ ಪೂರ್ವನಿಯೋಜಿತ ನಂಬಿಕೆ ದ್ರೋಹದ ಕಾರ್ಯಕ್ರಮವೇ? ಅಥವಾ ಆರು ತಿಂಗಳ ಆಡಳಿತದ ನಿಷ್ಫಲತೆಯನ್ನು ಮರೆಮಾಚಿಕೊಳ್ಳಲು ಎಬ್ಬಿಸಿರುವ ಸುಂಟರಗಾಳಿಯೇ? ಅರ್ಥವಾಗುತ್ತಿಲ್ಲ.

ಅಥವಾ ನಮ್ಮ ಪ್ರಾಚೀನರು ತಮ್ಮ ಅಪೂರ್ವ ಸೃಜನಶೀಲ ಕಲ್ಪನೆಯೊಂದಿಗೆ ರೂಪಿಸಿದ ಅದ್ಭುತ ಪುರಾಣ ಪ್ರತೀಕವೆನಿಸಿರುವ ಗಣೇಶ ಮೂರ್ತಿಯನ್ನು ನಮ್ಮ ಪುರಾತನ ಭಾರತೀಯ ವೈದ್ಯಶಾಸ್ತ್ರಜ್ಞರ ಪ್ಲಾಸ್ಟಿಕ್ ಸರ್ಜರಿ ಪರಿಣಿತಿಗೆ ಉದಾಹರಣೆಯೆಂದು–ಅದೂ ನಮ್ಮ ವೈದ್ಯ ವಿಜ್ಞಾನಿಗಳ ಸಭೆಯಲ್ಲಿ–ಹೇಳುವ ಹುಂಬ ಧೈರ್ಯದ ಪ್ರಧಾನಮಂತ್ರಿಯಿಂದ ಇದನ್ನೆಲ್ಲ ನಿರೀಕ್ಷಿಸಲಾಗದೆ? ಮೋದಿ ವಿರೋಧ ಪಕ್ಷಗಳ ಒತ್ತಡಕ್ಕೋ ಅಥವಾ ಜನರ ಒತ್ತಡಕ್ಕೋ ಮಣಿದು ಮುಂದೊಂದು ದಿನ ಇದನ್ನೆಲ್ಲ ಖಂಡಿಸಲೂಬಹುದು. ಆದರೆ ಆ ಹೊತ್ತಿಗೆ ದೇಶಕ್ಕೆ, ಸರ್ಕಾರಕ್ಕೆ ಘಾಸಿಯಂತೂ ಆಗಿರುತ್ತದೆ.

ಇನ್ನು ಈ ಸರ್ಕಾರ ಅಟಲ್ ಬಿಹಾರಿ ವಾಜಪೇಯಿಯವರಿಗೂ, ಮದನಮೋಹನ ಮಾಳವೀಯರಿಗೂ 'ಭಾರತ ರತ್ನ' ಪ್ರಶಸ್ತಿ ನೀಡಿದೆ. ಕಾಂಗ್ರೆಸ್ ಈಗಾಗಲೇ ಈ ಪ್ರಶಸ್ತಿಯನ್ನು ರಾಜಕೀಯವಾಗಿ ದುರಪಯೋಗಪಡಿಸಿಕೊಂಡು ಸಲ್ಲದ ಯಾರ್ಯಾರಿಗೋ ನೀಡಿರುವುದರಿಂದ ಈಗ ಈ ಪ್ರಶಸ್ತಿಗಳ ಬಗ್ಗೆ ಹೆಚ್ಚೇನೂ ಹೇಳಲು ಉಳಿದಿಲ್ಲ. ಈ ಒಂದು ಮಾತಿನ ಹೊರತಾಗಿ : 'ಕಾಂಗ್ರೆಸ್‌ಮುಕ್ತ ಭಾರತ'ದ ಪಣ ತೊಟ್ಟಿರುವ ಇವರೇಕೆ, ಹೇಗೆ ಯಾವ ಮುಜುಗರವೂ ಇಲ್ಲದೆ ಪಟೇಲ್, ಮಾಳವೀಯ, ಪಂತ್ ಮುಂತಾದ ಕಾಂಗ್ರೆಸ್ ನಾಯಕರಿಗೆ ಗಂಟುಬೀಳುವ ಒತ್ತಡಕ್ಕೆ ಒಳಗಾಗಿದ್ದಾರೆ ಎನ್ನುವುದು ಮಾತ್ರ ಅರ್ಥವಾಗುತ್ತಿಲ್ಲ.

**ಎರಡು ಪತ್ರಗಳು**

ಈ ತಿಂಗಳಲ್ಲಿ ಎರಡು ವಿಶಿಷ್ಟ ಪತ್ರಗಳು ಪತ್ರಿಕೆಗೆ ಬಂದಿವೆ. ಒಂದು, ಹಿರಿಯ ಗೆಳೆಯ ಮಂಗಳೂರಿನ ಎಂ. ಪ್ರಭಾಕರ ಜೋಷಿಯವರದ್ದು. ಅವರು ಕಳೆದ ಸಂಚಿಕೆಯಲ್ಲಿ ಒಂದೆರಡು ಕಡೆ ವ್ಯಕ್ತವಾಗಿದ್ದ ಸಾವರ್ಕರ್ ಕುರಿತ ಪ್ರತಿಕೂಲಕರ ಪ್ರಸ್ತಾಪಗಳಿಂದ ವಿಚಲಿತರಾಗಿ, ಗಾಂಧಿಯನ್ನು ಸಾವರ್ಕರ್‌ಗೆ ಹೋಲಿಸುತ್ತಾ ಹಲವು ಪ್ರಶ್ನೆಗಳನ್ನು ಹಾಕಿದ್ದಾರೆ ಮತ್ತು ಆ ಮೂಲಕ ಸಾವರ್ಕರ್‌ರ ವ್ಯಕ್ತಿತ್ವವನ್ನು ಬೆಳಗಲು ಯತ್ನಿಸಿದ್ದಾರೆ. ಅದಕ್ಕೆ ನಮ್ಮ ಪತ್ರಿಕೆಯಲ್ಲಿ ಅವಕಾಶವಿಲ್ಲ ಎಂದು ಈ ಮೂಲಕ ತಿಳಿಸಬಯಸುತ್ತೇವೆ. ಏಕೆಂದರೆ ಪತ್ರಿಕೆಗೆ ಸಾವರ್ಕರ್‌ರ ತಾತ್ವಿಕತೆಯ ಬಗ್ಗೆ **ಒದಿನ ಆಧಾರದ** ಒಂದು ಸ್ಪಷ್ಟ ನಿಲುವಿದೆ ಮತ್ತು ಅವರದ್ದು ಗಾಂಧಿಗೆ ಹೋಲಿಸುವಂತಹ ವ್ಯಕ್ತಿತ್ವವೇ ಅಲ್ಲ ಎಂದು ಖಚಿತವಾದ ನಂಬಿದೆ.

ಎರಡನೆಯ ಪತ್ರ ಲಿಂಗಾಯತ ಧರ್ಮ ಮಹಾಸಭಾದ ಧಾರವಾಡ ಜಿಲ್ಲಾ ಅಧ್ಯಕ್ಷ ಸಿ.ಬಿ. ಗೌಡರ **ಅವರ** ಪತ್ರ. ಅವರಿಗೆ ನಮ್ಮ ಪತ್ರಿಕೆಯ ವಿಚಾರಧಾರೆ ಮೆಚ್ಚುಗೆಯಾಗಿದೆಯೆಂದೂ, ಇದನ್ನು ಹೆಚ್ಚು ವ್ಯಾಪಕವಾಗಿ ಪಸರಿಸಲು ನಾವೊಂದು ದಿನಪತ್ರಿಕೆಯನ್ನು ಆರಂಭಿಸಬೇಕೆಂದೂ, ಅದರ ವಿತರಣೆಯ ಜವಾಬ್ದಾರಿಯನ್ನು ತಮ್ಮ ಸಂಘಟನೆ ವಹಿಸಿಕೊಳ್ಳಲು ಸಿದ್ಧವೆಂದೂ ತಿಳಿಸಿದ್ದಾರೆ. ಅವರ ಅಭಿಮಾನಕ್ಕೆ ಧನ್ಯವಾದ ತಿಳಿಸುತ್ತಾ, ಸದ್ಯಕ್ಕೆ ನಮಗೆ ಅಂತಹ ಯಾವ **ಇಚ್ಛೆಯಾಗಲೀ** ಉದ್ದೇಶವಾಗಲೀ ಇಲ್ಲ ಎಂದು ಅವರಿಗೆ ಈ ಮೂಲಕ ತಿಳಿಸಬಹುದಾಗಿದೆ!

ಓದುಗರೆಲ್ಲರಿಗೂ ಹೊಸ ವರ್ಷದ ಶುಭಾಶಯಗಳು.

**–ಸಂಪಾದಕ**

---

## ನಿಮ್ಮ ಪತ್ರ

ಪ್ರಿಯ ಸಂಪಾದಕರೇ,

ಡಿಸೆಂಬರ್ ೨೦೧೪ರ ಸಂಚಿಕೆಯ ಸಂಪಾದಕೀಯದಲ್ಲಿ ಜವಾಹರ್‌ಲಾಲ್ ನೆಹರೂರವರ ೧೨೫ನೇ ಜನ್ಮವರ್ಷವನ್ನು ನೆನಪಿಸಿಕೊಂಡಿರುವುದು ಸಮಯೋಚಿತವಾಗಿದೆ. ಹಾಗೆಯೇ ಅವರ ಅಧಿಕಾರವಧಿಯ ಗುಣದೋಷಗಳನ್ನೂ ಚರ್ಚಿಸುವ ಮೂಲಕ ನೆಹರೂ ಅವರ ೧೭ ವರ್ಷದ ಆಡಳಿತವನ್ನು ವಸ್ತುನಿಷ್ಠ ವಿಮರ್ಶೆಗೊಳಪಡಿಸಿದ್ದೀರಿ. ನೆಹರೂ ಅವರ ಕಟುವಿರೋಧಿಯಾಗಿದ್ದ ಲೋಹಿಯಾ ಕೂಡಾ "ನೆಹರೂ ಬಗ್ಗೆ ನನಗೆ ಕೆಲವು ಒಳ್ಳೆಯ ಮಾತುಗಳನ್ನು ಹೇಳುವುದಿದೆ, ಆದರೆ ಅದಕ್ಕೂ ಮೊದಲು ಅವರು ತಮ್ಮ ರಾಜಕೀಯ ಉತ್ತರಾಧಿಕಾರವನ್ನು ತಮ್ಮ ಮಗಳಿಗೆ ವಹಿಸುವುದಿಲ್ಲವೆಂದು ಖಾತ್ರಿಯಾಗಬೇಕು" ಎಂದಿರುವುದನ್ನು ನೆನಪಿಸಿಕೊಂಡರೆ ವಂಶರಾಜಕಾರಣದ ಮುನ್ಸೂಚನೆ ಆಗಲೇ ಅವರಿಗೆ ಸಿಕ್ಕಿತ್ತೆಂದು ಊಹಿಸಬಹುದು. ನೆಹರೂ ಅವರ ಅನಾರೋಗ್ಯದ ಸಂದರ್ಭದಲ್ಲಿ ತಮ್ಮ ಉತ್ತರಾಧಿಕಾರಿಯ ಕುರಿತು ಕುಲದೀಪ್ ನಯ್ಯರ್ ಕೇಳಿದ ಪ್ರಶ್ನೆಗೆ "ತಮ್ಮ ಸಾವು ಹತ್ತಿರದಲ್ಲಿಯೇ ಸಂಭವಿಸಿದರೆ, ಲಾಲ್ ಬಹದ್ದೂರ್ ಶಾಸ್ತ್ರಿ ಅಧಿಕಾರ ವಹಿಸಿಕೊಳ್ಳುತ್ತಾರೆ, ಒಂದು ವರ್ಷದ ನಂತರವಾದರೆ ಇಂದಿರಾಗಾಂಧಿ ಪ್ರಧಾನಿಯಾಗುತ್ತಾರೆ" ಎಂಬ ಮಾತುಗಳು ನೆಹರೂ ಅವರ ಅಂತರಂಗವನ್ನು ಬಿಚ್ಚಿಡುತ್ತವೆ.

**–ಎನ್.ಎಂ. ಕುಲಕರ್ಣಿ**, ಹೆಗ್ಗೋಡು

ಅನಂತಮೂರ್ತಿಯವರ ಕೊನೆಯ ಪುಸ್ತಕದ ಬಗೆಗಿನ ನಿಮ್ಮ ಅಭಿಪ್ರಾಯಗಳು ಅತ್ಯಂತ ತಾರ್ಕಿಕವಾಗಿವೆ. ಅಲ್ಲದೆ, ಭಾವನಾತ್ಮಕ ಮೆಚ್ಚಿಕೆಯ ಕುರುಡುತನದ ವಿರುದ್ಧದ ಎಚ್ಚರಿಕೆಯ ಮಾತುಗಳೂ ಆಗಿವೆ.

**–ಡಾ. ವಿಜಯಾ**, ಬೆಂಗಳೂರು.

ಗಾಂಧಿ ಇಂಗ್ಲೆಂಡ್‌ನಲ್ಲಿದ್ದ ಭಾರತೀಯ ದೇಶಭಕ್ತ ಯುವಕರ ಗುಂಪನ್ನು(ಅದು ಸಾವರ್ಕರ್ ಗುಂಪು) ಭೇಟಿಯಾದ ನಂತರ ಆ ಗುಂಪಿನ ವಾದಕ್ಕೆ ಉತ್ತರವಾಗಿ 'ಹಿಂದ್ ಸ್ವರಾಜ್' ಬರೆದರಲ್ಲವೆ? ಈ ತರಹ ಗಾಂಧಿ ಸಾವರ್ಕರ್ ಮುಖಾಮುಖಿ ಗಾಂಧೀಜಿ ಭಾರತಕ್ಕೆ ಮರಳಿ ಸ್ವಾತಂತ್ರ್ಯ ಹೋರಾಟದ ನೇತೃತ್ವ ವಹಿಸಿಕೊಳ್ಳುವ ಬಹು ಮುಂಚೆಯೇ ಆರಂಭವಾಗಿ ಗಾಂಧಿ ಸಾವಿನವರೆಗೂ ಮುಂದುವರೆಯಿತೆಂದು ಹೇಳಬಹುದಲ್ಲವೇ? ಈ ಬಗ್ಗೆ ವ್ಯಾಪಕ ಚರ್ಚೆಯಾಗಬೇಕು. ನೀವು ಸಂಪಾದಕೀಯದಲ್ಲಿ ಹೇಳಿದಂತೆ ಸಾವರ್ಕರ್ ಕಣ್ಕಟ್ಟಿನಲ್ಲಿ ಗಾಂಧಿಯನ್ನೂ ಸೇರಿಸಿಕೊಂಡುಬಿಟ್ಟರೆ ಎಂತಹ ಅಪಾಯಗಳಿಗೆ ದಾರಿಯಾದೀತು. ನಿಜಕ್ಕೂ ಗಾಬರಿಯಾಗುತ್ತದೆ.

**–ಅಪೂರ್ವ ಡಿ'ಸಿಲ್ವ**, ಚಾಮರಾಜನಗರ

ಕಳೆದ ಸಂಚಿಕೆಯಲ್ಲಿ ಅಂಬೇಡ್ಕರ್ ಬಗ್ಗೆ ಬಂದ ಎರಡು ಲೇಖನಗಳೂ ಸಕಾಲಿಕವಾಗಿವೆ. ರಾಜೇಂದ್ರ ಚೆನ್ನಿಯವರು ದಲಿತ, ರೈತ ಚಳುವಳಿಗಳಿಗಿದ್ದ ಅಪೂರ್ವ ಸಾಮಾಜಿಕ–ರಾಜಕೀಯ ಅವಕಾಶಗಳು ಹೇಗೆ ತಪ್ಪಿ ಹೋಯಿತೆಂಬುದನ್ನು ನಿಖರವಾಗಿ ಗುರುತಿಸಿದ್ದಾರೆ. ಹರ್ಷ ಮಂದರ್ ಅವರು ನಮ್ಮ ಸಂವಿಧಾನದ ಮೂಲ ಆಶಯಗಳಿಗೆ ವಿರುದ್ಧವಾಗಿರುವ ನಮ್ಮ ಮತಧರ್ಮಗಳ ಗಂಡಾಂತರಕಾರಿ ನಿಲುವುಗಳನ್ನು ಸ್ಪಷ್ಟ ಮಾಡಿದ್ದಾರೆ. ಈ ಲೇಖನದ ಸಮರ್ಥ ಅನುವಾದ (ಡಾ. ಸಿರಾಜ್ ಅಹಮದ್) ಖುಷಿ ನೀಡಿತಲ್ಲದೆ, ರೋಕಡೆಯವರ ಕವನದ ಸಾಲುಗಳು ಮನಸ್ಸನ್ನು ತಟ್ಟಿದವು.

ನನ್ನಂತಹ 'ಹಳೆಯ ಮನುಷ್ಯ'ನಿಗೆ 'ಹೊಸ ಮನುಷ್ಯ' ಹಲವು ಹೊಸ ವಿಚಾರಗಳನ್ನು ತಿಳಿಸುತ್ತಿದ್ದಾನೆ.

**–ಎಂ.ಬಿ. ನಟರಾಜ್**, ಶಿವಮೊಗ್ಗ

'ಸಮಕಾಲೀನ'ದಲ್ಲಿನ ನಿಮ್ಮ ಸಂಪಾದಕೀಯ ಬರಹ ಒಂದು ಸ್ವತಂತ್ರ ಲೇಖನವಾಗಿಯೇ ಓದಿಸಿಕೊಂಡು ಹೋಯಿತು. ಇಂದಿನ ಮೋದಿಯ ಕಣ್ಕಟ್ಟಿನ ರಾಜಕಾರಣದ ಎದುರು ನಾವು ಹೇಗೆ ಗಾಂಧಿ–ಅಂಬೇಡ್ಕರ್ ಮುಖಾಮುಖಿಯನ್ನು ಹೊಸದಾಗಿ ಅನುಸಂಧಾನಿಸಿಕೊಂಡು ಮುನ್ನಡೆಯಾಗಬೇಕಾಗಿದೆ ಎಂಬುದರ ನೀವು ನಮ್ಮ ದಲಿತ ಚಳುವಳಿಯ ಚರಿತ್ರೆಯ ಹಿನ್ನೆಲೆಯಲ್ಲಿ ಬಹು ಮುಖ್ಯವೆನಿಸುವ ಮಾತುಗಳನ್ನಾಡಿದ್ದೀರಿ. ಆದರೆ ಕೇಳಿಸಿಕೊಳ್ಳಬೇಕಾದವರು ಕೇಳಿಸಿಕೊಳ್ಳುವ ಧೈರ್ಯ–ಪ್ರಾಮಾಣಿಕತೆಗಳನ್ನು ತೋರುತ್ತಾರೆಯೇ?

**–ಎಂ.ಎನ್. ನಾಗರಾಜ**, ಮೈಸೂರು

ನವೆಂಬರ್ ಸಂಚಿಕೆಯಲ್ಲಿ ದಿ. ಹೆಚ್. ಗಣಪತಿಯಪ್ಪನವರಿಗೆ ನುಡಿ ನಮನ ಸಲ್ಲಿಸುತ್ತಾ, ಅವರು ಆರಂಭಿಸಿದ ಕಾಗೋಡು ಸತ್ಯಾಗ್ರಹವನ್ನು ಸ್ವಾತಂತ್ರ್ಯೋತ್ತರ ಭಾರತದ ಮೊದಲ ಭೂ ಹೋರಾಟ ಎಂದಿದ್ದೀರಿ. ಆದರೆ ಅದಕ್ಕೆ ಮುನ್ನವೇ ಗಣಪತಿಯಪ್ಪನವರ ಹುಟ್ಟು ಜಿಲ್ಲೆಯಾದ ಉತ್ತರ ಕನ್ನಡದಲ್ಲಿ ದಿನಕರ ದೇಸಾಯಿಯವರ ನೇತೃತ್ವದಲ್ಲಿ ರೈತ ಭೂ ಹೋರಾಟ ಆರಂಭವಾಗಿತ್ತು ಮತ್ತು ಆ ಸ್ಫೂರ್ತಿಯಲ್ಲೇ ಅವರು ಕಾಗೋಡಿನಲ್ಲೂ ಭೂ ಹೋರಾಟಕ್ಕೆ ಭೂಮಿಕೆಯನ್ನು ಸಿದ್ಧಪಡಿಸಿದರು ಎಂದು ಹೇಳುವುದು ಹೆಚ್ಚು ಸೂಕ್ತವಾದೀತು.

**–ಅಮ್ಮೆಂಬಳ ಆನಂದ**, ಮಣಿಪಾಲ

ಸಾವಿರ ಕೊನೆಗಳನ್ನು ಕಟ್ಟಲು ತುಂಬಿದ ಅರಮನೆಯ ನಡುಮನೆಯಲ್ಲೊಂದು ಸಣ್ಣ ದೀಪ ಹಚ್ಚುವ ಕೆಲಸ ನಿಮ್ಮದು. ಈ ಕೆಲಸದಲ್ಲಿ ನಿಮ್ಮ ಪ್ರಯತ್ನ ಅದೆಷ್ಟೇ ನಿರಾಶಾದಾಯಕವಾಗಿದ್ದರೂ, ಸ್ವಾಗತಾರ್ಹ. ಅದಷ್ಟೇ ಭವಿಷ್ಯದ ಆಶಾಕಿರಣ. ನಿಮ್ಮ ಜೊತೆ ನಾವಿರುವುದರ ಸಂಕೇತವಾಗಿ ಒಂದು ಸಣ್ಣ ಮೊತ್ತ ಕಳಿಸುತ್ತಿರುವೆ. ಸ್ವೀಕರಿಸಿ.

**–ಗಂಗಾಧರ ಬೀಚನಹಳ್ಳಿ**, ಬೆಂಗಳೂರು

## ನಮ್ಮ ಸಮಾಜವಾದಿಗಳು

# ತೆರೆಮರೆಯ ಸಮಾಜವಾದಿ ಕೆ. ಕೃಷ್ಣಗೋಪಾಲ್



**ಕೆ.** ಕೃಷ್ಣಗೋಪಾಲ್ ಬಗ್ಗೆ ನಾನು ಮೊದಲು ಕೇಳಿದ್ದು, ಅವರನ್ನು ತಮ್ಮ ಶಾಲಾದಿನಗಳಲ್ಲಿ ತಮ್ಮೂರು ರಾಮನಗರದ ಸುತ್ತಮುತ್ತ ಕಂಡಿದ್ದ ಗೆಳೆಯ ಶಿವರಾಮು ಕಾಡನಕುಪ್ಪೆ ಅವರಿಂದ, ಒಂದು ವರ್ಷದ ಹಿಂದೆ. ಆ ನೆನಪಿನಲ್ಲಿದ್ದಾಗ ಕಾಳೇಗೌಡ ನಾಗವಾರ ಅವರು ಸಂಪಾದಿಸಿರುವ ಶಾಂತವೇರಿ ಗೋಪಾಲಗೌಡ ನೆನಪಿನ ಸಂಪುಟದಲ್ಲಿ ಕೃಷ್ಣಗೋಪಾಲರ ಲೇಖನವೊಂದನ್ನು ಓದಿದಾಗ ಈ ಮನುಷ್ಯನ ಬಗ್ಗೆ ನನ್ನ ಆಸಕ್ತಿ ಹೆಚ್ಚಿತು. ಕಾರಣ, ಆಳದ ಸಮಾಜವಾದಿಯಂತೆ ಅವರು ಗೋಪಾಲಗೌಡರನ್ನು ಕುರಿತ ತಮ್ಮ ನೆನಪನ್ನು ಎಷ್ಟು ಸ್ಪಂದನಶೀಲವಾಗಿ ತಿಳಿಗನ್ನಡದಲ್ಲಿ ಬರೆದಿದ್ದರೆಂದರೆ, ಅವರು ಒಳ್ಳೆಯ ಕಥೆಗಾರರೂ ಆಗಿ ರಾಮನಗರ ಸೀಮೆಯಲ್ಲಿ ಹೆಸರು ಮಾಡಿದ್ದರು ಎಂಬ ಕಾಡನಕುಪ್ಪೆ ಅವರ ಮಾತು ಥಟ್ಟನೆ ನೆನಪಾಯಿತು. ಕೃಷ್ಣಗೋಪಾಲರ ಬಗ್ಗೆ 'ನಮ್ಮ ಸಮಾಜವಾದಿಗಳು' ಮಾಲೆಗಾಗಿ ಬರೆದುಕೊಡುವಂತೆ ಶಿವರಾಮು ಅವರಿಗೆ ದುಂಬಾಲು ಬಿದ್ದೆ. ತಮ್ಮ ತೀವ್ರ ಅಸ್ವಸ್ಥತೆಯ ನಡುವೆಯೂ ಅವರು ಪ್ರಯತ್ನಪಟ್ಟರಾದರೂ, ಕೃಷ್ಣಗೋಪಾಲರ ಯಾವ ಬಂಧು ಮಿತ್ರರೂ ಪತ್ತೆಯಾಗದೆ, ಅವರ ಪೂರ್ವಾಪರಗಳ ಮಾಹಿತಿ ಸಿಗಲಿಲ್ಲ. ಕೊನೆಗೆ ನಾನು ಡಾ. ವಿಷ್ಣುಮೂರ್ತಿ ಅವರು ಸಂಪಾದಿಸಿ ಪ್ರಕಟಿಸಿರುವ ಗೋಪಾಲಗೌಡರ ಡೈರಿಯಲ್ಲೇನಾದರೂ ಅವರ ಉಲ್ಲೇಖ–ಪ್ರಸ್ತಾಪ–ವಿವರಗಳು ಸಿಕ್ಕಿಯಾವೇನೋ ಎಂದು ಹುಡುಕಿದೆ.

ಹೌದು, ಡೈರಿಯ ಹಲವೆಡೆ ಕೃಷ್ಣಗೋಪಾಲರ ಪ್ರಸ್ತಾಪವಿದೆ. ಈ ಪ್ರಸ್ತಾಪಗಳನ್ನು ಮೇಲೆ ಉಲ್ಲೇಖಿಸಿದ ಕೃಷ್ಣಗೋಪಾಲರ ಲೇಖನದ ಜೊತೆಯಾಗಿ ಓದಿದಾಗ ಅವರದೊಂದು ಸಂಕ್ಷಿಪ್ತ ವ್ಯಕ್ತಿಚಿತ್ರ ಸಿಗುತ್ತದೆ. ಅವರು ಕಾಗೋಡು ಸತ್ಯಾಗ್ರಹದ ಕಾಲದಿಂದಲೂ ಗೋಪಾಲಗೌಡರ ಅತಿ ನಂಬಿಕಸ್ಥ ಶಿಷ್ಯರಲ್ಲಿ ಒಬ್ಬರಾಗಿದ್ದರು. ಹಾಗಾಗಿಯೇ ಗೌಡರು ಈ ಶಿಷ್ಯ ಬರೆದು ಕಳಿಸಿದ ಯಾವ ಶಿಫಾರ್ಸು ಪತ್ರವನ್ನೂ ಕಡೆಗಣಿಸದೆ ತಕ್ಷಣ ಆ ಬಗ್ಗೆ ಕಾರ್ಯಪ್ರವೃತ್ತರಾಗುತ್ತಿದ್ದರು. ಸಮಾಜವಾದಿ ಪಕ್ಷ ಹಮ್ಮಿಕೊಳ್ಳುತ್ತಿದ್ದ ಸರ್ಕಾರಿ ಕಛೇರಿಗಳ ಮುತ್ತಿಗೆ, ಜೈಲ್ ಭರೋ, ಲಾಟರಿ ವಿರೋಧಿ ಚಳುವಳಿ, ಕನ್ನಡ ಆಡಳಿತ ಭಾಷಾ ಚಳುವಳಿ, ಕೃಷಿಕೂಲಿಕಾರರ ಪರವಾದ ಭೂ ಹೋರಾಟ ಇತ್ಯಾದಿಗಳನ್ನು ಬೆಂಗಳೂರು ಜಿಲ್ಲೆಯ ಚನ್ನಪಟ್ಟಣ–ರಾಮನಗರ ಸುತ್ತಮುತ್ತಲ ಪ್ರದೇಶಗಳಲ್ಲಿ ಸಂಘಟಿಸುತ್ತಿದ್ದರು. ಉರಗನಹಳ್ಳಿ ಇನಾಂ ಜಮೀನು ಹೋರಾಟ ಇವುಗಳಲ್ಲಿ ಪ್ರಮುಖವಾದದ್ದು. ಇದರ ಫಲವಾಗಿ ಸುತ್ತಮುತ್ತಲ ಹಳ್ಳಿಗಳ ಐದುನೂರು ಗೇಣಿ ರೈತ ಕುಟುಂಬಗಳು ಸುಮಾರು ಮೂರು ಸಾವಿರ ಎಕರೆ ಜಮೀನಿನ ಹಕ್ಕು ಪಡೆದವು.

ಇದನ್ನೆಲ್ಲ ಸಂಗ್ರಹಿಸುವ ಹೊತ್ತಿಗೆ ಆಕಸ್ಮಿಕವಾಗಿ ಮಾತಿಗೆ ಸಿಕ್ಕ ಕೋಣಂದೂರು ಲಿಂಗಪ್ಪನವರ ಬಳಿ ಕೃಷ್ಣಗೋಪಾಲರ ಬಗ್ಗೆ ಪ್ರಸ್ತಾಪಿಸಿದೆ. ಅವರು ಗೋಪಾಲ ತಮಗೆ ಚೆನ್ನಾಗಿ ಗೊತ್ತೆಂದೂ, ಅವರ ಬಗ್ಗೆ ತಮಗೆ ನೆನಪಿರುವುದನ್ನಾದರೂ ಬರೆದುಕೊಡುವುದಾಗಿಯೂ ಹೇಳಿ ನನ್ನಲ್ಲಿ ಆಸೆ ಹುಟ್ಟಿಸಿದರು. ಇದನ್ನು ಕಾಡನಕುಪ್ಪೆಯವರಿಗೂ ತಿಳಿಸಿದೆ. ಅವರಿಗೂ ಸಂತೋಷವಾಯಿತು. ಆದರೆ ಅವರಿಗೆ ಬಿಡುವಿಲ್ಲದ ಕೆಲಸ. ಮೂರು ಬಾರಿ ನೆನಪಿಸಿದರೂ ತಮ್ಮ ಗತಿಸಿದ ಕಾಮ್ರೇಡ್ ಬಗ್ಗೆ ಬರೆಯಲು ಪ್ರೇರಣೆ ಒದಗಲಿಲ್ಲ. ಬೇಸರವೆನಿಸಿ, ಕಾಡನಕುಪ್ಪೆಯವರಿಗೆ ಫೋನಾಯಿಸಿದೆ. ಅವರಿಗೆ ಏನನಿಸಿತೋ ಏನೋ, ಒಂದೇ ಪಟ್ಟಿಗೆ ಕೂತು ತಮ್ಮ ನೆನಪನ್ನು ಬರೆದುಕೊಟ್ಟಿದ್ದಾರೆ. ಅದನ್ನು ಓದುವ ಮುನ್ನ ಗೋಪಾಲಗೌಡರ ಬಗ್ಗೆ ಕೃಷ್ಣಗೋಪಾಲ ಬರೆದ ಲೇಖನದ ಕೊನೆಯಲ್ಲಿ ಗೌಡರ ಅಂತ್ಯ ಸಂಸ್ಕಾರದ ಕೊನೆಯ ಕ್ಷಣಗಳನ್ನು ಅವರು ಹಿಡಿದಿಟ್ಟಿರುವ ರೀತಿಯನ್ನೂ ಗಮನಿಸಿ:

> **... ವಿದ್ಯುತ್ ಚಿತಾಗಾರಕ್ಕೆ ಮಾನವತಾವಾದಿಯ ಪವಿತ್ರ ದೇಹ ಹೋಯಿತು. ಗೌಡರ ದೇಹ ಬೂದಿಯಾಯಿತು. ಭಾಷಣ ಮಾಡಿದವರು, ಅಭಿಮಾನಿಗಳು ಚದುರಿ ಹೋದರು. ನಮ್ಮಿಬ್ಬರನ್ನು ಬಿಟ್ಟರೆ ಒಂದು ನರಪಿಳ್ಳೆಯೂ ಅಲ್ಲಿರಲಿಲ್ಲ. ಶಾಂತವೇರಿಯವರ ಅಣ್ಣನವರು ಬೂದಿ ತುಂಬಿದ ಮಡಕೆಯನ್ನು ಕಾರಿನಲ್ಲಿಟ್ಟುಕೊಂಡರು. ನಮ್ಮನ್ನೂ ಕಾರಿನಲ್ಲಿ ಕುಳ್ಳಿರಿಸಿಕೊಂಡರು. ಕೊನೆಗೆ ಅವರು ನಮ್ಮನ್ನು ಮೆಜೆಸ್ಟಿಕ್‌ನಲ್ಲಿ ಇಳಿಸಿ ಹೊರಟುಹೋದರು.**
>
> **ನಾನು ಬಹಳ ಹೊತ್ತು ಅಲ್ಲಿಯೇ ಇದ್ದು ಕಾರು ಹೋದ ದಿಕ್ಕನ್ನೇ ನೋಡುತ್ತಾ ನಿಂತೆ. ಬಡವರು, ರೈತರು, ಶ್ರಮಿಕರು, ದಲಿತರ, ತಬ್ಬಲಿ ಜಾತಿಗಳ ಕೈಹಿಡಿದಿದ್ದ ಅಪ್ರತಿಮ ಹೋರಾಟಗಾರ–ಮಾನವತೆಯ ಮಹಾಮೂರ್ತಿ ಶಾಂತವೇರಿ ಗೋಪಾಲಗೌಡರು ಇನ್ನಿಲ್ಲವಾಗಿದ್ದರು. ಲೋಹಿಯಾ–ಗೋಪಾಲಗೌಡರಿದ್ದ ಸಮಾಜವಾದಿ ಪಕ್ಷ ಕಾಲಗರ್ಭದಲ್ಲಿ ಮರೆಯಾಯಿತು..**

**–ಡಿಎಸ್ಸೆನ್**

## ಕೃಷ್ಣಗೋಪಾಲ್ : ನನ್ನ ನೆನಪಿನ ಚಿತ್ರ

**–ಪ್ರೊ. ಶಿವರಾಮು ಕಾಡನಕುಪ್ಪೆ**

ಅರವತ್ತರ ದಶಕ. ನಾನಾಗ ಹೈಸ್ಕೂಲ್ ವಿದ್ಯಾರ್ಥಿಯಾಗಿದ್ದೆ. ಒಮ್ಮೆ ರಾಮನಗರದ ಪುರಸಭೆಯ ಚುನಾವಣೆ ಬಂತು. ಕಾಂಗ್ರೆಸ್ಸಿನದೇ ದರಬಾರು. ಅದಕ್ಕೆ ಪ್ರತಿಯಾಗಿ ಸೆಡ್ಡು ಹೊಡೆದು ನಿಲ್ಲುವ ವಿರೋಧ ಪಕ್ಷಗಳೇ ಇರಲಿಲ್ಲ. ಪಕ್ಷೇತರರೆಂದು ಕೆಲವರು ಚುನಾವಣೆಗೆ ನಿಲ್ಲುತ್ತಿದ್ದರಷ್ಟೆ. ಆಗ ಆಲದಮರದ ಗುರುತಿನ ಮೇಲೆ ಚುನಾವಣೆಗೆ ಸ್ಪರ್ಧಿಸಿದ್ದ ಕೆ. ಕೃಷ್ಣಗೋಪಾಲನೆಂಬ ಮೂವತ್ತೈದು–ನಲವತ್ತರ ತರುಣನೊಬ್ಬ ನಮ್ಮಂಥ ಹುಡುಗರಿಗೆ ಆಕರ್ಷಣೀಯ ವ್ಯಕ್ತಿಯಾಗಿದ್ದ. ರಾಮನಗರದ ಚೌಕಗಳಲ್ಲಿ ಆತನು ಮಾಡುತ್ತಿದ್ದ ಭಾಷಣಗಳು ಇತರರಿಗಿಂತ ಭಿನ್ನವಾಗಿದ್ದವು. ಆತ ಬಡವರ ಬಗ್ಗೆ, ಅಸ್ಪೃಶ್ಯರ ಬಗ್ಗೆ, ವರ್ತಕ ಸಮುದಾಯದ ಬಗ್ಗೆ, ರಾಜಕಾರಣಿಗಳ ಗೋಸುಂಬೆತನದ ಬಗ್ಗೆ ಮಾತನಾಡುತ್ತಿದ್ದ. ಬೇರೆ ರಾಜಕಾರಣಿಗಳ ಬಾಯಿಂದ ಗಾಂಧಿ ಮತ್ತು ನೆಹರೂ ಗುಣಗಾನವನ್ನೇ ಕೇಳುತ್ತಿದ್ದ ನಮಗೆ ಕೃಷ್ಣಗೋಪಾಲರ ಮಾತುಗಳು ವಿಭಿನ್ನ ಧ್ವನಿಯಾಗಿ ಗೋಚರಿಸುತ್ತಿದ್ದವು. ಆದರೆ ಅವರು ಚುನಾವಣೆಯಲ್ಲಿ ಸೋಲುತ್ತಿದ್ದರು. ಅವರು ಯಾವ ಚುನಾವಣೆಯಲ್ಲೂ ಗೆಲ್ಲಲಾಗಲಿಲ್ಲವೆಂಬುದು ಸ್ವತಂತ್ರ ಭಾರತದ ಮತದಾರನ ವಿವೇಕವನ್ನು ಅನುಮಾನದಿಂದ ನೋಡುವ ಸಂಕೇತವಾಗಿತ್ತು.

ಚುನಾವಣೆಯಲ್ಲಿ ಸೋತರೂ ಕೃಷ್ಣಗೋಪಾಲ ಸುಮ್ಮನೆ ಮನೆಯಲ್ಲಿ ಕೂರುವ ವ್ಯಕ್ತಿಯಾಗಿರಲಿಲ್ಲ. ಜನಸಾಮಾನ್ಯರ ದುಃಖದುಮ್ಮಾನಗಳನ್ನು ಬಿಂಬಿಸುವ, ಅವರ ಸ್ಥಿತಿಯ ಅರಿವು ಮೂಡಿ ಜಾಗೃತರಾಗಬೇಕೆಂಬ ಅನೇಕ ಕರಪತ್ರಗಳನ್ನೂ ಕಿರುಹೊತ್ತಿಗೆಗಳನ್ನೂ ಬರೆದು ಪ್ರಕಟಿಸುತ್ತಿದ್ದರು. ನಾಲ್ಕಾರು ಮಂದಿ ತಮ್ಮ ಹಿಂಬಾಲಕರ ಜೊತೆ ಸೇರಿ ಯಾವುದೇ ಹಮ್ಮುಬಿಮ್ಮು ಇಲ್ಲದೆ ರಸ್ತೆಗಳಲ್ಲಿ ಅವುಗಳನ್ನು ಹಂಚುತ್ತಿದ್ದರು. ರಾಮನಗರದ ಸುತ್ತಮುತ್ತ ನಡೆಯುವ ಜಾತ್ರೆಗಳಲ್ಲಿ ಅವರ ಜನಜಾಗೃತಿಯ ಕಾರ್ಯಕ್ರಮವಿರುತ್ತಿತ್ತು. ಅಲ್ಲಿ ಅವರ ಭಾಷಣ, ಕರಪತ್ರಗಳ ಪ್ರಚಾರವಿರುತ್ತಿತ್ತು.



ಅವರಲ್ಲೊಬ್ಬರು ಕಲಾವಿದನಿದ್ದ; ಬರಹಗಾರನಿದ್ದ. ರಾಮನಗರದ ಸುತ್ತಲ ಗ್ರಾಮಗಳಲ್ಲಿ ನಡೆಯುತ್ತಿದ್ದ ಅಸ್ಪೃಶ್ಯತೆಯ ಕ್ರೂರತೆಯ ಬಗ್ಗೆ, ವಿಜಾತಿಗಳ ಪ್ರೇಮ ದುರಂತಗಳ ಬಗ್ಗೆ, ಹಸಿವಿನ ಯಾತನೆಯ ಬಗ್ಗೆ ಕತೆಗಳನ್ನು ಬರೆದು ಕಿರುಪುಸ್ತಕಗಳ ರೂಪದಲ್ಲಿ ಪ್ರಕಟಿಸಿ ಜನರಿಗೆ ಹಂಚುತ್ತಿದ್ದರು. ಸುಮಾರು ಅರ್ಧ ಶತಮಾನಗಳ ಹಿಂದೆ ನಾನು ಓದಿದ ಅವರ 'ಮೊಟ್ಟೆದೊಡ್ಡಿಯಲ್ಲಿ ಮೂರು ಮಕ್ಕಳ ಸಾವು' ಎಂಬ ಕತೆ ಇನ್ನೂ ನನ್ನ ಮನದಲ್ಲಿದೆ. ಅದರಲ್ಲಿ ಗ್ರಾಮ ಕ್ರೌರ್ಯಕ್ಕೆ ಒಳಗಾದ ತಾಯಿಯೊಬ್ಬಳು ತನ್ನ ಮಕ್ಕಳ ಸಮೇತ ಆತ್ಮಹತ್ಯೆಗೆ ಶರಣಾಗುವ ಹೃದಯ ಕಲಕುವ ಚಿತ್ರಣವಿದೆ. "ಈ ಸಾವಿಗೆ ಕಾರಣರಾರು? ಓದುಗರೇ, ಚಿಂತಿಸಿ, ಜಾಗೃತರಾಗಿ, ಎದ್ದೇಳಿ"

(೩ನೇ ಪುಟಕ್ಕೆ)

# ಪ್ರೊ. ಬಿ. ಕೃಷ್ಣಪ್ಪ ನೆನಪಿನ ಮಾಲೆ–೨೨

–ಇಂದಿರಾ ಬಿ. ಕೃಷ್ಣಪ್ಪ

## ಹೊಸ ಅಧ್ಯಾಯ ಸೃಷ್ಟಿಸಿದ ಒಂದು ಒಲವಿನ ವಿವಾಹ



**ನೆ**ನಪುಗಳೇ ಹಾಗೆ. ಕ್ರಮವಾಗಿ ಹೊಮ್ಮುವುದೇ ಇಲ್ಲ. ಗೋಜಲು ಗೋಜಲು ನೆನಪಿನೆಳೆಗಳನ್ನು ಒಂದೊಂದಾಗಿ ಬಿಡಿಸುವಾಗ ಎಷ್ಟೋ ಎಳೆಗಳು ತುಂಡಾಗಿವೆ, ಮತ್ತೊಂದಿಷ್ಟು ಒಂದರೊಳಗೊಂದು ಸಿಕ್ಕಿಕೊಂಡು ಕಗ್ಗಂಟಾಗಿವೆ. ಬಿಡಿಸಿದೊಂದೊಂದೇ ಎಳೆಯನ್ನಿಡಿದು 'ಹೊಸ ಮನುಷ್ಯ'ದಲ್ಲಿ ನೆನಪಿನ ಮಾಲೆ ಮರುಜೀವಣಿಯಾಗಿದೆ.

ಕರ್ನಾಟಕ ದಲಿತ ಸಂಘರ್ಷ ಸಮಿತಿ (ದಸಂಸ) ಚಿತ್ರದುರ್ಗ, ಚಿಕ್ಕಮಗಳೂರು, ಶಿವಮೊಗ್ಗ, ಮಂಗಳೂರು ಇತ್ಯಾದಿ ಜಿಲ್ಲೆಗಳಲ್ಲಿ ಅಂತರ ಜಾತೀಯ, ಅಂತರ ಧರ್ಮೀಯ, ಸರಳ ಸಾಮೂಹಿಕ ವಿವಾಹಗಳನ್ನು ಏರ್ಪಡಿಸುವ ಮೂಲಕ ಹಿಂದೂ ವಿವಾಹ ಪರಂಪರೆಗೆ, ಪರ್ಯಾಯ ವಿವಾಹ ಮಾದರಿಯನ್ನು ಸಮಾಜದೆದುರು ಸಾದರಪಡಿಸುತ್ತಾ ಸಾಗಿತ್ತು. ಚಿತ್ರದುರ್ಗದಲ್ಲಿ ನಡೆದ ದೇವದಾಸಿಯರ ಸಾಮೂಹಿಕ ವಿವಾಹಕ್ಕೆ ಹೋಗಬೇಕೆಂದು ಬಹಳ ಆಸೆಪಟ್ಟು ಕೃಷ್ಣಪ್ಪನವರಿಗೆ ಹೇಳಿದ್ದೆ. ಆದರೆ ಕಚೇರಿ ಕಾರ್ಯಭಾರ ನಾನು ಅಲ್ಲಿಗೆ ಹೋಗುವುದನ್ನು ತಡೆದಿತ್ತು. ನಂತರ ತುಮಕೂರಿನಿಂದ ಬಂದ "ಮತಾಂತರದ ನಡುವೆ ಹೊಸ ಸಮಾಜದ ಕಡೆಗೆ" ಕರೆಯೋಲೆ ನನ್ನಾಸೆಗೆ ವಾಹಕವಾಗಿ ಬಂದಿತ್ತು. ಅಂದು ತುಮಕೂರು ಜಿಲ್ಲಾ ಸಂಚಾಲಕರು, ಕವಿಯೂ, ಸಾಹಿತಿಯೂ ಆಗಿದ್ದ ಕೆ.ಬಿ. ಸಿದ್ದಯ್ಯ ಮತ್ತು ಗಂಗರಾಜಮ್ಮನವರ ಮದುವೆಯ ಸಭೆಯು ತುಮಕೂರು ಜಿಲ್ಲೆ ತಿಪಟೂರು ತಾಲ್ಲೂಕಿನ ಕುಂದೂರಿನಲ್ಲಿ ನಡೆಯುವುದಿತ್ತು. ಕೃಷ್ಣಪ್ಪ ಮತ್ತು ನಾನು ಸೂರ್ಯೋದಯದ ಮುನ್ನವೇ ಹೊರಟು, ಕುಂದೂರನ್ನು ತಲುಪಿದಾಗ ಮಟಮಟ ಮಧ್ಯಾಹ್ನವಾಗಿತ್ತು.

ಪ್ರಾಥಮಿಕ ಶಾಲೆಯ ಜಗುಲಿಯೇ ಮದುವೆಯ ಮಂಟಪ; ಶಾಲಾ ಆವರಣವೇ ಕಲ್ಯಾಣ ಮಂಟಪ; ಹಸಿರೆಲೆ ತೋರಣಗಳ ಶೃಂಗಾರ; ಹೋರಾಟದ ಹಾಡುಗಳೇ ಶುಭಮಂಗಳ ಗೀತೆಗಳು, ಖಂಜರ–ಹಲಗೆಗಳ ಬಡಿತವೇ ಮಂಗಳ ವಾದ್ಯಗಳಾಗಿದ್ದವು. ಪ್ರೊ. ಕೃಷ್ಣಪ್ಪನವರ ಅಧ್ಯಕ್ಷತೆ, ದೇವನೂರು ಮಹಾದೇವ, ಲಿಂಗದೇವರು ಹಳೆಮನೆ ಮುಖ್ಯ ಅತಿಥಿಗಳಾಗಿದ್ದ ಸಭೆಯಲ್ಲಿ, ಸಿದ್ದಯ್ಯ ಮತ್ತು ಗಂಗರಾಜಮ್ಮ ಹಾರ ವಿನಿಮಯ ಮಾಡಿಕೊಂಡು, ಸತಿಪತಿಗಳಾಗಿ ಜೀವನ ನಡೆಸುವ ಪ್ರತಿಜ್ಞೆಯೊಂದಿಗೆ ವೈವಾಹಿಕ ಜೀವನಕ್ಕೆ ಅಡಿಯಿಟ್ಟಿದ್ದರು. ಅಧ್ಯಕ್ಷತೆ ವಹಿಸಿದ್ದ ಕೃಷ್ಣಪ್ಪ ಮಾತನಾಡುತ್ತ, "ಜಾತಿ ವಿನಾಶ, ಅಂತರ್ಜಾತೀಯ ಹಾಗೂ ಉಪಜಾತಿಗಳ ನಡುವಿನ ವಿವಾಹ ಸಂಬಂಧಗಳು ಸಮುದಾಯಗಳ ನಡುವೆ ಪ್ರೀತಿ ಬೆಸೆಯುವ ಕೊಂಡಿಗಳಾಗಲಿ, ಹೊಸ ಸಮಾಜ ಚಿಗುರೊಡೆಯಲಿ, ಜಾತಿ–ಮತಗಳ ನಡುವಿನ ಕಂದರಗಳಲ್ಲಿ ಪ್ರೀತಿ ಒರತೆ ತುಂಬಲಿ" ಎಂದು ಹಾರೈಸಿದ್ದರು. ಬಂಧು–ಬಳಗ, ದಸಂಸ ಕಾರ್ಯಕರ್ತರ ಸಮೂಹದ ಶುಭಹಾರೈಕೆ ಮತ್ತು ಒಲವಿನಿಂದ ನಡೆದ ಈ ಸರಳ ವಿವಾಹ ಕುಂದೂರಿನ ಚರಿತ್ರೆಯಲ್ಲಿ ಹೊಸ ಅಧ್ಯಾಯವನ್ನೇ ಸೃಷ್ಟಿಸಿತ್ತು.

ಕುಂದೂರು ಅಸ್ಪೃಶ್ಯತೆ ವಿರುದ್ಧ ಸಮರ ಸಾರಿದ ನೆಲ. ಊರ ಮಧ್ಯದ ಕೆರೆ ನೀರನ್ನು ಹೊಲೆಮಾದಿಗರು ಬಳಸಿದರೆಂದು ಸಾಮಾಜಿಕ ಬಹಿಷ್ಕಾರ ವಿಧಿಸಿ, ಸವರ್ಣೀಯತೆಯನ್ನು ಮೆರೆದ ಭೂಮಿ. ಆ ಮಣ್ಣಿನಲ್ಲೇ ಹುಟ್ಟಿಬಂದ ತಿಮ್ಮಯ್ಯ ದಲಿತ ಸಂಘದ ಕಾರ್ಯಕರ್ತ. ಆತ ಸಾಮಾಜಿಕ ಬಹಿಷ್ಕಾರದ ವಿರುದ್ಧ ಪೋಲೀಸ್ ಠಾಣೆಗೆ ದೂರು ದಾಖಲಿಸಿ, ಆಪಾದಿತರ ಬಂಧನಕ್ಕೆ ಕಾರಣನಾಗಿದ್ದ. ದಲಿತರಲ್ಲಿ ಈ ಮಟ್ಟದ ಜಾಗೃತಿಯನ್ನು ನಿರೀಕ್ಷಿಸದ ಪಟ್ಟಭದ್ರ ಹಿತಾಸಕ್ತರು, ದಲಿತರ ಮೇಲೆ ಅಮಾನುಷ ಹಲ್ಲೆ, ಕೇರಿಗೆ ನುಗ್ಗಿ ಗುಡಿಸಲಲ್ಲಿದ್ದವರನ್ನು ಹೊರಗೆಳೆದು ದೌರ್ಜನ್ಯ ಮತ್ತು ತಿಮ್ಮಯ್ಯನ ಕೊಲೆ ಪ್ರಯತ್ನ ನಡೆಸಿದ್ದರು. ಬೆದರಿದ ದಲಿತರು, ಪ್ರಾಣಭಯದಿಂದ ಗಂಡಸರು, ಹೆಂಗಸರು ರಾತ್ರೋರಾತ್ರಿ ಊರು ಬಿಟ್ಟರು. ಊರಲ್ಲಿ ಅಳಿದುಳಿದವರೆಂದರೆ, ವಯಸ್ಸಾದ ಹಿರಿಯರು, ಪುಟ್ಟ ಹೆಜ್ಜೆಯಿಡುವ ಮಕ್ಕಳು ಮಾತ್ರ. ವಿಷಯದ ಗಂಭೀರತೆಯನ್ನು ಮನಗಂಡು ದಸಂಸದ ಕರಪತ್ರದ ಕರೆಯನ್ನು ಗಮನಿಸಿ, ಮುಂಜಾಗ್ರತೆಯಾಗಿ ಕಂದಾಯಾಧಿಕಾರಿಗಳು ಶಾಂತಿಸಮಿತಿಯನ್ನು ರಚಿಸಿದರು. ದಾಖಲಾದ ದೂರು, ಪೋಲೀಸ್ ಠಾಣೆಯಿಂದ ಕೋರ್ಟ್ ಮೆಟ್ಟಿಲೇರಿ, ಆಪಾದಿತರಿಗೆ ಶಿಕ್ಷೆ ವಿಧಿಸಿತ್ತು.

ಇಂಥಹ ಕುಂದೂರಿನ ಭೂಮಿಯಲ್ಲೇ ವಿವಾಹವಾಗಬೇಕೆಂದು ಬಯಸಿ ಕೆ.ಬಿ. ಸಿದ್ದಯ್ಯ ಸರಳ ವಿವಾಹವಾದದ್ದು, ಬಂದೂಕದ ನಳಿಗೆಯಲ್ಲಿ ಗುಬ್ಬಿಗೂಡು ಕಟ್ಟಿದಂತಾಗಿತ್ತು. ವಿವಾಹ ಸಭೆ ನಂತರ ಕುಂದೂರು ತಿಮ್ಮಯ್ಯನ ಮನೆಯಲ್ಲಿಯೇ ಮದುವೆಯ ಊಟಉಂಡು, ದಸಂಸದ ಬಳಗದಿಂದ ಬಿಡಿಸಿಕೊಂಡು ಭದ್ರಾವತಿ ಬಸ್ಸು ಹತ್ತುವುದೇ ಪ್ರಯಾಸವಾಗಿತ್ತು. ಈ ವಿವಾಹದ ಸಭೆಯನ್ನು ಕುರಿತು, ಕೃಷ್ಣಪ್ಪ ಪಂಚಮ ಪತ್ರಿಕೆಯಲ್ಲಿ ಲೇಖನ ಬರೆದರು.

ತುಮಕೂರು ಜಿಲ್ಲೆಯಲ್ಲಿ ದಸಂಸವನ್ನು ಕಟ್ಟಿ, ಅನೇಕ ಭೂ ಹೋರಾಟಗಳು, ಅಸ್ಪೃಶ್ಯತೆ ವಿರುದ್ಧದ ಹೋರಾಟಗಳನ್ನು ನಿರ್ವಹಿಸಿದ್ದ ಸಿದ್ದಯ್ಯನವರು ಆಂಗ್ಲ ಭಾಷಾ ಉಪನ್ಯಾಸಕರಾಗಿ ತಿಪಟೂರಿನ 'ಕಲ್ಪತರು ಕಾಲೇಜಿನಲ್ಲಿ' ಕರ್ತವ್ಯ ನಿರ್ವಹಿಸುತ್ತಿದ್ದರು. ಕಾಲೇಜು ಆಡಳಿತ ಮಂಡಳಿಗೆ ಇವರ ದಸಂಸದ ಹೋರಾಟಗಳು ನುಂಗಲಾರದ ತುತ್ತಾಗಿತ್ತು ಮತ್ತು ಅವರ ಸಂಸ್ಥೆಯ ಪೋಷಕರಾದ ಬಿಸಿಎಂ ಸಮುದಾಯದವರೊಬ್ಬರಿಗೆ ಅಧ್ಯಾಪಕ ಹುದ್ದೆ ಕೊಡುವ ತುರ್ತು ಆ ಸಂಸ್ಥೆಯ ಮುಂದಿತ್ತು. ಇವೆರಡೂ ಮೇಳೈಸಿಕೊಂಡು, ಸಿದ್ದಯ್ಯನವರನ್ನು ಅಧ್ಯಾಪಕ ಹುದ್ದೆಯಿಂದ ತೆಗೆದು ಹಾಕಿದರು. ಈ ವಿಷಯದಲ್ಲಿ ಕೃಷ್ಣಪ್ಪ ದಸಂಸದ ಲೆಟರ್‌ಹೆಡ್‌ನಲ್ಲಿ ನೇರವಾಗಿ ಪ್ರಿನ್ಸಿಪಾಲರಿಗೆ ಪತ್ರ ಬರೆದು, "ಸರ್ಕಾರದ ಗ್ರಾಂಟಿಗಾಗಿ ದಲಿತರು ನಿಮಗೆ ಬೇಕು, ಗ್ರಾಂಟ್ ಬಂದ ನಂತರ ದಲಿತರನ್ನು ಹೀಗೆ ಹೇಳದೆ ಕೇಳದೆ ಕಿತ್ತು ಹಾಕುವ ನಿಮ್ಮ ನೀತಿ ದಲಿತ ವಿರೋಧಿಯಾಗಿದೆ. ನಿಮಗೆ ದಲಿತರನ್ನು ತೆಗೆದುಕೊಳ್ಳಲು ಇಷ್ಟವಿಲ್ಲದಿದ್ದರೆ, ಸರ್ಕಾರದ ಗ್ರಾಂಟನ್ನು ತಿರಸ್ಕರಿಸಿ ಬಿಡಿ. ನಿಮ್ಮ ಕಾಲೇಜನ್ನು ಲಿಂಗಾಯಿತರ ಕಾಲೇಜು ಎಂದು ಘೋಷಿಸಿ ಬಿಡಿ. ನಿಮ್ಮ ಕಾಲೇಜಿನಲ್ಲಿ ಇದುವರೆವಿಗೂ ೧೮% ಮೀಸಲಾತಿಯನ್ನು ತುಂಬಿದ್ದೀರಾ? ಇದಕ್ಕೆ ಸ್ಪಷ್ಟ ಮಾಹಿತಿ ಕೊಡಿ. ಇಲ್ಲದಿದ್ದಲ್ಲಿ ನೊಂದ ಅಧ್ಯಾಪಕನಿಗೆ ನ್ಯಾಯ ದೊರಕಿಸಿಕೊಡುವಲ್ಲಿ ರಾಜ್ಯಾದ್ಯಂತ ಚಳುವಳಿ ಹೂಡುತ್ತೇವೆಂದು ಈ ಮೂಲಕ ತಿಳಿಯಪಡಿಸುತ್ತೇನೆ." ಎಂದು ಸಾಮಾಜಿಕ ನ್ಯಾಯದ ಕರೆಕೊಟ್ಟಿದ್ದರು.

ತದನಂತರದಲ್ಲಿ ದಸಂಸದ ಕೋಲಾರ ಜಿಲ್ಲಾ ಸಂಚಾಲಕರೂ, ಕವಿ–ಹಾಡುಗಾರ, ಬಿಸಿರಕ್ತದ ಯುವಕ, ಕೆ. ರಾಮಯ್ಯ "ಕಲ್ಪತರು ಅಡಿಯಲ್ಲಿ ಅಲ್ಪರು", ಎಂಬ ವರದಿಯನ್ನು 'ಲಂಕೇಶ್ ಪತ್ರಿಕೆ'ಯಲ್ಲಿ ಬರೆದರು. ಹಾಗೆ ಬರೆಯುವಾಗ ಕೆ. ರಾಮಯ್ಯ, ಸಿದ್ದಯ್ಯನವರ ಕೊಠಡಿಯಲ್ಲಿ ತಂಗಿದ್ದರಿಂದ, 'ಲಂಕೇಶ್ ಪತ್ರಿಕೆ'ಯಲ್ಲಿ ವರದಿ ಮಾಡಿದ್ದರ ಹಿಂದೆ ಸಿದ್ದಯ್ಯನ ಕೈವಾಡವಿದೆ ಎಂದು ಕಾಲೇಜು ವ್ಯವಸ್ಥಾಪಕ ಮಂಡಳಿ, ಪರಿಗಣಿಸಿತು. ಇದೇ ವೇಳೆಯಲ್ಲಿ ಸಿದ್ದಯ್ಯ, ಆಡಳಿತ ಮಂಡಳಿಯ ಹೋಮಕುಂಡಕ್ಕೆ ತುಪ್ಪ ಸುರಿದಂತೆ ಹಿಂದೂ ವಿವಾಹ ವ್ಯವಸ್ಥೆಗೆ ಪ್ರತಿರೋಧದ ರೀತಿಯಲ್ಲಿ ಭಾರಿ ಜನಸಮೂಹದ ಮಧ್ಯದಲ್ಲಿ ಸರಳ ವಿವಾಹವಾಗಿದ್ದೂ, ಸಹಿಸಲಾರದೆ ಸಿದ್ದಯ್ಯನವರನ್ನು ಮರುನೇಮಕ ಮಾಡಿಕೊಳ್ಳುವ ಸಾಹಸ ಮಾಡಲೇ ಇಲ್ಲ.

ನಂತರದಲ್ಲಿ ಸಿದ್ದಯ್ಯನವರು ಸಿದ್ದಾರ್ಥ ಕಾಲೇಜು, ತದನಂತರದಲ್ಲಿ ಸರ್ಕಾರಿ ಕಲಾ ಕಾಲೇಜು ಮತ್ತು ವಿಜ್ಞಾನ ಕಾಲೇಜಿನಲ್ಲಿ ಪಾರ್ಟ್‌ಟೈಂ ಅಧ್ಯಾಪಕ ವೃತ್ತಿ ಮುಂದುವರೆಸಿ, ಅಂತಿಮವಾಗಿ ಪೂರ್ಣಾವಧಿಯ ಉಪನ್ಯಾಸಕರಾಗಿ ಕರ್ತವ್ಯ ನಿರ್ವಹಿಸಿ, ಈಗ ನಿವೃತ್ತ ಜೀವನದ ಬೆಳಕಿನಲ್ಲಿ ಹೊಸತನ್ನು ಹುಡುಕಾಡುತ್ತಿದ್ದಾರೆ. ಅದರ ಪ್ರತಿಫಲವೇ 'ಗಲ್ಲೇಬಾನಿ'. ಇವರು 'ಬಕಾಲ'

ಕೃತಿಯನ್ನು ಪ್ರೊ. ಕೃಷ್ಣಪ್ಪನವರಿಗೆ ಅರ್ಪಣೆ ಮಾಡಿದ್ದಾರೆ. ಇವರು ದಕ್ಷ ಕಥಾ ದೇವಿಕಾವ್ಯ, ಅನಾತ್ಮ, ಇತ್ಯಾದಿ ಖಂಡ ಕಾವ್ಯಗಳಿಂದ ಕನ್ನಡ ಸಾಹಿತ್ಯ ಲೋಕದ 'ನಡುರಂಗ'ದಲ್ಲಿದ್ದಾರೆ.

ಈಗ್ಗೆ 5–6 ವರ್ಷಗಳ ಹಿಂದೆ ತುಮಕೂರಿನ ಪಾರ್ಥಸಾರಥಿಯವರು ಕೊರಟಗೆರೆ ತಾಲ್ಲೂಕಿನ ಅಕ್ಕಿರಾಂಪುರದಲ್ಲಿ ಪ್ರೊ. ಬಿ. ಕೃಷ್ಣಪ್ಪ ಸಂಪನ್ಮೂಲ ಕೇಂದ್ರದ ಉದ್ಘಾಟನೆಗೆ ನನ್ನನ್ನು ಆಹ್ವಾನಿಸಿದ್ದರು. ನಾನು, ಹನಗವಾಡಿಯ ಹನುಮಂತ ಮತ್ತು ರಾಘವೇಂದ್ರನೊಂದಿಗೆ ಅಲ್ಲಿಗೆ ತೆರಳಿದ್ದೆ. ವಾಪಾಸಾಗುವಾಗ ದಲಿತರನ್ನು ಬಹಿಷ್ಕಾರಕ್ಕೆ ಈಡುಮಾಡಿದ ಕುಂದೂರಿನ ಕೆರೆ, ದಲಿತರ ಓಣಿಯಲ್ಲಿ ಓಡಾಡಿದ್ದೆ. ಅಂದಿನ ಹಿಂಸೆಯ ಘಟನೆಗಳು ಕಣ್ಣೆದುರಿಗೆ ಬಂದು ಹೃದಯ ಆರ್ದ್ರಗೊಂಡಿತ್ತು. **(ಮುಂದುವರೆಯುವುದು)**

---

**೩ನೇ ಪುಟದಿಂದ )**

ಎಂಬ ಆ ಕತೆಯ ಕೊನೆಯ ಸಾಲು ಇನ್ನೂ ನೆನಪಿದೆ.

ರಾಮನಗರ ಮುಸ್ಲಿಮರೇ ಅಧಿಕ ಸಂಖ್ಯೆಯಲ್ಲಿರುವ ಪಟ್ಟಣವಾಗಿತ್ತು. ಬೇಸಾಯದ ಜೊತೆಗೆ ವ್ಯಾಪಾರ ವಹಿವಾಟು ಹೆಚ್ಚೂ ಕಡಿಮೆ ಅವರ ಹಿಡಿತದಲ್ಲಿತ್ತು. ಬಡತನದ ಬೇಗುದಿ ಮುಸ್ಲಿಮರಲ್ಲಿ ತಾಂಡವವಾಡುತ್ತಿದ್ದರೂ ಅವರಲ್ಲಿ ಕೆಲವರು ಶ್ರೀಮಂತರಾಗಿದ್ದರು. ವಸ್ತುತಃ ಈ ಹತ್ತಾರು ಮಂದಿ ರಾಮನಗರವನ್ನು ಎಲ್ಲ ಬಗೆಯಲ್ಲೂ ಆಳುತ್ತಿದ್ದರು. ಇದು ಹಿಂದೂಗಳ ಅಸೂಯೆಗೂ ಕಾರಣವಾಗಿತ್ತು. ಇದರಿಂದಾಗಿ ರಾಮನಗರದಲ್ಲಿ ಆಗಿಂದಾಗ್ಗೆ ಕೋಮು ಸಂಘರ್ಷವೇರ್ಪಡುತ್ತಿತ್ತು. ಆ ಸಂದರ್ಭದಲ್ಲಿ ಹೊಡೆದಾಡುತ್ತಿದ್ದವರು ಬಡ ಮುಸ್ಲಿಮರು ಮತ್ತು ಹಿಂದೂಗಳೇ ಆಗಿರುತ್ತಿದ್ದರು. ಆ ಕೋಮು ಜಗಳದಲ್ಲಿ ಬಡ ಮುಸಲ್ಮಾನರ ಮತ್ತು ದಲಿತರ ಕೇರಿಗಳು ಬೆಂಕಿಗೆ ಆಹುತಿಯಾಗುತ್ತಿದ್ದವು. ನಾಲ್ಕಾರು ಹೆಣಗಳು ಬೀಳುತ್ತಿದ್ದವು. ಅಂಥ ಗಲಭೆ ಪೀಡಿತ ಪ್ರದೇಶಗಳಲ್ಲಿ ಕೃಷ್ಣಗೋಪಾಲರು ಏಕಾಂಗಿಯಾಗಿ ಹೋಗಿ, "ಶ್ರೀಮಂತರ ಕೈಗೊಂಬೆಗಳಾಗಿ ವಿವೇಕವಿಲ್ಲದೆ ನೀವು ನೀವು ಹೊಡೆದಾಡಿ ಸಾಯಬೇಡಿ. ನೀವು ಬಡವರು. ನೀವೆಲ್ಲರೂ ಒಂದು. ಈಗ ನಿಮ್ಮ ನೋವಿಗೆ ಆಸರೆ ಯಾರು" ಎಂದು ಧೈರ್ಯವಾಗಿ ಮಾತನಾಡುತ್ತಿದ್ದರು. ಅವರ ಈ ಬೀದಿ ಭಾಷಣಗಳನ್ನು ಹಿರಿಯರ ಕಣ್ತಪ್ಪಿಸಿ ನಾನು ಕೇಳಿದ್ದೇನೆ.

ನಾನು ನೋಡಿದ ಅಂದಿನ ಕೃಷ್ಣಗೋಪಾಲ ಮಟ್ಟಸವಾದ ಆಳು. ದಪ್ಪ ಕಟ್ಟಿನ ಕನ್ನಡಕವನ್ನು ಯಾವಾಗಲೂ ಧರಿಸುತ್ತಿದ್ದರು. ಕಪ್ಪು ಮಿಶ್ರಿತ ಕಂದು ವರ್ಣದ ಮೈಬಣ್ಣ. ರಾಜಸ್ತಾನ ಮೂಲದವರು. ಟಿಪ್ಪುವಿನ ಕಾಲದಲ್ಲಿ ಸೈನ್ಯದಲ್ಲಿ ಕೆಲಸ ಮಾಡಲು ಬಂದ ಸೈನಿಕ ಕುಟುಂಬದ ಮುಂದುವರಿದ ತಲೆಮಾರಿನವರು. ಮನೆಮಾತು ಹಿಂದಿಯಾದರೂ ಕನ್ನಡ ಸಾಹಿತ್ಯ ಸಂಸ್ಕೃತಿಗಳ ಬಗ್ಗೆ ಅಪಾರ ಪ್ರೀತಿ, ಆಸಕ್ತಿ. ನಾನಿನ್ನೂ ವಯಸ್ಸಿನಲ್ಲಿ ಚಿಕ್ಕವನಾದುದರಿಂದ ಅವರ ಹತ್ತಿರಕ್ಕೆ ಸುಳಿಯುವ ಬೌದ್ಧಿಕಾಸಕ್ತಿಯಾಗಲೀ ಸನ್ನಿವೇಶಗಳಾಗಲೀ ಬರಲಿಲ್ಲ. ಆದರೆ ಅವರು ತಮ್ಮ ಭಾಷಣಗಳಲ್ಲಿ, ಬರಹಗಳಲ್ಲಿ ಹೇಳುತ್ತಿದ್ದ ಹಸಿವು, ಅಸ್ಪೃಶ್ಯತೆ, ಸಾಮಾಜಿಕ ಅಸಮಾನತೆಯ ಕ್ರೌರ್ಯದ ಮಾತುಗಳು ನನ್ನ ಮನಸ್ಸಿನಲ್ಲಿ ನಾಟಿದ್ದವು.

ಆಗ ನನಗೆ ಸಮಾಜವಾದವೆಂದರೇನು ಎಂಬುದು ತಿಳಿದಿರಲಿಲ್ಲ. ಲೋಹಿಯಾ ಹೆಸರನ್ನು ಕೇಳಿರಲಿಲ್ಲ. ನಮ್ಮ ಮೇಷ್ಟ್ರುಗಳು ಗಾಂಧೀಜಿ ನೆಹರೂ ಬಗ್ಗೆ ಮಾತ್ರ ಹೇಳುತ್ತಿದ್ದರು. ಕುವೆಂಪು ಕಾರಂತರ ಬಗ್ಗೆ ಕೂಡ ಅಂಥ ತಿಳಿವಳಿಕೆ ಇರಲಿಲ್ಲ. ಆದರೆ ಕಾಲೇಜಿಗೆ ಬಂದ ಮೇಲೆ ಪ್ರಪಂಚ ವಿಸ್ತಾರವಾಗಿ ಓದುವಿಕೆಯ ಮೂಲಕ ತೆರೆದುಕೊಂಡಿತು. ಎಪ್ಪತ್ತರ ದಶಕದ ಮೈಸೂರಿನ ಸಮಾಜವಾದಿ ಗೆಳೆಯರ ಒಡನಾಟ ಮತ್ತು ಹೋರಾಟಗಳು ಗಾಂಧಿ– ಲೋಹಿಯಾರನ್ನು ಅಧ್ಯಯನ ಮಾಡಲು ಸಹಕಾರಿಯಾದವು. ಎಪ್ಪತ್ತರ ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ಮತ್ತು ಅನಂತರದ ದಿನಗಳಲ್ಲಿ ಕೃಷ್ಣಗೋಪಾಲ ತೆರೆಮರೆಯಲ್ಲಿಯೇ ಉಳಿದುಕೊಂಡುಬಿಟ್ಟರು. ಅವರು ಯಾವ ಹೋರಾಟವನ್ನೂ ಸಂಘಟಿಸಲಿಲ್ಲ. ಏಕೆಂಬುದು ನನ್ನಲ್ಲಿ ಕುತೂಹಲವನ್ನುಂಟು ಮಾಡಿತು. ಆ ಕುತೂಹಲ ಹಾಗೆಯೇ ಉಳಿದುಕೊಂಡಿತು.

ರಾಮನಗರದ ಯಾವುದೋ ಸಾಹಿತ್ಯ ಕಾರ್ಯಕ್ರಮಕ್ಕೆ ಹೋಗಿದ್ದೆ. ಕಾರ್ಯಕ್ರಮ ಮುಗಿದಾಗ ಸಂಜೆ ಕತ್ತಲಾಗತೊಡಗಿತು. ಸಾಹಿತ್ಯ ಗೋಷ್ಠಿಯ ಕಾರ್ಯಕರ್ತನೊಬ್ಬ, "ನಿಮ್ಮನ್ನು ಕಾಣಲು ಯಾರೋ ವಯಸ್ಕರು ಬಂದಿದ್ದಾರೆ, ಬನ್ನಿ?" ಎಂದು ಹೊರಗೆ ಕರೆತಂದನು. ಅಲ್ಲಿ ವೃದ್ಧರೊಬ್ಬರು ನಿಂತಿದ್ದರು. ತಕ್ಷಣ ಗುರುತು ಹತ್ತಲಿಲ್ಲ. ಅವರು ನನ್ನತ್ತ ತಿರುಗಿ ನೋಡಿ "ಕೃಷ್ಣಗೋಪಾಲ"ಎಂದರು. ತಕ್ಷಣ ಇಪ್ಪತ್ತು ವರ್ಷಗಳ ಹಿಂದಿನ ಬಾಲ್ಯದ ದಿನಗಳು ಥುತ್ತನೆ ಮನಸ್ಸಿಗೆ ಬಂದವು. ಕೃಷ್ಣಗೋಪಾಲರನ್ನು ನೋಡಿದೆ. ಅವರಲ್ಲಿ ಆಯಾಸ ಎದ್ದು ಕಾಣುತ್ತಿತ್ತು. ಸುಸ್ತಾದವರಂತೆ ಮಾತನಾಡುತ್ತಿದ್ದರು. "ಎಲ್ಲಾದರೂ ಕುಳಿತು ಮಾತನಾಡೋಣ. ಬಾರ್‌ಗೆ ಹೋಗೋಣವೇ" ಎಂದರು. "ನಾನು ಕುಡಿಯುವುದಿಲ್ಲ. ನೀವು ಬೇಕಾದರೆ ತೆಗೆದುಕೊಳ್ಳಿ, ಜೊತೆಯಲ್ಲಿರುತ್ತೇನೆ" ಎಂದೆ. "ಒಬ್ಬನೇ ತೆಗೆದುಕೊಳ್ಳೋದು ನನಗೆ ಇಷ್ಟವಿಲ್ಲ. ಬರೀ ಟೀ ಕುಡಿಯೋಣ" ಎಂದರು.

ಹೋಟೆಲೊಂದರ ಮೂಲೆಯಲ್ಲಿ ಟೀ ಕುಡಿಯುತ್ತಾ ಅವರ ಹತಾಶೆಗಳ ಬಗ್ಗೆ, ರಾಜಕಾರಣ ಸಾಗುತ್ತಿರುವ ದಿಕ್ಕಿನ ಬಗ್ಗೆ ಮಾತನಾಡಿದರು. ಬಂಗಾರಪ್ಪ, ಪಟೇಲರ ಅವಕಾಶವಾದಿ ರಾಜಕಾರಣದ ಬಗ್ಗೆ ವ್ಯಗ್ರರಾದರು. ಸಿಗರೇಟಿನ ಮೇಲೆ ಸಿಗರೇಟು ಸೇದಿದರು. "ಬಂಡಾಯ ಗಿಂಡಾಯ ಅಂತ ನೀವು ಓಡಾಡ್ತ ಇದ್ದೀರ. ಒಳ್ಳೆಯದು. ನಿಮ್ಮ ಕೆಲವು ಬರಹಗಳನ್ನು ಓದಿದ್ದೇನೆ. ಇನ್ನೂ ಗಟ್ಟಿಯಾಗಬೇಕು. ಇನ್ನೂ ಗಾಂಧೀ–ಲೋಹಿಯಾರ ಚಿಂತನೆಯನ್ನು ಜೀರ್ಣಿಸಿಕೊಳ್ಳಬೇಕಿದೆ. ಆ ನಿಟ್ಟಿನಲ್ಲಿ ಚಿಂತಿಸಿರಿ" ಎಂದರು. ಕತ್ತಲಾಗಿತ್ತು. "ಮತ್ತೆ ಭೇಟಿಯಾಗುತ್ತೇನೆ" ಎಂದು ಅವರ ಕೈ ಕುಲುಕಿದೆ. ಅವರು ಮುಗುಳ್ನಕ್ಕರು.

ಆದರೆ ಮತ್ತೆ ಅವರನ್ನು ಭೇಟಿಯಾಗಲೇ ಇಲ್ಲ. ಅವರ ಮನೆ–ಮಕ್ಕಳು ಆರ್ಥಿಕ ಸ್ಥಿತಿ, ಯಾವುದನ್ನೂ ತಿಳಿದುಕೊಳ್ಳಲಾಗಲಿಲ್ಲ. ಕೆಲವು ವರ್ಷಗಳೇ ಕಳೆದವು. ರಾಮನಗರದ ಗೆಳೆಯರೊಬ್ಬ ಮೈಸೂರಿಗೆ ಬಂದಾಗ ಹೇಳಿದ– "ನಿನ್ನ ಸೋಷಿಯಲಿಸ್ಟ್ ಗುರು ಕೃಷ್ಣಗೋಪಾಲ ತೀರಿಕೊಂಡರು". ಮನಸ್ಸಿಗೆ ನೋವಾಯಿತು. ಒಂದು ಬಗೆಯ ಅಪರಾಧೀ ಭಾವನೆ ಕಾಡಿತು. ಈ ನಡುವೆ ಸಮಾಜವಾದಿ ಮಿತ್ರ ಡಾ.ಎಚ್.ಸಿ. ವಿಷ್ಣುಮೂರ್ತಿ ಅವರು "ಶಾಂತವೇರಿ ಗೋಪಾಲಗೌಡ ದಿನಚರಿ" ಪ್ರಕಟಿಸಿದ್ದರು. ಅದರಲ್ಲಿ ಗೋಪಾಲಗೌಡರ ಅಂತಿಮ ದಿನಗಳಲ್ಲಿ ಆಸ್ಪತ್ರೆಯಲ್ಲಿ ಕೃಷ್ಣಗೋಪಾಲ್ ಬಂದು ನೋಡಿಕೊಳ್ಳುತ್ತಿದ್ದುದರ ಬಗ್ಗೆ ಬರೆಯುತ್ತಾರೆ. ಇದನ್ನು ಗಮನಿಸಿದ ನಾನು ವಿಷ್ಣುಮೂರ್ತಿಯವರನ್ನು ಕೃಷ್ಣಗೋಪಾಲರ ಬಗ್ಗೆ ಕೇಳಿದೆ. "ಆತನೊಬ್ಬ ಅಂತರ್ಮುಖಿ. ಓದಿಕೊಂಡಿದ್ದ. ಗೌಡರ ಅಭಿಮಾನಿ. ಗೌಡರು ಎಲ್ಲೇ ಹೋದರೂ ಅವರ ಜೊತೆಯಲ್ಲಿರುತ್ತಿದ್ದ. ಕಾಗೋಡು ಸತ್ಯಾಗ್ರಹದಲ್ಲಿ ಭಾಗಿಯಾಗಿದ್ದ. ಗೌಡರ ಅಂತಿಮ ದಿನದಲ್ಲಿ ಅವರನ್ನು ಅವರ ಮನೆಯವರಿಗಿಂತ ಚೆನ್ನಾಗಿ ಶುಶ್ರೂಶೆ ಮಾಡಿದ" ಎಂದು ವಿವರಿಸಿದರು.

"ಹೊಸಮನುಷ್ಯ"ದ ಸಂಪಾದಕರು ಕಷ್ಣಗೋಪಾಲರ ಬಗ್ಗೆ ವ್ಯಕ್ತಿಚಿತ್ರ ಬರೆದು ಕಳಿಸಿರಿ ಎಂದು ನನಗೆ ಹೇಳಿ ಆರು ತಿಂಗಳ ಮೇಲಾಯಿತು. ಅಂದಿನಿಂದ ಕೃಷ್ಣಗೋಪಾಲರ ಬಗ್ಗೆ ಮಾಹಿತಿ ಸಂಗ್ರಹಿಸಲು ವಿಫಲನಾಗಿದ್ದೇನೆ. ರಾಮನಗರದಲ್ಲಿ ಅವರ ವಾರಿಗೆಯವರು (ಈಗ ಅವರು ಬದುಕಿದ್ದರೆ ಎಂಬತ್ತರ ಮೇಲಿನ ವಯಸ್ಸಾಗುತ್ತಿತ್ತು) ಬಹುಪಾಲು ಯಾರೂ ಇಲ್ಲ. ನನ್ನ ವಾರಿಗೆಯವರಿಗೆ ಅವರ ಬಗ್ಗೆ ಏನೂ ತಿಳಿದಿಲ್ಲ. ಇರಲಿ, ರಾಮನಗರದಲ್ಲಿ ಈಗ ಅವರ ಬಂಧುಗಳು ಯಾರೂ ಇಲ್ಲವೆಂದು ಗೆಳೆಯರು ಹೇಳುತ್ತಾರೆ. ಎಲ್ಲರೂ ಬೆಂಗಳೂರು ಸೇರಿದ್ದಾರಂತೆ. ಅವರ ಮಗ ನರೇಂದ್ರಬಾಬು ಚಿತ್ರ ನಿರ್ದೇಶನದ ಕೆಲಸ ಮಾಡುತ್ತಿದ್ದಾನೆಂದು ತಿಳಿದುಬಂತು. ಅವನ ಮೊಬೈಲ್ ನಂಬರಿಗೆ ವಾರಕ್ಕೊಮ್ಮೆಯಾದರೂ ಕರೆ ಮಾಡಿದ್ದೇನೆ. ಪ್ರತಿಕ್ರಿಯೆ ಶೂನ್ಯ. ಕೃಷ್ಣಗೋಪಾಲ ಅವರ ಹತ್ತಿರಕ್ಕೆ ನಾನು ಹೋಗಬಹುದಿತ್ತು. ಅವರ ಸಾಂಗತ್ಯದಲ್ಲಿ ಬೆರೆಯಬಹುದಿತ್ತು. ನನ್ನದೇ ತಪ್ಪಿದೆ. ಅರಿಯುವ ಕಾಲದಲ್ಲಿ ನಾನಾ ಕಾರಣದಿಂದ ವಿಮುಖನಾಗಿ ಈಗ ಪರಿತಪಿಸುವ ಸ್ಥಿತಿ ನನ್ನದಾಗಿದೆ?

ಕೃಷ್ಣಗೋಪಾಲ್ ಸೆಲೆಬ್ರಿಟಿ ರಾಜಕಾರಣಿಯಲ್ಲ. ಆತ ಒಬ್ಬ ನಿಷ್ಠಾವಂತ ಸಮಾಜವಾದಿ ಕಾರ್ಯಕರ್ತನಾಗೇ ತೆರೆಮರೆಯಲ್ಲೇ ಉಳಿದುಹೋದರು. ತಾವು ನಂಬಿದ್ದ ಸಿದ್ಧಾಂತಕ್ಕೆ ಬದ್ಧರಾಗೇ ಉಸಿರಾಡಿ, ತಮ್ಮ ಶಕ್ತಿಯ ಮಿತಿಯಲ್ಲಿ ಸಮಾಜವಾದವನ್ನು ಎಚ್ಚರಗೊಳಿಸುವ ಕೆಲಸ ಮಾಡಿದರು. ಲೋಹಿಯಾ–ಗೋಪಾಲಗೌಡರ ಜೊತೆಯಲ್ಲಿ ತತ್ವನಿಷ್ಠರಾಗಿ ಕೆಲಸ ಮಾಡಿದ ಸಾವಿರಾರು ಅನಾಮಿಕ ಕಾರ್ಯಕರ್ತರೂ ಕೃಷ್ಣಗೋಪಾಲರೂ ಇತಿಹಾಸದ ಪುಟಗಳಿಗೆ ಸೇರಿಹೋಗಿದ್ದಾರೆ. ಅಧಿಕಾರ ಪಡೆದ ಸಮಾಜವಾದಿಗಳ ಮತ್ತು ಅವರ ಗೆಳೆಯರ ಆಧಿಕಾರ ಮತ್ತು ಸಂಪತ್ತುಗಳ ಮದದ ಅಲೆಗಳಿಗೆ ಸಿಕ್ಕಿ ಇಂತಹವರ ನೆನಪು ಸಮಾಜವಾದಿ ಇತಿಹಾಸದ ಪುಟಗಳಿಂದಲೂ ಕೊಚ್ಚಿಹೋಗಿದೆ.

**(ಎಪ್ಪತ್ತು–ಎಂಭತ್ತರ ದಶಕಗಳಲ್ಲಿ ಸಮಾಜವಾದಿ ಯುವಜನ ಸಭಾದ ಸದಸ್ಯರಾಗಿ ಪ್ರೊ. ಶಿವರಾಮ ಕಾಡನಕುಪ್ಪೆ ಮೈಸೂರಿನ ವಿದ್ಯಾವರ್ಧಕ ಸಂಘ ಕಾಲೇಜಿನ ಪ್ರಾಂಶುಪಾಲರಾಗಿ ಕೆಲಸ ಮಾಡಿ ಈಗ ನಿವೃತ್ತಿ ಹೊಂದಿದ್ದಾರೆ. ಅವರು ಕನ್ನಡ ಸಾಹಿತ್ಯದ ಪ್ರಮುಖ ವಿಮರ್ಶಕರಲ್ಲೂ ಒಬ್ಬರಾಗಿದ್ದಾರೆ.)**

**ಕಾಗೋಡು ಭೂ ಸತ್ಯಾಗ್ರಹದಲ್ಲಿ ಭಾಗವಹಿಸಿ ಲೋಹಿಯಾ ಅವರಿಂದಲೂ ಮೆಚ್ಚುಗೆಗೆ ಪಾತ್ರರಾಗಿದ್ದ ಶ್ರೀಮತಿ ಮಿಣಕಮ್ಮ ಅವರ ನಿಧನಕ್ಕೆ ಪತ್ರಿಕೆ ತನ್ನ ಸಂತಾಪವನ್ನು ಸೂಚಿಸುತ್ತದೆ–ಸಂಪಾದಕ**

# ಪ್ರಪಾತದತ್ತ ಜಾರುತ್ತಿರುವ ತೈಲ ರಾಜಕಾರಣ

–ಅನುರಾಧಾ ಎಂ. ಚೆನೋಯ್



**ಭಾ**ರತ ಮತ್ತು ಚೀನಾ ದೇಶಗಳಂತೆ ತೈಲವನ್ನು ಗಟಗಟನೆ ಕುಡಿಯುತ್ತಿರುವ ಹಲವು ದೇಶಗಳ ಆರ್ಥಿಕ ಮಂತ್ರಿಗಳು ಮುಗುಳ್ನಗುತ್ತಿದ್ದಾರೆ. ಜಾಗತಿಕವಾಗಿ ಜೂನ್‌ನಲ್ಲಿ ಪ್ರತಿ ಬ್ಯಾರಲ್‌ಗೆ ೧೧೫ ಅಮೇರಿಕನ್ ಡಾಲರ್‌ಗಳಿಂದ ಶೇ ೪೦ ರಷ್ಟು ಕುಸಿದು, ಪ್ರಸ್ತುತ ೭೦ ಡಾಲರ್‌ಗಳಾಗಿದೆ. ಈ ದೇಶಗಳ ನಾಗರೀಕರು, ಇದು ತಮ್ಮ ಸರ್ಕಾರಗಳು ಹಣದುಬ್ಬರ ತಗ್ಗಿಸಲು ಪಟ್ಟ ಕಠಿಣ ಪರಿಶ್ರಮದಿಂದಾಗಿ, ಬಹುದೂರದ ಮೋಜಿನ ವಾಹನ ಸವಾರಿಯ ಅವಕಾಶ ತಮಗೆ ಸಿಕ್ಕಿದೆ ಎಂದು ಯೋಚಿಸುತ್ತಿರಬಹುದು. ಆದರೆ ಇದರ ನಿಜ ಸ್ವರೂಪ ಬೇರೆಯದೇ ಆಗಿದೆ.

ತೈಲ ಬೆಲೆಗಳ ಈ ಕುಸಿತಕ್ಕೆ ಒಂದು ಕಾರಣವೆಂದರೆ ತೈಲದ ಅತಿ ದೊಡ್ಡ ಗ್ರಾಹಕ ದೇಶ ಅಮೇರಿಕ ತನ್ನ ಸ್ವಂತ ತೈಲ ಉತ್ಪಾದಿಸಲು “FRACKING” ಎಂಬ ನೂತನ ತಂತ್ರಜ್ಞಾನ ಬಳಸುತ್ತಿರುವುದು. (ಈ ವಿಧಾನದಲ್ಲಿ ತೈಲ ನಿಕ್ಷೇಪಗಳಿಗೆ ಅತಿ ಹೆಚ್ಚಿನ ಒತ್ತಡದಲ್ಲಿ ಅಪಾರ ಪ್ರಮಾಣದ ನೀರು, ಮರಳು ಹಾಗೂ ಕೆಲವು ರಾಸಾಯನಿಕಗಳನ್ನು ನುಗ್ಗಿಸಿ, ಭೂಮಿಯ ಒಳಪದರಗಳನ್ನು, ಕೊರಕಲುಗಳನ್ನು ಶಾಶ್ವತವಾಗಿ ಭೇಧಿಸಿ, ಆ ಮೂಲಕ ನೈಸರ್ಗಿಕ ತೈಲ ಮೇಲೆ ಬರುವಂತೆ ಮಾಡಲಾಗುತ್ತದೆ.) ಮುಂದಿನ ವರ್ಷ ಅಮೇರಿಕಾದ ಆಂತರಿಕ ಉತ್ಪಾದನೆ ೯ ದಶಲಕ್ಷ ಬ್ಯಾರೆಲ್‌ಗಳಾಗಿ ಜಾಗತಿಕವಾಗಿ ಅತಿಯಾದ ದಾಸ್ತಾನು ಸೃಷ್ಟಿಯಾಗುತ್ತದೆ. ಆದರೆ, ಈ ವಿಧಾನ ಅತೀ ಮಾಲಿನ್ಯಕಾರಿಯಾದದ್ದು. ಮೇಲಾಗಿ ತೈಲ ಬಾವಿಯೊಂದನ್ನು ಫ್ರ್ಯಾಕಿಂಗ್ ಮಾಡಲು ೨ ರಿಂದ ೪ ದಶಲಕ್ಷ ಗ್ಯಾಲೆನ್‌ಗಳಷ್ಟು ನೀರು ಬೇಕಾಗುತ್ತದೆ. ಅಮೇರಿಕಾದ ಪರಿಸರವಾದಿಗಳು ಮತ್ತು ಫ್ರ್ಯಾಕಿಂಗ್ ವಲಯದಲ್ಲಿ ವಾಸಿಸುತ್ತಿರುವ ಲಕ್ಷಾಂತರ ಜನತೆ ಇದಕ್ಕೆ ತೀವ್ರ ಆಕ್ಷೇಪ ವ್ಯಕ್ತಪಡಿಸುತ್ತಿದ್ದಾರೆ. ಮತ್ತು ಈ ಫ್ರ್ಯಾಕಿಂಗ್ ಅನ್ನು ಆರಂಭಿಸಿದ್ದ ಟೆಕ್ಸಾಸ್ ರಾಜ್ಯದ ನಗರವೊಂದು ಇದನ್ನು ಸ್ಥಗಿತಗೊಳಿಸುವಂತೆ ಮತ ಚಲಾಯಿಸಿದೆ. ಇದೆಲ್ಲದರ ಪರಿಣಾಮವಾಗಿ, ತೈಲ ಬೆಲೆಗಳು ಕುಸಿಯಲಾರಂಭಿಸಿದ್ದರಿಂದ ಫ್ರ್ಯಾಕಿಂಗ್ ಮಾಡುತ್ತಿರುವ ಕಂಪನಿಗಳ ಲಾಭವೂ ಕಡಿಮೆಯಾಗುತ್ತಿದ್ದು, ಅವು ಈ ದುಬಾರಿ ವಿಧಾನದ ಬಗ್ಗೆ ಮರುಚಿಂತಿಸುವಂತಾಗಿದೆ.

ಸಿರಿಯಾದಲ್ಲಿನ ಯುದ್ಧದಿಂದಾಗಿ ತೈಲ ಬೆಲೆ ಏರುತ್ತದೆ ಎಂಬ ನಿರೀಕ್ಷೆ ಇತ್ತು. ಇಸ್ಲಾಮಿಕ್ ಸ್ಟೇಟ್(ISIL)ನ ಪ್ರಾಬಲ್ಯ ಹೆಚ್ಚಾಗಿ ಮತ್ತು ಇರಾಕ್ ಸಿರಿಯಾ ತೈಲ ನಿಕ್ಷೇಪಗಳಲ್ಲಿ ಉತ್ಪಾದನೆ ಇಳಿಮುಖವಾದಂತೆ ಈ ನಿರೀಕ್ಷೆ ಇನ್ನು ಹೆಚ್ಚಾಗುತ್ತಾ ಹೋಯಿತು. ೨೦೧೩–೧೪ ರಲ್ಲಿ ತೈಲ ದರ ಸ್ವಲ್ಪ ಕಾಲ ಏರಿಕೆಯಾಯಿತು. ಆದರೆ, ೨೦೧೪ರಲ್ಲಿ ಸಮಗ್ರ ಚಿತ್ರವೇ ಬುಡಮೇಲಾಗಿ ಹೋಯಿತು. ತೈಲ ಬೆಲೆಗಳ ಈ ಕುಸಿತ, ಸೌದಿ ಅರೇಬಿಯಾದ ದೊರೆ ಅಬ್ದುಲ್ಲಾ ಮತ್ತು ಅಮೆರಿಕಾ ಸರ್ಕಾರದ ಕಾರ್ಯದರ್ಶಿ ಕೆರ್ರಿ ಭೇಟಿಯೊಂದಿಗೆ ತಳುಕು ಹಾಕಿಕೊಂಡಿದೆ. ರಾಯ್‌ಟರ್ಸ್ ಮತ್ತು ಇತರರು ವರದಿ ಮಾಡಿದಂತೆ ಒಬಾಮ – ಕೆರ್ರಿ ಕೂಟ ಸೌದಿಗಳ ಮೇಲೆ, ಉತ್ಪಾದನೆ ಹೆಚ್ಚಿಸಿ, ದರ ತಗ್ಗಿಸಲು ಒತ್ತಡ ಹೇರುತ್ತಿರುವಂತೆ, ಅಮೇರಿಕಾದ ತೈಲ ಅವಶ್ಯಕತೆ ಕಡಿಮೆಯಾಗುತ್ತಾ ಹೋಗಿ ಜಾಗತಿಕವಾಗಿ ಕೃತಕ ಅಧಿಕ ತೈಲ ದಾಸ್ತಾನು ಸೃಷ್ಟಿಯಾಯಿತು. ತೈಲ ರಫ್ತು ಮಾಡುವ ಪ್ರಮುಖ ರಾಷ್ಟ್ರಗಳ ಮೇಲೆ ತನ್ನ ರಾಜಕೀಯ ಉದ್ದೇಶಗಳಿಗಾಗಿ ಒತ್ತಡ ಹೇರುವುದೇ ಅಮೆರಿಕಾದ ಈ ವ್ಯವಹಾರದ ಉದ್ದೇಶವಾಗಿತ್ತು.

ರಷ್ಯಾ ಇವರ ಮೊದಲ ಶಿಕಾರಿ. ರಷ್ಯಾದ ಶೇ೭೦ ರಷ್ಟು ರಫ್ತು ತೈಲ ಮತ್ತು ನೈಸರ್ಗಿಕ ಅನಿಲದ್ದಾಗಿದೆ. ತೈಲ ದರದಲ್ಲಿ ಕಡಿತವಾದರೆ ಪುಟಿನ್ ಸರ್ಕಾರದ ಮೇಲೆ ನಕಾರಾತ್ಮಕ ಪರಿಣಾಮ ಉಂಟುಮಾಡುತ್ತದೆ. ಯುಕ್ರೇನಿಯಾದ ಪ್ರತ್ಯೇಕತಾವಾದಿಗಳಿಗೆ ಬೆಂಬಲ ನೀಡಿದ್ದಲ್ಲದೇ, ಯುಕ್ರೇನ್ ನ್ಯಾಟೋ ಸೇನಾ ಕೂಟವನ್ನು ಸೇರಲು ರಷ್ಯಾ ವಿರೋಧಿಸುತ್ತಿರುವುದರಿಂದ ಅಮೇರಿಕ ಈ ಏಕಪಕ್ಷೀಯ ದಿಗ್ಬಂಧನ ವಿಧಿಸಿದೆ. ಆದರೆ, ಈ ಬಗ್ಗೆ ಚೀನಾ ದೇಶವನ್ನು ಅಮೇರಿಕ ಗಣನೆಗೆ ತೆಗೆದುಕೊಂಡಿಲ್ಲ. ರಷ್ಯಾ, ಚೀನಾಗೆ ಮಾಡುತ್ತಿರುವ ತೈಲ ರಫ್ತಿನ ಪ್ರಮಾಣ ಹೆಚ್ಚಾಗುತ್ತಿದ್ದು, ೨೦೩೦ ರ ಸುಮಾರಿಗೆ ೩೧ ದಶಲಕ್ಷ ಟನ್‌ಗಳಾಗಲಿದೆ. ಚೀನಾ ಕೂಡ ಈ ವ್ಯವಹಾರದಲ್ಲಿ ಡಾಲರ್‌ನ್ನು ಪಕ್ಕಕ್ಕೆ ತಳ್ಳಿ, ತಮ್ಮದೇ ಆದ ಪರ್ಯಾಯ ಕರೆನ್ಸಿ ಬಳಸಲು ಯೋಜನೆ ರೂಪಿಸುತ್ತಿದೆ. ಅಮೇರಿಕಾದ ಏಕಪಕ್ಷೀಯ ದಿಗ್ಬಂಧನ ಈ ಹಿಂದಿನ ಹಲವಾರು ದಿಗ್ಬಂಧನಗಳಂತೆ ವಿಫಲವಾಗಿದ್ದು ರಷ್ಯಾದಲ್ಲಿ ರಾಷ್ಟ್ರೀಯ ಪ್ರಜ್ಞೆಯನ್ನು ಜಾಗೃತಗೊಳಿಸಿ, ರಷ್ಯಾ, ಚೀನಾ ಪರಸ್ಪರ ಹತ್ತಿರವಾಗುವಂತೆ ಮಾಡಿದೆ. ಭಾರತದಂತಹ ತನ್ನ ಹಳೆಯ ಮಿತ್ರ ರಾಷ್ಟ್ರಗಳಿಗೆ ರಷ್ಯಾ ಉತ್ತಮ ವ್ಯಾವಹಾರಿಕ ಅವಕಾಶಗಳನ್ನು ನೀಡಬಹುದು. ಮೇಲಾಗಿ ಈ ದಿಗ್ಬಂಧನ ರಷ್ಯಾದ ಉತ್ಪಾದನಾ ವಲಯವನ್ನು ಚುರುಕುಗೊಳಿಸಿದ್ದು, ಚೀನಾದ ಅಗ್ಗದ ಸರಕುಗಳಿಗೆ ಯುರೋಪಿಗಿಂತ ಉತ್ತಮ ಅವಕಾಶ ತನ್ನ ದೇಶದೊಳಗೆ ಕಲ್ಪಿಸಿದೆ. ಆದ್ದರಿಂದ ಯುರೋಪ್‌ಗೆ ಕೂಡ ಪೆಟ್ಟು ಬೀಳತೊಡಗಿದೆ.

ಅಮೇರಿಕ ತನ್ನ ಪ್ರಮುಖ ಮಿತ್ರ ರಾಷ್ಟ್ರ ಸೌದಿ, ತೈಲ ಬೆಲೆ ತಗ್ಗಿಸುವಂತೆ ಮಾಡಿ, ಸಿರಿಯಾದ ಬಷರ್ ಅಲ್ – ಅಸಾದ್ ಸರ್ಕಾರಕ್ಕೆ ಆಘಾತ ನೀಡಿ, ಇರಾನ್‌ನಲ್ಲಿ ಪ್ರಭುತ್ವ ಬದಲಾಗುವಂತೆ ಮಾಡಲು ಬಯಸಿತ್ತು. ಅಮೇರಿಕ ಈ ಎರಡು ದೇಶಗಳ ಮೇಲೆ ದಿಗ್ಬಂಧನ ವಿಧಿಸಿದ್ದರೂ ಅದರ ಪರಿಣಾಮ ಅಷ್ಟೇನೂ ಆಗಿಲ್ಲ. ಸಿರಿಯಾದ ಆಂತರಿಕ ಯುದ್ಧ ಅತ್ಯುಗ್ರ ಮೂಲಭೂತವಾದಿ ಸೇನೆಯೊಂದನ್ನು ಸೃಷ್ಟಿಸಿದ್ದು, ಅದನ್ನು ನಿಯಂತ್ರಿಸಲು ಯಾರಿಂದಲೂ ಸಾಧ್ಯವಿಲ್ಲ. ಮತ್ತೊಂದು ತೈಲ ಉತ್ಪಾದಕ ದೇಶ ಲಿಬಿಯಾ, ಇಸ್ಲಾಂವಾದಿಗಳು ಮತ್ತು ಇತರರ ಮಧ್ಯೆ ಧೃವೀಕರಣಗೊಂಡಿದೆ. ದಿಗ್ಬಂಧನ ಹಾಗೂ ಕಡಿಮೆ ತೈಲ ದರವಿದ್ದಾಗ್ಯೂ, ಇರಾನ್ ಒಂದೇ ಆ ಪ್ರದೇಶದ ಸ್ಥಿರ ಸರ್ಕಾರವಾಗಿದ್ದು, ಅಮೇರಿಕ ಅದರೊಡನೆ ಸಂಧಾನ ಮಾಡುವ ಒತ್ತಡಕ್ಕೆ ಸಿಲುಕಿದೆ. ಅಮೇರಿಕ ಹಾಗೂ ಸೌದಿ ರೂಪಿಸಿದ ಯೋಜನೆ ಅವು ಅಂದುಕೊಂಡ ಫಲಗಳನ್ನು ನೀಡಿಲ್ಲ.

ISIL ನ ಮಿತಿಮೀರುತ್ತಿರುವ ಪ್ರಾಬಲ್ಯ ಇಡೀ ವಲಯದಲ್ಲಿ ಅಲ್ಲೋಲಕಲ್ಲೋಲ ಸೃಷ್ಟಿಸಿದ್ದು, ಈ ಕದನ ಮಧ್ಯಏಷ್ಯಾ, ಅಫ್ಘಾನಿಸ್ಥಾನ್, ಪಾಕಿಸ್ತಾನಗಳನ್ನೂ ದಾಟಿ ಮುನ್ನುಗುವ ಪರಿಸ್ಥಿತಿ ಎದುರಾಗಿದೆ. ಮೂಲಭೂತವಾದಿ ಉಗ್ರರಿಗೆ ಸೌದಿಯ ಧನ ಸಹಾಯ ಇದೆ ಎಂಬ ಆರೋಪವಿದೆ. ಆದರೆ, ಅಮೇರಿಕ ಇದಕ್ಕೆ ಕುರುಡಾಗಿ, ರಷ್ಯಾ, ಸಿರಿಯಾ, ಇರಾನ್‌ಗಳಿಗೆ ಮರ್ಮಾಘಾತವಾಗುವಂತೆ ಸೌದಿಗಳೊಡನೆ ತೈಲಬೆಲೆ ನಿಗದಿಪಡಿಸುವ ವ್ಯವಹಾರ ಕುದುರಿಸುತ್ತಿದೆ. ತೈಲ ಬೆಲೆ ಕುಸಿತ ಅಮೇರಿಕದಲ್ಲಿರುವ ಫ್ರ್ಯಾಕಿಂಗ್ ಉದ್ಯಮಿಗಳನ್ನು ಕಂಗೆಡಿಸಿದೆ. ಏಕೆಂದರೆ ಈ ವಿಧಾನದ ತೈಲ ಉತ್ಪಾದನಾ ವೆಚ್ಚ ಅಂತರ್‌ರಾಷ್ಟ್ರೀಯ ತೈಲ ದರಗಳಿಗಿಂತ ಹೆಚ್ಚಾಗಿದೆ. ತೈಲಬೆಲೆಗಳ ಕುಸಿತದ ನಂತರವೂ ತನ್ನ ಪ್ರಭುತ್ವಕ್ಕೇನೂ ಉಪಯೋಗವಾಗಿಲ್ಲ ಎಂದು ತೈಲ ಲಾಭಾಂಶದ ಮೇಲೇ ಬದುಕುತ್ತಿರುವ ಸೌದಿ ಚಡಪಡಿಸಲಾರಂಭಿಸಿದೆ.

ಇದಕ್ಕಿಂತ ಕೆಡುಕಿನ ವಿಷಯವೇನೆಂದರೆ, ಇರಾಕ್ ಸರ್ಕಾರ ತನ್ನ ಉಳಿವಿಗಾಗಿ ಅಮೇರಿಕದ ಸಹಾಯದ ಮೇಲೆ ಸಂಪೂರ್ಣ ಅವಲಂಬಿಯಾಗಿರುವುದು. ISIL ಉಗ್ರರ ಪಡೆ ಎದುರು ಧೂಳಿಪಟವಾದ ಇರಾಕ್ ಸೇನೆಯನ್ನು ಸಜ್ಜುಗೊಳಿಸಲು ಅಮೇರಿಕ ಲಕ್ಷ ಲಕ್ಷ ಡಾಲರ್ ಸುರಿದಿತ್ತು. ಈಗ ಒಬಾಮ ಈ ಉಗ್ರರ ನಿರ್ನಾಮಕ್ಕಾಗಿ ಇನ್ನೂ ಹೆಚ್ಚಿನ ವಿಮಾನ ದಾಳಿಗಾಗಿ ಕಾಂಗ್ರೆಸ್ಸಿನ ಅನುಮೋದನೆ ಕೇಳುತ್ತಿದ್ದಾರೆ. ಇದರ ಜೊತೆಗೇ ಇರಾಕ್ ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ತನ್ನದೇ ಆದ ಸೈನಿಕರನ್ನು ಹೊಂದಬೇಕಾಗಿದೆ. ತೈಲ ಬೆಲೆಗಳಲ್ಲಿ ಕುಸಿತ ಎಂದರೆ, ಇರಾಕ್ ತನ್ನ ಸೈನ್ಯಕ್ಕೆ ಸಂಬಳ ನೀಡಲು ಸಾಧ್ಯವೇ ಇಲ್ಲ.

ಹಾಗಾಗಿ ಈ ತೈಲಬೆಲೆಯ ಕುಸಿತ ಅಲ್ಪಕಾಲಾವಧಿಯ ವಿದ್ಯಮಾನದಂತೆ ಕಾಣಿಸುತ್ತಿದೆ. ಮೂಲತಃ ಈ ಮುಂದಿನ ಕಾರಣಗಳಿಂದಾಗಿ: ಒಂದು, ಕೃತಕವಾಗಿ ಸೃಷ್ಟಿಯಾದ ಅತಿ ಸರಬರಾಜು ದಾಸ್ತಾನು. ಎರಡು, ಅಂತರಾಷ್ಟ್ರೀಯವಾಗಿ ಈ ಉದ್ಯಮದ ಪಾಲುದಾರರು ಮಧ್ಯಪೂರ್ವ ಏಷ್ಯಾದ ಈ ಎಲ್ಲಾ ಕಾದಾಟಗಳಿಂದಾಗಿ ಅತಿ ಹೆಚ್ಚಿನ ಲಾಭ ಪಡೆಯುವ ಹವಣಿಕೆಯಲ್ಲಿದ್ದಾರೆ. ಮೂರು, ಮಾಲಿನ್ಯಗೊಳಿಸಲು ಅನುವು ಮಾಡಿಕೊಟ್ಟು, ಲಾಭಮಾಡಿದರಷ್ಟೇ ಅಮೇರಿಕಾದ ಈ ನೂತನ ಫ್ರ್ಯಾಕಿಂಗ್

ಕೈಗಾರಿಕೆಗಳು ಉಳಿಯಲು ಸಾಧ್ಯ. ನಾಲ್ಕು, ಅಮೇರಿಕ ವಿಶ್ವವನ್ನು ತನ್ನ ಚದುರಂಗದಾಟದ ಮಣೆಯಾಗಿಸಿ, ತನ್ನ 'ರಾಜ'ನನ್ನಷ್ಟೇ ಎಚ್ಚರಿಕೆಯಿಂದ ಕಾಪಾಡಿಕೊಂಡು, ಇತರ ದೇಶಗಳನ್ನು ತನ್ನ ದಾಳಗಳಂತೆ ತನಗೆ ಬೇಕಾದಂತೆ ಉರುಳಿಸಲು ಸಾಧ್ಯವಾಗುತ್ತಿಲ್ಲ. ಐದು, ಅಮೇರಿಕ ಹಾಗೂ ಸೌದಿಗಳ ತೈಲ ವ್ಯವಹಾರಗಳು ಸೃಷ್ಟಿಸಿದ ಯುದ್ಧಗಳಿಂದಾಗಿ ಸ್ಥಳೀಯ ಜನತೆ ಬಲಿಯಾಗುತ್ತಿರುವುದು ರಹಸ್ಯವಾಗೇನೂ ಉಳಿದಿಲ್ಲ. ಆರು, ಸಂಶಯಾಸ್ಪದ ವ್ಯವಹಾರಗಳನ್ನು ಕುದುರಿಸುತ್ತ, ರಾಕ್ಷಸ ಬಲವನ್ನು ಉಪಯೋಗಿಸಿ ತನ್ನ ಹಿಡಿತವನ್ನು ಬಿಗಿಗೊಳಿಸುವ ಅಮೇರಿಕಾದ ನೀತಿ ಜಗತ್ತಿನಾದ್ಯಂತ ವಿಶ್ವಾಸಾರ್ಹತೆಯನ್ನು ಬಹುಬೇಗ ಕಳೆದುಕೊಳ್ಳುತ್ತಿದೆ.

ಹೌದು, ಹೀಗೆ ನಾವು ಹೇಳುತ್ತಾ ಹೋಗಬಹುದು. ಇದೆಲ್ಲದರ ಒಟ್ಟರ್ಥ ಇಷ್ಟೆ. ತೈಲ ಬೆಲೆಗಳು ಅಂತರ್‍ರಾಷ್ಟ್ರೀಯ ರಾಜಕೀಯಕ್ಕೆ ತಳಕು ಹಾಕಿಕೊಂಡಿದೆ ಮತ್ತು ಈ ರಾಜಕೀಯ ಬದಲಾಗುತ್ತಲೇ ಇದೆ.

**(ಲೇಖಕಿ ಅನುರಾಧಾ ಎಂ ಚೆನೋಯ್, ದೆಹಲಿಯ ಜವಾಹರಲಾಲ್ ನೆಹರೂ ವಿಶ್ವವಿದ್ಯಾನಿಲಯದ 'ಅಂತಾರಾಷ್ಟ್ರೀಯ ಅಧ್ಯಯನಗಳ ಶಾಲೆಯ'ಯಲ್ಲಿ ಪ್ರಾಧ್ಯಾಪಕರು)**

(ಕನ್ನಡಕ್ಕೆ: **ಬಿ.ಎಸ್. ದಿವಾಕರ್**

ಕೃಪೆ: **ದ ನ್ಯೂ ಇಂಡಿಯನ್ ಎಕ್ಸ್‌ಪ್ರೆಸ್, ೫, ಡಿಸೆಂ. ೨೦೧೪)**

---

# ಮಾನವರಲ್ಲಿ ಅಶಾಂತಿ, ಸ್ವಾರ್ಥ ಮತ್ತು ಕ್ರೌರ್ಯ ಹೆಚ್ಚುವುದು ಏಕೆ?

**–ಡಾ. ಎ.ಎನ್. ನಾಗರಾಜ್**



**ಹೆ**ಣ್ಣಿನ ಮೇಲಿನ ಅತ್ಯಾಚಾರಗಳು, ದಲಿತರ ಮತ್ತು ಬಡವರ ಮೇಲಿನ ದೌರ್ಜನ್ಯಗಳು, ಅಶಕ್ತ ದೇಶಗಳ ಮೇಲೆ ಬಲರಾಷ್ಟ್ರಗಳ ಆಕ್ರಮಣ, ಇತ್ಯಾದಿಗಳು ಕೆಲವು ಮಾನವರು ತಮಗಿಂತ ಅಶಕ್ತರಾದವರ ಮೇಲೆ ಅಧಿಕಾರ ಚಲಾಯಿಸುವ ನಕಾರಾತ್ಮಕ ಜೀವನ ಧೋರಣೆಗಳ ಪರಿಣಾಮಗಳು. ಸ್ವಾರ್ಥ, ಶೋಷಕ ಮನೋಭಾವ, ದ್ವೇಷ, ಕ್ರೌರ್ಯ ಇತ್ಯಾದಿಗಳು ಇಂತಹ ಜೀವನ ಧೋರಣೆಗಳ ಬೇರೆ ಬೇರೆ ಸ್ವರೂಪಗಳು. ಕೆಲವು ಮಾನವರು ಇಂತಹ ಧೋರಣೆಗಳನ್ನು ಏಕೆ ಹೊಂದಿರುತ್ತಾರೆ ಎಂಬುದರ ಬಗ್ಗೆ ಅನೇಕ ಮನಃಶ್ಶಾಸ್ತ್ರಜ್ಞರು ಅಧ್ಯಯನ ಮಾಡಿದ್ದಾರೆ. ಅವರುಗಳ ಸಂಶೋಧನೆಗಳ ಸಾರಾಂಶವನ್ನು ಎರಿಕ್ ಫ್ರಾಮ್ ಎಂಬ ವಿಶ್ವವಿಖ್ಯಾತ ವಿಜ್ಞಾನಿ ವಿವರವಾಗಿ ಬರೆದಿದ್ದಾರೆ. ಅವರ ವಿಚಾರಧಾರೆಯ ಸಾರಾಂಶವನ್ನು ಮುಂದೆ ಕೊಟ್ಟಿದ್ದೇನೆ.

**ಅನಾಥಪ್ರಜ್ಞೆ ಮತ್ತು ಕೆಲವು ತಾತ್ಕಾಲಿಕ ಪರಿಹಾರಗಳು:**

ಮಾನವರಲ್ಲಿ ಯೋಚನಾ ಶಕ್ತಿ ಬೆಳೆದಂತೆ, ತಾವು ಇತರ ಮಾನವರಿಂದ ಬೇರೆ, ಇತರ ಪ್ರಾಣಿಗಳಿಂದ ಬೇರೆ, ಮತ್ತು ಪ್ರಕೃತಿಯ ಇತರ ಸೃಷ್ಟಿಗಳಿಂದ ಬೇರೆ ಎನ್ನುವುದರ ಅರಿವು ಸ್ವಾಭಾವಿಕವಾಗಿ ಮೂಡುತ್ತದೆ. ಈ ಬೇರೆತನದ ಅರಿವಿನಿಂದ ಅವರಲ್ಲಿ ಒಂಟಿತನದ ಪ್ರಜ್ಞೆ (ಅನಾಥಪ್ರಜ್ಞೆ) ಬೆಳೆದು ತೀವ್ರವಾದ ವೇದನೆಯನ್ನುಂಟುಮಾಡುತ್ತದೆ. ಈ ವೇದನೆಯನ್ನು ಕಡಿಮೆ ಮಾಡಿಕೊಳ್ಳುವುದಕ್ಕೆ ಹಲವಾರು ರೀತಿಯ ಜೀವನಧೋರಣೆಗಳನ್ನು ಪರಿಹಾರಗಳಾಗಿ ಮಾನವರು ಅಳವಡಿಸಿಕೊಳ್ಳುತ್ತಾರೆ. ಏಕೆಂದರೆ ಇವು ಅವರ ಒಂಟಿತನಕ್ಕೆ ತಾತ್ಕಾಲಿಕ ಪರಿಹಾರಗಳನ್ನು ಕೊಡುತ್ತವೆ. ಆದರೆ ಕಾಲಕ್ರಮೇಣ ಅವು ಅವರ ಒಂಟಿತನವನ್ನು ಹೆಚ್ಚಿಸುತ್ತವೆ. ಆದ್ದರಿಂದಲೇ ಅವುಗಳನ್ನು ನಕಾರಾತ್ಮಕ ಜೀವನಧೋರಣೆಗಳು ಎಂದು ಕರೆಯುತ್ತಾರೆ. ಇಂತಹ ಧೋರಣೆಗಳಿಗೆ ಉದಾಹರಣೆಗಳು: ತಮಗಿಂತ ಅಶಕ್ತರಾದ ಮಾನವರ ಮೇಲೆ ಪ್ರಭುತ್ವವನ್ನು ಸಾಧಿಸುವುದು, ಗಂಡಸು ಹೆಣ್ಣಿನ ಮೇಲೆ, ಬಲಿಷ್ಠ ಜಾತಿಯವನು ದುರ್ಬಲ ಜಾತಿಯವರ ಮೇಲೆ, ಹಣವಂತನು ಬಡವರ ಮೇಲೆ, ಮಾನವರು ಅಶಕ್ತ ಪ್ರಾಣಿಗಳ ಮತ್ತು ಪ್ರಕೃತಿಯ ಮೇಲೆ ಅಧಿಕಾರ ಚಲಾಯಿಸುವುದು; ತಮ್ಮ ಉದ್ಯಮಗಳಿಗೆ ಬೇಕಾದ ಕಚ್ಚಾ ವಸ್ತುಗಳಿಗಾಗಿ, ತೈಲಕ್ಕಾಗಿ, ಅಥವಾ ವ್ಯವಸಾಯ-ಮನೆ-ಅಣೆಕಟ್ಟು ಇತ್ಯಾದಿಗಳನ್ನು ಕಟ್ಟುವುದಕ್ಕಾಗಿ ನೂರಾರು ವರ್ಷ ಬೆಳೆದಿದ್ದ, ಮತ್ತು ಪರಿಸರದ ಗಾಳಿಯನ್ನು ಸ್ವಚ್ಛ ಮಾಡುವ ಮನೋಹರವಾದ ಕಾಡುಗಳನ್ನು ಕಡಿದುಹಾಕುವುದು, ನದಿಗಳು, ಕೆರೆಗಳು, ಸರೋವರಗಳು ಇತ್ಯಾದಿ ಜಲಮೂಲಗಳನ್ನು ತನ್ನ ತತ್ಕ್ಷಣದ ಲಾಭಕ್ಕಾಗಿ ಕೀಟನಾಶಕಗಳು, ಪಾದರಸ-ಆರ್ಸೆನಿಕ್-ವಿಕಿರಣ ವಸ್ತುಗಳು ಇತ್ಯಾದಿ ಉದ್ಯಮಗಳ ಕೊಳಚೆಗಳಿಂದ ಕಲುಷಿತಗೊಳಿಸುವುದು ಇತ್ಯಾದಿ. ಹೀಗೆ ಇತರ ಮಾನವರ ಮೇಲೆ ಮತ್ತು ಪ್ರಕೃತಿಯ ಮೇಲೆ ತಮ್ಮ ಪ್ರಭುತ್ವವನ್ನು ಸಾಧಿಸುವುದರ ಮೂಲಕ, ತಮ್ಮ ವ್ಯಕ್ತಿತ್ವವು ಸಂಪನ್ನವಾಯಿತೆಂದು ಭಾವಿಸಿಕೊಂಡು, ತಮ್ಮ ಒಂಟಿತನವನ್ನು ತಾತ್ಕಾಲಿಕವಾಗಿ ಕಡಿಮೆಮಾಡಿಕೊಳ್ಳುತ್ತಾರೆ ಅಥವಾ ತಮ್ಮ ಮೇಲೆ ಪ್ರಭುತ್ವ ಸಾಧಿಸುವವರಿಗೆ ಅಧೀನರಾಗಿ ಅವರೊಡನೆ ಕೈಜೋಡಿಸುವುದರ ಮೂಲಕ ತಮ್ಮ ವ್ಯಕ್ತಿತ್ವವು ಅವರ ವ್ಯಕ್ತಿತ್ವದ ಒಂದು ಭಾಗವಾಗಿ ವಿಸ್ತಾರವಾಯಿತೆಂದು ಭ್ರಮಿಸಿಕೊಂಡು ತಮ್ಮ ಒಂಟಿತನಕ್ಕೆ ತಾತ್ಕಾಲಿಕ ಪರಿಹಾರವನ್ನು ಪಡೆದುಕೊಳ್ಳುತ್ತಾರೆ. ಆದರೆ, ಈ ಅಧಿಕಾರ ಚಲಾವಣೆಯ ಅಥವಾ ಅಧೀನತೆಯ ಪರಿಹಾರಗಳು ಕಾಲಕ್ರಮೇಣ ಮಾನವ-ಮಾನವರ, ಹೆಂಗಸು-ಗಂಡಸರ ಮಧ್ಯೆ, ಮಾನವ-ಪ್ರಕೃತಿಯ ಮಧ್ಯೆ ವಿರಸವನ್ನು ಸೃಷ್ಟಿಸಿ, ಮಾನವರ ಅನಾಥಪ್ರಜ್ಞೆಯನ್ನು ಮತ್ತು ಒಂಟಿತನವನ್ನು ಹೆಚ್ಚಿಸುತ್ತವೆಯೇ ಹೊರತು, ಅವುಗಳಿಗೆ ಸೂಕ್ತವಾದ ಮತ್ತು ಶಾಶ್ವತವಾದ ಪರಿಹಾರಗಳಲ್ಲ,



**ಶಾಶ್ವತ ಪರಿಹಾರಗಳು: ಧನಾತ್ಮಕ ಧೋರಣೆಗಳ ಆಯ್ಕೆ:**

ಮೇಲೆ ವಿವರಿಸಿರುವ ಜೀವನಧೋರಣೆಗಳಿಗೆ ಬದಲಾಗಿ ಮಾನವರು ತಮ್ಮ ಅನಾಥಪ್ರಜ್ಞೆಗೆ ಬಹುಕಾಲ ನಿಲ್ಲುವ ಶಾಶ್ವತವಾದ ಪರಿಹಾರಗಳನ್ನು ಆಯ್ದುಕೊಳ್ಳಬಹುದು. ಇವುಗಳನ್ನು ಸಕಾರಾತ್ಮಕ ಧೋರಣೆಗಳು ಎಂದು ಕರೆಯುತ್ತಾರೆ. ಇವುಗಳಿಗೆ ಕೆಲವು ಉದಾಹರಣೆಗಳು: ನಮ್ಮಲ್ಲಿರುವ ವಸ್ತುಗಳನ್ನು ಮತ್ತು ಐಶ್ವರ್ಯವನ್ನು ಇತರರೊಡನೆ ಹಂಚಿಕೊಳ್ಳುವುದು; ಎಲ್ಲರಲ್ಲಿಯೂ ಇರುವ ಪ್ರೀತಿಸುವ ಶಕ್ತಿಯನ್ನು ಮತ್ತು ಸಮಾಜದಲ್ಲಿ ಅನೇಕರಿಗೆ ಉಪಯುಕ್ತವಾಗುವ ಒಳ್ಳೆಯ ಗುಣಗಳನ್ನು ಗುರುತಿಸುವುದು; ಹೆಣ್ಣು-ಗಂಡುಗಳ, ಬಡವ-ಬಲ್ಲಿದರ, ದೀನ-ದಲಿತರ ಭೇದವಿಲ್ಲದೆ, ಎಲ್ಲ ಜನಗಳೂ ನಮ್ಮ ಪ್ರೀತಿ-ಗೌರವಗಳಿಗೆ ಅರ್ಹರು ಎಂಬುದನ್ನು ತಿಳಿದುಕೊಳ್ಳುವುದು; ಅವರೊಳಗೆ ಮತ್ತು ನಮ್ಮೊಳಗೆ ಇರುವ ಹಲವಾರು ಸಮಾನ ಅಂಶಗಳನ್ನು ಗುರುತಿಸಿ, ಎಲ್ಲರ ಒಳಿತಿಗಾಗಿ ಕೆಲಸ ಮಾಡುವುದರಲ್ಲಿ ಆನಂದ ಮತ್ತು ತೃಪ್ತಿಗಳನ್ನು ಪಡೆದುಕೊಳ್ಳುವುದು; ನಾವೆಲ್ಲರೂ ಆಗಾಗ್ಗೆ ತಪ್ಪುಗಳನ್ನು ಮಾಡುವುದು ಸಹಜ ಎಂಬುದನ್ನು ನೆನಪಿಟ್ಟುಕೊಂಡು, ನಮ್ಮ ತಪ್ಪುಗಳನ್ನು ಕ್ಷಮಿಸಿಕೊಂಡು ತಿದ್ದಿಕೊಳ್ಳುವುದು ಮತ್ತು ಇತರರು ಮಾಡುವ ತಪ್ಪುಗಳನ್ನು ಕ್ಷಮಿಸುವುದು; ಸಸ್ಯಗಳಲ್ಲಿ, ಪ್ರಾಣಿಗಳಲ್ಲಿ, ಪ್ರಕೃತಿಯ ಅನೇಕ ತರಹದ ಸೃಷ್ಟಿಗಳಲ್ಲಿ ಮತ್ತು ಮಾನವರಲ್ಲಿಯೂ ಇರುವ ವಿಶಿಷ್ಟಶಕ್ತಿಯ ಬೇರೆಬೇರೆ ರೀತಿಯ ರೂಪಗಳನ್ನು ಮತ್ತು ಸೌಂದರ್ಯವನ್ನು ಗುರುತಿಸುವುದು ಮತ್ತು ಆನಂದಿಸುವುದು; ಪ್ರಕೃತಿಯ ಬೇರೆಬೇರೆ ರೂಪಗಳನ್ನು ಗೌರವಿಸುವುದು, ಪ್ರೀತಿಸುವುದು ಮತ್ತು ಸಂರಕ್ಷಿಸುವುದು ನಾವು ನಮ್ಮನ್ನು ಸಂರಕ್ಷಿಸಿಕೊಳ್ಳುವ ಪ್ರಕ್ರಿಯೆಯ ಒಂದು ಭಾಗ ಎನ್ನುವುದನ್ನು ಅರಿತುಕೊಳ್ಳುವುದು, ನಮ್ಮಲ್ಲಿರುವ ಸೃಜನಾತ್ಮಕ ಶಕ್ತಿಗಳನ್ನು ಬೆಳೆಸಿಕೊಳ್ಳುವುದು (ಉದಾ: ಬಡಗಿಯ ಕೆಲಸ, ಚಿತ್ರ ರಚನೆ, ಸಂಗೀತ, ಅಡಿಗೆಯ ಕೆಲಸ, ಮಕ್ಕಳನ್ನು ಬೆಳೆಸುವುದು, ಹಬ್ಬಗಳ ಆಚರಣೆ, ವ್ಯವಸಾಯ ಇತ್ಯಾದಿಗಳು), ಇತರರು ತಮ್ಮ ಸೃಜನಾತ್ಮಕ ಶಕ್ತಿಗಳನ್ನು ಬೆಳೆಸಿಕೊಳ್ಳುವುದಕ್ಕೆ ಸಹಾಯ ಮಾಡುವುದು.

**(೧೫ನೇ ಪುಟಕ್ಕೆ)**

**ಯುವ ಸಮಾಜವಾದಿ ಚಿಂತನ ವೇದಿಕೆ**

# ದೊಡ್ಡೋಳಾಗೋದಂದ್ರೆ....

– ಚರಿತಾ




**ಟೋ**ಲ್‌ಗೇಟಲ್ಲಿ ಟಿಕೆಟ್ ಇಶ್ಯು ಮಾಡೋಕಂತ ನಿಂತಿದ್ದ ಬಸ್ಸಿನ ನೀರವತೆಯಲ್ಲಿ ಅನಿರೀಕ್ಷಿತವಾಗಿ 'ಫಟ್ಟ್...' ಅನ್ನೊ ರಭಸದ ಸದ್ದಾಗಿತ್ತು. ಅದರ ಹಿಂದೆಯೇ 'ಲೋಫರ್..!' ಅಂದಿದ್ದೂ ಕೇಳಿತ್ತು. ಅಲ್ಲಿಗೆ ಅದು ಯಾರು? ಯಾರಿಗೆ? ಯಾಕೆ? ಏನು?... ಇತ್ಯಾದಿತ್ಯಾದಿ ಪ್ರಶ್ನೆಗಳಿಗೆಲ್ಲ ಥಟ್ಟಂತ ಉತ್ತರ ಹೊಳೆದುಬಿಟ್ಟಿತ್ತು ! ವಿಚಿತ್ರ ಸಿಟ್ಟು, ಖುಶಿ, ವೇದನೆ ತೀವ್ರವಾಗಿ ಒಳಗೊಳಗೇ ಉಕ್ಕಿಬಂತು..

ಕಾಲಿಗೆ ಚಕ್ರ ಕಟ್ಟಿಕೊಂಡ ಹಾಗೆ ಊರೂರು ಸುತ್ತುತ್ತಿದ್ದವಳು ಈಗ ನೈಟ್‌ಜರ್ನಿಗೆ ಸುತಾರಾಂ ರಾಜಿಯಿಲ್ಲ. ಒಬ್ಬಳೇ ಹಗಲು ಹೊತ್ತು ಓಡಾಡೋದಾದ್ರು ಪಕ್ಕದ ಸೀಟಿಗೆ ಬ್ಯಾಗ್ ಇಟ್ಟು, ಕೇಳಿದವರಿಗೆಲ್ಲ "ಬರ್ತಾರೆ" ಅಂತಂದು, ಯಾವುದಾದ್ರು ಹೆಣ್ಣುಜೀವ ಬಂದು ಕೂರಬಾರದಿತ್ತಾ ಅಂತ ಹಲುಬುವ ಮನಸ್ಸು. (ಬಹುಶಃ 'ದೊಡ್ಡೋಳಾಗೋದಂದ್ರೆ' ಇದೇ ಇರ್ಬೇಕು – ಅಪಾಯಗಳನ್ನು ಎದುರಿಸಲು ಸಜ್ಜುಗೊಳ್ಳೋದು ಅಂತ!) ಪಕ್ಕ ಕೂರಲು ಹವಣಿಸುವವರ ಕಣ್ತಪ್ಪಿಸುತ್ತ, ಜಾಣ ಕಿವುಡಳಾಗಿ ಕೂತಾಗಲೂ ಭಂಡತನದಲ್ಲಿ ಒತ್ತರಿಸಿಕೊಳ್ಳುವ ಘಡವಾಗಳೇ ಬಹುಪಾಲು. ಕಳ್ಳನಿದ್ದೆ ಮಾಡುತ್ತ ಮೈಮೇಲೆ ಬೀಳುವ, ಕುಂಟುನೆಪದಲ್ಲಿ ಮಾತಿಗೆಳಸುವ, ಮೈತಾಕಿಸುವ ಕೀಚಕರಿಗೆ ಬೈಗುಳದ ಟ್ರೀಟ್ಮೆಂಟ್ ರೆಡಿಯಾಗೇ ಇಟ್ಟಿರಬೇಕು. ಕನಿಷ್ಟಪಕ್ಷ ಹರಿತಗಣ್ಣಾದರೂ ಇರಲೇಬೇಕು. ಇನ್ನು, ಸೀಟ್ ಸಂದಿಯಲ್ಲಿ ನುಸುಳಿಬರುವ ಕೈಗಳಿಗೆ 'ಸೇಫ್ಟಿಪಿನ್' ಪ್ರಯೋಗ ಇದ್ದೇ ಇದೆ! ಅಂತೂ ಪ್ರಯಾಣದ ತುಂಬ ಮೈಯೆಲ್ಲ ಕಣ್ಣಾಗಿ–ಕಿವಿಯಾಗಿ(ಕೆಲವೊಮ್ಮೆ ಬಾಯಿಯೂ ಆಗಿ), ರೋಮರೋಮಕ್ಕೂ ಎಚ್ಚರವಾಗಿ, ಹಾದಿ ವಿಪರೀತ ದೂರವಾದಂತನಿಸುವುದು ಮಾಮೂಲು! ಬಹುಶಃ ಯಾವ ಮೆಡಿಟೇಶನ್ ಕೋರ್ಸ್‌ಲ್ಲೂ ಇಷ್ಟು ಎಚ್ಚರದ ಧ್ಯಾನ ಮಾಡಿರಲಿಕ್ಕಿಲ್ಲ ನಾನು! ಹಾಗಾಗಿ ಇಂಥ ಪ್ರಯಾಸಕರ ಪ್ರಯಾಣಗಳೇ ನನ್ನ ಪಾಲಿನ ನಿಜವಾದ 'ಧ್ಯಾನ ಕೇಂದ್ರಗಳು'!

ಈ ಜನ, ಈ ಪ್ರಯಾಣ ನನಗೆ ಕಲಿಸಿರುವ ಎಚ್ಚರ ಇಲ್ಲೀವರೆಗು ನನ್ನ ಕಾಯುತ್ತ ಬಂದಿದೆ. ಹಾಗೇ ಬದುಕನ್ನು ಮತ್ತಷ್ಟು ಸ್ಪಷ್ಟವಾಗಿ ನೋಡುವುದನ್ನು ಕಲಿಸಿದೆ. ನನ್ನ ಪಾಲಿಗಿರುವ ಸ್ವಾತಂತ್ರ್ಯದ ವ್ಯಾಖ್ಯಾನವೂ ಒಂದು ಮಿತಿಯಲ್ಲಿ ಮಾತ್ರ ಇರಬಹುದಾದ್ದು ಎಂಬುದನ್ನೂ ಮನವರಿಕೆ ಮಾಡಿಸಿದೆ. ಮುಂಜಾನೆ ಒಬ್ಬಳೇ ವಾಕಿಂಗ್ ಹೋಗೋಹಾಗಿಲ್ಲ. (ನನಗಾಗಿಯೇ ಈ ಬೆಳಕಾಗಿದೆ ಎನಿಸುವ ಭಾವಕ್ಕೂ, ಪ್ರತೀಸಲದ ವಾಕ್ನಲ್ಲಿ ನಾನು ಕಂಡುಕೊಳ್ಳುತ್ತಿದ್ದ ಆ ಮುದಕ್ಕೂ ಕತ್ತರಿಬಿದ್ದಿದ್ದು ಕೆಲವು ವರ್ಷಗಳ ಹಿಂದೆ, ಆತಂಕ ಹುಟ್ಟಿಸುವ ಒಂದು ಕೆಟ್ಟ ಘಟನೆಯಿಂದಾಗಿ.)

ಕತ್ತಲಾದಮೇಲೆ ಬಸ್ಟಾಪಲ್ಲಿ ನಿಲ್ಲೋಹಾಗಿಲ್ಲ–ಒಂಟಿಯಾಗಿ ತಿರುಗೋಹಾಗಿಲ್ಲ. ಇನ್ನು, ಕಣ್ಣು ಕುಕ್ಕುವ ಬೆಳ್ಳಂಬೆಳಕಲ್ಲೂ ಎಚ್ಚರ ತಪ್ಪೋಹಾಗಿಲ್ಲ,... ಈ 'ಇಲ್ಲ'ಗಳ ಲಿಸ್ಟು ಮಾತ್ರ ಎಲ್ಲೂ ಬದಲಾಗದೇ ಬೆಳೆಯುತ್ತಲೇ ಇದೆಯಲ್ಲ! ನೈಟ್ ಲ್ಯಾಂಡ್‌ಸ್ಕೇಪ್ ಮಾಡ್ಬೇಕು, ರಾತ್ರಿ ಕತ್ತಲಲ್ಲಿ ಒಬ್ಬಳೇ ಊರೆಲ್ಲ ತಿರುಗಬೇಕು ಅನ್ನುವ ನನ್ನ ಹುಚ್ಚು ಆಸೆ ಇನ್ನೂ ಆಸೆಯಾಗೇ ಉಳಿದುಬಿಟ್ಟಿದೆ. ಹಾಗನಿಸಿದಾಗೆಲ್ಲ, ನನ್ನ ನಾನು 'ಮಾಯ' ಮಾಡಿಕೊಳ್ಳುವ ಯಾವುದಾದ್ರು ಮ್ಯಾಜಿಕ್ ನನಗೆ ಗೊತ್ತಿರಬೇಕಿತ್ತು ಅನಿಸ್ತಿತ್ತು! ಅಥವಾ ನಾನೊಬ್ಬ ಲೇಡಿ ಫ್ಯಾಂಟಮ್ ಥರ ಯಾರಿಗೂ ಅಂಜದೆ ಬೇಕಾದಲ್ಲಿ ತಿರುಗಾಡಿಕೊಂಡಿರೋ ಹಾಗಿದ್ರೆ ಎಷ್ಟ್ ಚೆಂದ ಅನಿಸ್ತಿತ್ತು. ಕೆಲವೊಮ್ಮೆ ಇದೇ ಕಾರಣಕ್ಕೆ ನಾನು ಹುಡುಗ ಆಗಿರ್ಬೇಕಿತ್ತು ಅಂತಲೂ ಅನಿಸಿತ್ತು! ಈಗ 'ದೊಡ್ಡೋಳಾಗಿದೀನಿ'... ಫ್ಯಾಂಟಸಿಗಿಂತ ರಿಯಾಲಿಟಿಯಲ್ಲೆ ಬದುಕಲು ಕಲಿಯುತ್ತಿದ್ದೀನಿ! ಈಗ ನೈಟ್ ಲ್ಯಾಂಡ್‌ಸ್ಕೇಪ್ ಹಾಗಿರಲಿ, ಹಾಡಹಗಲಲ್ಲೂ ಫೀಲ್ಡ್‌ವರ್ಕ್ ಮಾಡೋಕೆ ಲೇಡಿ ಫ್ಯಾಂಟಮ್ಮೇ ಆಗಬೇಕಾಗಿದೆ! ಆದ್ರೆ, ಫ್ಯಾಂಟಮ್‌ಗೇ ಜಾಸ್ತಿ ಕಷ್ಟ ಅಂತ ತಿಳಿಯೋಕೆ ಇಷ್ಟು ವರ್ಷ ಬೇಕಾಯ್ತು ನಂಗೆ!



ಆವತ್ತು ನಾನು ಹೊರಟಿದ್ದು ದೂರದ ಊರಿನ ಒಬ್ಬಜ್ಜೀನ ಮಾತಾಡಿಸೋದಕ್ಕೆ. ಅವರು ಜಾನಪದ ಹಾಡುಗಾರ್ತಿ. ಆಗಷ್ಟೆ ಒಂದು ವಿಶೇಷ ಪ್ರಶಸ್ತಿ ಸಂದಿದ್ದರಿಂದ ಅವರನ್ನು ಮಾತಾಡಿಸಿ, ಒಂದಷ್ಟು ಹೊತ್ತು ಕಣ್ತುಂಬಿ, ಮನದುಂಬಿಕೊಳ್ಳುವ ನೆಪ ಸಿಕ್ಕಿತ್ತು. ಮೈಸೂರಿಂದ ಬೆಳಗಿನ ಬಸ್ಸು ಹತ್ತಿದ್ದ ನನಗೆ ಸ್ವಲ್ಪಹೊತ್ತಿಗೆ ಬಸ್ಸಲ್ಲಿದ್ದದ್ದು ಬಹುಶಃ ನಾನೊಬ್ಬಳೇ ಮಹಿಳೆ ಅನಿಸಿ, ಒಂಥರದ ದುಗುಡ, ಆತಂಕ ಆವರಿಸಿಕೊಂಡಿತ್ತು. ಪಕ್ಕದ ಸೀಟಿಗೆ ನನ್ನ ದೊಡ್ಡ ಬ್ಯಾಗ್ ಇರಿಸಿ, ಕತ್ತು ತಿರುಗಿಸಿ ಹಿಂದಿನ ಸೀಟಲ್ಲಿ ಯಾರಿದಾರೆ ಅಂತ ಗಮನಿಸಿಕೊಂಡಿದ್ದೆ. ಆತ ಒಬ್ಬ ಮಧ್ಯವಯಸ್ಕ. ಒಮ್ಮೆ ನನ್ನ ಸೀಟಿನ ಕಡೆ ಬಾಗಿ ಕೂರೋದು, ಮತ್ತೊಮ್ಮೆ ಕಿಟಕಿ ಗಾಜನ್ನು ಆಚೀಚೆ ಎಳೆದಾಡೋದು ನಡೆದಿತ್ತು. ನನಗೋ ಆತನನ್ನೂ ಒಳಗೊಂಡು ಬಸ್ಸಲ್ಲಿದ್ದ ಆ ಎಲ್ಲಾ ಗಂಡಸರೂ ಎಡೆಬಿಡದೆ ನನ್ನನ್ನೇ ದಿಟ್ಟಿಸುತ್ತಿರೋ ಹಾಗೆ, ಅವರೆಲ್ಲರ ಕಣ್ಣ ಈಟಿಗಳು ಕಂಡಕಂಡಲ್ಲಿ ತಿವಿಯುತ್ತಿರೋ ಹಾಗೆ ಅನಿಸಿ, ದುಪಟ್ಟಾವನ್ನು ಮತ್ತಷ್ಟು ಅಗಲ ಮಾಡಿ, ನನ್ನ ಕತ್ತು, ಕೈಯನ್ನೂ ಮುಚ್ಚಿಕೊಂಡು ಕೂತೆ. ಎದೆಬಡಿತ ಮಾತ್ರ ನನಗೆ ಸ್ಪಷ್ಟವಾಗಿ ಕೇಳೋ ಹಾಗಿತ್ತು! ಆದರೂ ಆತಂಕ ತೋರಿಸುವಂತಿರಲಿಲ್ಲ. ಆರಾಮಾಗೇ ಇದೀನಿ ಅನ್ನೋಹಾಗೆ ಇಯರ್‌ಫೋನ್ ಕಿವಿಗಿಟ್ಟುಕೊಂಡ್ರೆ, "...ಕಾಂತಾನಿಲ್ಲದಮ್ಯಾಲೆ ಏಕಾಂತವ್ಯಾತಕೆ..." ಅಂತ ರತ್ನಮಾಲಾ ಪ್ರಕಾಶ್ ಹಾಡೋದಕ್ಕೆ ಶುರುಮಾಡಿದ್ರು. ಅವರನ್ನು ಮಧ್ಯದಲ್ಲೆ ತಡೆದು, ನನ್ನ ಕಷ್ಟ ಹೇಳಿಕೊಳ್ಳಬೇಕೆನಿಸಿತು. ಅವರೋ ಈ ಲೋಕದ ಗೊಡವೆಯೇ ತನಗಿಲ್ಲವೆಂಬಂತೆ ಹಾಡುತ್ತಲೇ ಇದ್ರು. ಆ ಹಾಡು ಬರೆದ ಕಂಬಾರರು ಅಲ್ಲೇನಾದ್ರು ಕಾಣಬಹುದಾಂತ ನೋಡಿದರೆ ಕಂಡಿದ್ದು ಆ ಕಂಡಕ್ಟರ್. ಯಾಕೋ ಅವನೂ ಕೂಡ ನನ್ನ ಕಡೆಗೆ ಒಂಥರದ ಹುಳ್ಳನಗೆ ನಕ್ಕಂತಾಗಿ, ನನ್ನ ಆತಂಕ ಇವನಿಗೆ ಗೊತ್ತಾಗಿಹೋಯ್ತೇನೊ ಅನಿಸಿ ಮತ್ತಷ್ಟು ದಿಗಿಲಾಯ್ತು.

'ಎಲ್ಲಿಗೆ?' ಅನ್ನೋ ಹಾಗೆ ಎದುರು ಬಂದು ನಿಂತ.

ಇಂತಲ್ಲಿಗೆ ಅಂತ ಜೋರಾಗಿ ಹೇಳೋದು ಅಪಾಯ ಅನಿಸಿದ್ದರಿಂದ, ಅವನಿಗೆ ಮಾತ್ರ ಕೇಳೋಹಾಗೆ ಸಣ್ಣದನಿಯಲ್ಲಿ ಹೇಳಿದ್ದೆ... "ದಾವಣಗೆರೇಗಾ?" ಅಂತ ಅಷ್ಟು ದೊಡ್ಡದಾಗಿ, ಇಡೀ ಬಸ್ಸಿಗೆ ನನ್ನ 'ಕೊನೆ ನಿಲ್ದಾಣ' ಅನೌನ್ಸ್ ಮಾಡಿದ್ದ ಆತ. ಆ ಕ್ಷಣ, ಯಮ ಅಂದ್ರೆ ಇವನೇ ಇರ್ಬೇಕು ಅನಿಸಿಬಿಟ್ಟಿತ್ತು! ಹೃದಯ ನೇರ ಬಾಯಿಗೇ ಬಂದಂಗಾಗಿತ್ತು! ಹಿಂದಿನ ಸೀಟಿನ ಆಸಾಮಿಗೂ ಈ ಕಂಡಕ್ಟರ್ಗೂ ಏನೊ ಡೀಲಿಂಗ್ ಇರ್ಬೇಕು ಅಂತೆಲ್ಲ ಅನಿಸತೊಡಗಿ ಬಾಯಿ ಮತ್ತಷ್ಟು ಒಣಗತೊಡಗಿತ್ತು. "ಅರಸೀಕೆರೇಲಿ ಇಳ್ಕೊಂಡು ಅಲ್ಲಿಂದ ಟ್ರೇಯ್ನಲ್ಲಿ ಹೋಗಿ, ಒಬ್ರೆ ಬೇರೆ ಇದೀರಿ. ಈ ಬಸ್ಸು ತಲುಪೋದು ತುಂಬ ಲೇಟು" ಅಂತಂದು ಒಂಥರಾ ನಕ್ಕ. ಈಗ ನಿಜಕ್ಕು ದಿಗಿಲು, ಗೊಂದಲ ಒಟ್ಟೊಟ್ಟಿಗೆ ಆಗಿತ್ತು.

ಬಸ್ ಇಳಿದ ಕೂಡ್ಲೆ, ಹಿಂದೆಯೇ ಇಳಿದು ನನ್ನ ಹಿಂಬಾಲಿಸಿ ಬರಬಹುದಾದ ಮೂರ್ನಾಲ್ಕು ಗಂಡಸರು ನನ್ನ ಹಿಡಿದು ನಿಲ್ಲಿಸ್ಬೌದು,.. ಹೆದರಿಸಿ ಬ್ಯಾಗಲ್ಲಿರೋದೆಲ್ಲ ಕಿತ್ಕೋಬೌದು,.. ಮೈಮೇಲೆ ಕೈ ಹಾಕ್ಲೂಬೌದು ...ಆಗ ನಾನೇನು ಮಾಡ್ಬೇಕು?? ಆದಷ್ಟೂ ಗಾಬರಿಯಾಗದೆ, "ಯಾಕ್ರಪ್ಪ? ಏನು ನಿಮ್ ಪ್ರಾಬ್ಲಮ್ಮು?" ಅಂತ ಗಂಭೀರವಾಗಿ ಕೇಳ್ಬೇಕು... ಕ್ಯಾಮರ, ಆಡಿಯೋ ರೆಕಾರ್ಡರ್, ತಮ್ಮ ಕೊಡಿಸಿದ್ದ ರಿಸ್ಟ್‌ವಾಚು, ತುಂಬ ಇಷ್ಟಪಟ್ಟು ತಕೊಂಡಿದ್ದ ಲೆದರ್ ಪರ್ಸು, ಅದರಲ್ಲಿದ್ದ ಒಂದಷ್ಟು ದುಡ್ಡು–ಫೋಟೋಗಳು, ಬಾಯ್‌ಫ್ರೆಂಡ್ ಥರ ನನ್ನ ಜೊತೆಗಿರುವ ಮೊಬೈಲು, ಆಂಟಿಯೊಬ್ಬರು ಗಿಫ್ಟ್ ಮಾಡಿದ್ದ ಬಿಳಿಹರಳಿನ ಓಲೆ, ಇತ್ಯಾದಿತ್ಯಾದಿ ದೊಡ್ಡ–ಸಣ್ಣ ನೆನಪುಗಳೆಲ್ಲವನ್ನೂ ನಿರ್ಲಿಪ್ತವಾಗಿ, ಕಾಲಜ್ಞಾನಿಯ ಹಾಗೆ ತೆಗೆದುಕೊಟ್ಟುಬಿಡಲು ತಯಾರಾಗ್ಬೇಕು,.. ಹಾಗೆ ಕೊಡುತ್ತ, "ಎಷ್ಟ್ ದಿನಾಂತ ಇಂಥ ಜೀವ್ನ ನಿಮ್ದು? ಯಾಕೆ ಹೀಗೆಲ್ಲ ತೊಂದ್ರೆ ಕೊಡ್ತೀರಿ?" ಅಂತ ನಿರಾಳವಾಗಿ ಕೇಳ್ಬೇಕು!! ...ಅಷ್ಟು ತಣ್ಣಗಿನ ನನ್ನ ಮಾತು ಕೇಳಿ ಅವರಿಗೆ ತಮ್ಮ ಪ್ಲ್ಯಾನ್ ಎಲ್ಲಾ ಮರೆತುಹೋಗ್ಬೇಕು,...!!

(೧೬ನೇ ಪುಟಕ್ಕೆ)

**ಸಮಕಾಲೀನ**

# ಅಭಿವೃದ್ಧಿಯ ಅರ್ಥ–ಅಪಾರ್ಥಗಳು



ಈ ದೇಶಕ್ಕೆ 'ಅಭಿವೃದ್ಧಿ'ಯ ಹುಚ್ಚು ಹತ್ತಿದಂತಿದೆ. ಇದನ್ನು ಹತ್ತಿಸಿದವರು ಮೋದಿ ಎಂದು ಹೇಳಿದರೆ ಅದು ತಪ್ಪಾಗುತ್ತದೆ. ಅಷ್ಟೇ ಅಲ್ಲ, ಇದು ಹುಚ್ಚು ಎಂದು ತಿಳಿಯಲು ಮತ್ತು ಅದನ್ನು ನಿವಾರಿಸಿಕೊಳ್ಳಲು ಅಗತ್ಯವಾಗಿರುವ ಅದರ ರಾಜಕಾರಣವನ್ನು ಅರ್ಥ ಮಾಡಿಕೊಳ್ಳುವಲ್ಲಿಯೂ ಇದರಿಂದ ದಾರಿ ತಪ್ಪುವ ಸಂಭವ ಇದೆ. ಮೂರು ನೂರು ವರ್ಷಗಳ ಹಿಂದೆ ವ್ಯಾಪಾರಕ್ಕೆಂದು ಇಲ್ಲಿಗೆ ಬಂದ ಬ್ರಿಟಿಷರು ನಮ್ಮ ಇಡೀ ದೇಶವನ್ನು ವಶಪಡಿಸಿಕೊಳ್ಳಲು ಮತ್ತು ವಶಪಡಿಸಿಕೊಂಡ ನಂತರ ನಮ್ಮನ್ನು ಸುಗಮವಾಗಿ ಆಳಲು ಯಾವತ್ತು ನಮ್ಮದು ಮೂಢ ಮತ್ತು ಹಿಂದುಳಿದ ದೇಶವೆಂದು ನಮ್ಮನ್ನು ನಂಬಿಸಲಾರಂಭಿಸಿದರೋ ಅಂದೇ ಈ 'ಅಭಿವೃದ್ಧಿ' ಎಂಬ ಹುಚ್ಚು ನಮಗೆ ತಗುಲಿತು. ಈ 'ಅಭಿವೃದ್ಧಿ' ಎಂಬುದು ಬ್ರಿಟಿಷರು ನಮ್ಮನ್ನು ಮೌಢ್ಯದಿಂದ ಮತ್ತು ಹಿಂದುಳಿದಿರುವಿಕೆಯಿಂದ ಪಾರು ಮಾಡಿ ನಾಗರೀಕರನ್ನಾಗಿ ಮಾಡಲು ನಮಗೆ ರುಚಿ ಹತ್ತಿಸಿದ 'ಆಧುನಿಕ ನಾಗರೀಕತೆ'ಯ ಕೊಡುಗೆ. ಈ ರುಚಿ ಹತ್ತಿಸಿಕೊಳ್ಳಲು ನೆಪವಾಗಿ ಹೇಗೂ ನಮ್ಮ ಮೌಢ್ಯ–ಹಿಂದುಳಿದಿರುವಿಕೆಗಳನ್ನು ಸಾಬೀತುಪಡಿಸಲು ನಮ್ಮ ಜಾತಿ ಪದ್ಧತಿ, ಅಸ್ಪೃಶ್ಯತೆ, ತಂತ್ರ–ಮಂತ್ರ, ಸತಿ ಪದ್ಧತಿ ಇತ್ಯಾದಿಗಳು ಹೇಗೂ ಇದ್ದವಲ್ಲ?

ಇರಲಿ. ಈ ಅಭಿವೃದ್ಧಿಯ ಹುಚ್ಚು ಹತ್ತಿಸಿದ ಆಧುನಿಕ ನಾಗರೀಕತೆಯ ಮೂಲ ಮಂತ್ರ: ಮನುಷ್ಯ ಈ ಜಗತ್ತಿನ ರಾಜ. ಅವನು ಈ ಜಗತ್ತಿಗೆ ಬಂದಿರುವುದೇ ಸುಖ ಉಣ್ಣಲು. ಆ ಸುಖಕ್ಕೆ ಮಿತಿ ಎಂಬುದಿಲ್ಲ. ಏಕೆಂದರೆ ಅವನ ಬುದ್ಧಿಗೆ ಮಿತಿ ಎಂಬುದಿಲ್ಲ. ಅದನ್ನು ಸಾಬೀತು ಪಡಿಸಲು ಹೇಗೂ ವಿಜ್ಞಾನ–ತಂತ್ರಜ್ಞಾನಗಳು ಆವಿಷ್ಕಾರವಾಗಿದ್ದವಲ್ಲ?

ಆದರೆ ಇದಕ್ಕೊಂದು ಪ್ರತಿವಾದವೂ ಆಗಲೇ ಹುಟ್ಟಿಕೊಂಡದ್ದು ಸಹಜವೇ. ಮನುಷ್ಯನ ಈ ಮಿತಿ ಇಲ್ಲದ ಸುಖದ ಕನಸು ಗಾಂಧಿಗೆ ಒಂದು ದುಃಸ್ವಪ್ನವಾಗಿ ಕಂಡಿತು. ತಮ್ಮ ಕಣ್ಮುಂದೆಯೇ ಒಂದು ಪುರಾತನ ನಾಗರೀಕತೆಯನ್ನು ಗುಲಾಮಗಿರಿಗೆ ಈಡು ಮಾಡಿದ ಈ ಮಿತಿ ಇಲ್ಲಿದ ಸುಖದ ಕಲ್ಪನೆ ಇಡೀ ಮಾನವ ಜನಾಂಗವನ್ನು ಎಲ್ಲಿಗೆ ಕೊಂಡೊಯ್ಯಬಹುದು ಎಂದು ಅಂದಾಜು ಮಾಡಿದರು. ಈ ಅಂದಾಜಿನ ಹಿಂದೆ ಭಾರತದ ಪಾರಂಪರಿಕ ಜೀವನ ದೃಷ್ಟಿ, ಮೌಲ್ಯ ಮತ್ತು ಕ್ರಮಗಳ ಮತ್ತು ಇವನ್ನು ರೂಪಿಸಿದ್ದ ಶ್ರೇಯ–ಪ್ರೇಯಗಳ ನಡುವೆ ನಮ್ಮ ಪುರಾತನರು ನಡೆಸಿದ್ದ ಚರ್ಚೆಯ ಅರಿವಿತ್ತು. ಹಾಗಾಗಿಯೇ ಅವರು ಈ ಕನಸನ್ನು ನನಸು ಮಾಡಬಲ್ಲುದೆಂದು ನಂಬಲಾದ ಆಧುನಿಕ ತಂತ್ರಜ್ಞಾನವನ್ನು ವಸಾಹತುಶಾಹಿಯ(ಗುಲಾಮತನದ) ಸಾಧನ ಎಂದು ಕರೆದರು. ಇನ್ನೂ ಮುಂದುವರೆದು ಒಂದು ದೊಡ್ಡ ಜಾಗತಿಕ ಸತ್ಯವನ್ನೂ ಹೇಳಿದರು: ಈ ಭೂಮಿ ಎಲ್ಲರ ಅಗತ್ಯಗಳನ್ನು ಪೂರೈಸಬಲ್ಲುದೇ ಹೊರತು ಎಲ್ಲರ ಆಸೆಗಳನ್ನಲ್ಲ. ಅವರ ಈ ಮಾತು ಅದನ್ನಾಡಿದ ಎಷ್ಟೋ ವರ್ಷಗಳ ನಂತರ ಹುಟ್ಟಿಕೊಂಡ ಪರಿಸರ ವಿಜ್ಞಾನವೆಂಬ ಹೊಸ ಶಾಸ್ತ್ರದ ಆಧಾರ ನಂಬಿಕೆಯಾಯಿತು. ಅವರ ಈ ಮಾತಿನ ಹಿಂದೆ ವಿಜ್ಞಾನವೇ ಮರೆತಿದ್ದ ಒಂದು ವೈಜ್ಞಾನಿಕ ಸತ್ಯವಿತ್ತು. ಅದೇನೆಂದರೆ, ಮನುಷ್ಯನ ಎಲ್ಲ ಸುಖ ಸಂಪತ್ತುಗಳಿಗೂ ಮೂಲ ದ್ರವ್ಯಗಳನ್ನು ಒದಗಿಸಬೇಕಾದ ಈ ಭೂಮಿಗೆ ಒಂದು ಮಿತಿಯಿದೆ; ಅಳತೆ ಇದೆ. ಮಿತಿಯಿರುವುದರಿಂದ ಮಿತಿಯಿಲ್ಲದ್ದನ್ನು ಹುಟ್ಟಿಸಲಾಗುವುದಿಲ್ಲ. ಅದು ಅನಾಹುತಕ್ಕೆ ಕಾರಣವಾದೀತು. ಅಭಿವೃದ್ಧಿ ರಾಜಕಾರಣ ಮಾಡಿರುವ ಒಂದು ದೊಡ್ಡ ಕಣ್ಕಟ್ಟೆಂದರೆ ಗಾಂಧಿ ಹೇಳುವ ಅಗತ್ಯ ಮತ್ತು ಆಸೆಗಳ ನಡುವಣ ವ್ಯತ್ಯಾಸಗಳ ಗೆರೆಗಳನ್ನೇ ಅಳಿಸಿ ಹಾಕಿರುವುದು. ಹಾಗಾಗಿಯೇ ಗಾಂಧೀ ಮುನ್ನೋಡಿದ ಅನಾಹುತಗಳು ನಮ್ಮ ಕಣ್ಮುಂದೆಯೇ ಸಂಭವಿಸುತ್ತಿರುವುದು. ನಾಗಸಾಕಿ, ಚರ್ನೋಬೈಲ್ ಮತ್ತು ಭೂಪಾಲ ವಿಷಾನಿಲ ದುರಂತಗಳು ಒಂದು ತೆರನ ಈ ಅನಾಹುತಗಳ ಸೂಚನೆಯಾದರೆ, ನಮ್ಮದೇ ಹೋದ ವರ್ಷದ ಉತ್ತರಾಖಂಡ ಮತ್ತು ಈ ವರ್ಷದ ಜಮ್ಮು–ಕಾಶ್ಮೀರದ ಜಲಪ್ರಳಯ ಇನ್ನೊಂದು ತೆರನ ಅನಾಹುತಗಳ ಸೂಚನೆಗಳು. ಕೋಮುವಾದ, ಮೂಲಭೂತವಾದಗಳ ರೂಪ ತಾಳುತ್ತಿರುವ ಧರ್ಮ ಕುರಿತ ಜನರಲ್ಲಿನ ಹೊಸ ಸೆಳೆತಗಳು ಮತ್ತು ಅವು ಹುಟ್ಟು ಹಾಕುತ್ತಿರುವ ಕೋಮು ಹಿಂಸಾಚಾರ, ಮತೀಯ ಭಯೋತ್ಪಾದನೆಗಳೂ ಈ ಅನಾಹುತಗಳ ಪರೋಕ್ಷ ಪರಿಣಾಮಗಳೇ ಆಗಿವೆ.

ಮನುಷ್ಯ ಜನಾಂಗದ ಹೆಮ್ಮೆ ಎಂದು ಹೇಳಿಕೊಳ್ಳಲಾಗುವ ಕೈಗಾರಿಕಾ ಕ್ರಾಂತಿ ಆರಂಭವಾದಾಗಿನಿಂದ ನಮಗಿಂತ ಬಹುಮುಂಚೆ ಈ ಭೂಮಿಯ ಮೇಲೆ ಕಾಣಿಸಿಕೊಂಡು ನಮ್ಮ ಹುಟ್ಟಿಗೆ, ಬದುಕಿಗೆ ಕಾರಣವಾದ ಎಷ್ಟು ಜೀವ ಪ್ರಬೇಧಗಳು ಯಾವ ಗತಿಯಲ್ಲಿ ನಾಶವಾಗಿವೆ ಮತ್ತು ಏಕೆ ಎಂದು ತಿಳಿದುಕೊಳ್ಳುವ ಪ್ರಯತ್ನ ಮಾಡಿದರೆ, ಈ ಅಭಿವೃದ್ಧಿ ಆತ್ಯಂತಿಕವಾಗಿ–ಆದರೆ ಬಹುದೂರದಲ್ಲೇನಲ್ಲ–ಮನುಷ್ಯ ಪ್ರಬೇಧವನ್ನೂ ಹೇಗೆ ಹಿಂಸಿಸಿ( ಇಂತಹ ಅನೇಕ ಒಳ ಮತ್ತು ಹೊರ ಹಿಂಸೆಗಳು ಈಗಾಗಲೇ ದೃಗ್ಗೋಚರವಾಗಿವೆ) ನಾಶ ಮಾಡಲಿದೆ ಎಂಬುದು ಗೊತ್ತಾದೀತು. ಆದರೆ ಸುಖ–ಸಂಪತ್ತುಗಳ ಹಪಾಹಪಿಯಲ್ಲಿರುವ ಮನುಷ್ಯನಿಗೆ ಆ ವ್ಯವಧಾನವೇ ಇಲ್ಲವಾಗಿದೆ. ಕೋಟ್ಯಾಂತರ ವರ್ಷಗಳಿಂದ ಈ ಭೂಮಿ ಉಸಿರಾಡಲು, ಆ ಮೂಲಕ ನಾವೂ ಸೇರಿದಂತೆ ಜೀವ ಜಗತ್ತು ಉಸಿರಾಡಲು ಪೋಷಕವಾಗಿರುವ ಪಶ್ಚಿಮ ಘಟ್ಟಗಳನ್ನು ಉಳಿಸಲು ರೂಪಿತವಾದ ಮಾಧವ ಗಾಡ್ಗೀಳ್ ವರದಿಯನ್ನು ತಿರಸ್ಕರಿಸಿದ ಘಾತುಕತನ ಮತ್ತು ಅದರ ಬದಲಿಗೆ ತಯಾರಾದ ಅದರ ದುರ್ಬಲ ರೂಪವೆನಿಸಿದ ಕಸ್ತೂರಿ ರಂಗನ್ ವರದಿಗೂ ವ್ಯಕ್ತವಾಗುತ್ತಿರುವ ವಿರೋಧವನ್ನು ಗಮನಿಸಿದರೇ ಸಾಕು, ಈ ಅಭಿವೃದ್ಧಿಯ ಹುಚ್ಚು ಒಂದು ರೋಗವಾಗಿ ಮಾರ್ಪಾಡಾಗುತ್ತಿರುವ ಎಲ್ಲ ಸೂಚನೆಗಳೂ ದೊರಕುತ್ತವೆ. ನಾವು ಪ್ರಜಾಪ್ರಭುತ್ವದ ಹೆಸರಿನಲ್ಲಿ ನಮ್ಮ ವಿವೇಕವನ್ನು ಎಂತಹ ಅವಿವೇಕಿಗಳ ಕೈಗೆ ಕೊಟ್ಟಿದ್ದೇವೆ ಎಂಬುದು ಗೊತ್ತಾಗುತ್ತದೆ. ಇನ್ನು ಹವಾಮಾನ ವೈಪರೀತ್ಯಗಳ ಕುರಿತ ಮಾತುಕತೆಗಳಲ್ಲಿನ ಚೌಕಾಶಿ ಇದಕ್ಕೊಂದು ಜಾಗತಿಕ ಸಾಕ್ಷಿಯಾಗಿದೆ.

ಈ ಎಲ್ಲ ಹಿನ್ನೆಲೆಯಲ್ಲಿ ರಾಷ್ಟ್ರದಲ್ಲಿ ಇಂದು ತಮ್ಮದು ಗಾಂಧಿ ವಾರಸುದಾರಿಕೆ ಎಂದು ನೆಪಕ್ಕಾದರೂ ಹೇಳಿಕೊಳ್ಳುತ್ತಿದ್ದವರ ಮತ್ತು ಅದನ್ನು ಪ್ರಶ್ನಿಸಿ ವಾದಮಾಡಲು ಸಾಧ್ಯವಿದ್ದ ರಾಜಕಾರಣ ಅಂತ್ಯವಾಗಿದೆ ಎಂಬುದನ್ನೂ ನಾವು ಗಮನಿಸಬೇಕು. ಗಾಂಧಿಗೆ ವಿರುದ್ಧವಾದ ಚಿಂತನಾ ಲಹರಿಗೆ ಸೇರಿದವರ ವಾರಸುದಾರಿಕೆಯ ರಾಜಕಾರಣ ಬಂದಿದೆ. ಹಾಗಾಗಿ ಇಂದಿನ ಮುಖ್ಯ ಪ್ರಶ್ನೆ, ಈ ರಾಜಕಾರಣದೊಂದಿಗೆ ಯಾವ ಪರಿಭಾಷೆಯಲ್ಲಿ ಮಾತನಾಡಬೇಕೆಂಬುದೇ ಆಗಿದೆ. ಇದು ತನ್ನದು ಅಭಿವೃದ್ಧಿ ಕೇಂದ್ರಿತ ಎಂದು ಘಂಟಾಘೋಷವಾಗಿ ಹೇಳಿಕೊಳ್ಳುವ ರಾಜಕಾರಣ ಬೇರೆ! ಜೊತೆಗೆ 'ಬಲಿಷ್ಠ ಭಾರತ'ದ ಘೋಷಣೆಯೂ!! ಹಾಗಾಗಿಯೇ ಈ ಬಲಿಷ್ಠತೆಯೆಂದರೇನು ಎಂದು ಸೂಚಿಸಲೋ ಎಂಬಂತೆ ಅಧಿಕಾರಕ್ಕೆ ಬಂದ ಕೂಡಲೇ, ಅಭಿವೃದ್ಧಿಗೆ ತೊಂದರೆ ಮಾಡುತ್ತಿವೆಯೆಂದು ಪರಿಸರವಾದಿ ಸ್ವಯಂಸೇವಾ ಸಂಸ್ಥೆಗಳ ಮೇಲೆ ನಿಗಾ ಇಡುವ ಪರಿಪಾಠ ಆರಂಭವಾಯಿತು. ಈಗ ತ್ವರಿತ ಉದ್ಯಮೀಕರಣಕ್ಕೆ ಅಡ್ಡಿಯಾಗುತ್ತಿವೆಯೆಂದು ಹೇಳುತ್ತಾ ಪರಿಸರ ಕಾನೂನುಗಳನ್ನು ಪರಿಷ್ಕರಿಸುವ ಕೆಲಸಕ್ಕೆ ಕೈಹಾಕಿ, ಅದರ ವರದಿ–ಶಿಫಾರ್ಸುಗಳನ್ನು ರಹಸ್ಯವಾಗಿ ಇರಿಸಲಾಗಿದೆ. ಏನಿದೆಲ್ಲದರ ಅರ್ಥ? ಅಥವಾ ಇದೆಲ್ಲವೂ ಅಭಿವೃದ್ಧಿ ಎಂಬ ಶಬ್ದದ ಅಪಾರ್ಥಗಳ ಆಟವೋ? ನಮ್ಮದಿಯ ಸಾಮೂಹಿಕ ಬದುಕಿನ ಒರೆಗಲ್ಲಿನಲ್ಲಿ ಇಂದು ನಮ್ಮ ಅಗತ್ಯಗಳನ್ನು ಆಸೆಗಳಿಂದ ಬೇರ್ಪಡಿಸಿ ನೋಡಬಲ್ಲ ವಿವೇಕವನ್ನು ಅಂತರ್ಗತಗೊಳಿಸಿಕೊಂಡ ರಾಜಕಾರಣವೇ ಈ ಪ್ರಶ್ನೆಗೆ ಉತ್ತರ ನೀಡೀತು. ಆದರೆ ಅಂತಹ ರಾಜಕಾರಣದ ಸುಳಿವಾದರೂ ಎಲ್ಲಿದೆ?

ಅಂತಹ ರಾಜಕಾರಣದ ರೂಹುಗಳನ್ನಾದರೂ ಕಾಣಲು ನೆರವಾಗುವಂತೆ, ಈ ಅಭಿವೃದ್ಧಿಯ ಅರ್ಥ–ಅಪಾರ್ಥಗಳನ್ನು ವಿವಿಧ ನೆಲೆಗಳಿಂದ ಹುಡುಕುವ ನಾಲ್ಕು ಲೇಖನಗಳನ್ನು ಇಲ್ಲಿ ಪ್ರಸ್ತುತಪಡಿಸುತ್ತಿದ್ದೇವೆ. ಓದಿ, ನಿಮಗೇನನ್ನಿಸುತ್ತದೆ ಬರೆಯಿರಿ–ಸಂ

# ಅಭಿವೃದ್ಧಿ ಮಹಾರಥದ ಹಿಮ್ಮೊಗ ಯಾತ್ರೆ

–ನಾಗೇಶ ಹೆಗಡೆ



'ಅಣ್ಣಾ, ರಷ್ಯದ ಅಧ್ಯಕ್ಷರು ೧೨ ಅಣುಸ್ಥಾವರಗಳನ್ನು ಕೊಡ್ತಾರಂತೆ ನಮಗೆ!' ಎಂದು ಭಯಸೂಸುವ ಕಣ್ಣುಗಳನ್ನು ಅಗಲಿಸಿ ಆ ಚಿಕ್ಕ ಹುಡುಗ ಶ್ರೀಹರಿ ನನ್ನನ್ನು ಕೇಳಿದ.

'ಸಂತೋಷ ಆಗಿದ್ದೆ ಕಣೋ!' ಎಂದೆ.

ಆತ ಗೊಂದಲಕ್ಕೆ ಬಿದ್ದ.

'ಅಲ್ಲಾ ಅಣ್ಣ! ಅದು ಅಷ್ಟೊಂದು ಡೇಂಜರಸ್ ಅಲ್ವಾ?' ಎಂದು ಮತ್ತೆ ನನ್ನ ಅಂಗಿ ಜಗ್ಗಿ ಕೇಳಿದ.

'ಹೌದು ಮರೀ, ಅದು ತುಂಬಾ ಡೇಂಜರಸ್. ನನಗೆ ಸಂತೋಷ ಆಗ್ತಿರೋದು ರಷ್ಯದ ನ್ಯೂಕ್ಲಿಯರ್ ಸ್ಥಾವರಗಳ ಬಗ್ಗೆ ಅಲ್ಲ; ದಿಲ್ಲಿಯ ಸಂಸತ್ತಿನಲ್ಲಿ ಕೂತವರೂ ಕೇಳದೇ ಇರೋ ಅಪರೂಪದ ಪ್ರಶ್ನೆಯನ್ನು ನೀನು ಕೇಳಿದೆಯಲ್ಲ, ಅದಕ್ಕೆ ಸಂತೋಷ ಕಣೋ' ಎಂದು ಆತನ ಬೆನ್ನು ತಟ್ಟಿದೆ.

ಆ ಮಗು ಬೆಂಗಳೂರಿನ 'ಪೂರ್ಣಪ್ರಮತಿ' ಶಾಲೆಯ ಆರನೇ ಕ್ಲಾಸಿನ ಹುಡುಗ. ಈ ಶಾಲೆಯ ವಿಶೇಷ ಏನೆಂದರೆ ಮಕ್ಕಳಿಗೆ ಪಾಠ ಮಾಡಲೆಂದು ದೊಡ್ಡ ವಿಜ್ಞಾನಿಗಳು, ಹೆಸರಾಂತ ಪರಿಣತರು ಪದೇ ಪದೇ ಬರುತ್ತಾರೆ. ನಾಳಿನ ಭವಿಷ್ಯದ ಬಗ್ಗೆ ಭರವಸೆ ಹುಟ್ಟಿಸಬಲ್ಲ ಹೊಸ ಪೀಳಿಗೆಯನ್ನು ರೂಪಿಸುವ ಕೆಲಸದಲ್ಲಿ ಕೈಲಾದ ಕೊಡುಗೆ ನೀಡುತ್ತಾರೆ. ಪುತಿನ್ ಮತ್ತು ಮೋದಿ ಅಣುಸ್ಥಾವರಗಳ ಒಪ್ಪಂದಕ್ಕೆ ಸಹಿ ಹಾಕಿದ ಮರುದಿನವೇ ಆ ಶಾಲೆಗೆ ಪಾಠ ಮಾಡಲೆಂದು ಹೋಗಿದ್ದೆ. ಡಿಸೆಂಬರ್ ೫ರ 'ಅಂತಾರಾಷ್ಟ್ರೀಯ ಮಣ್ಣಿನ ದಿನ', ಡಿ. ೧೧ರ 'ವಿಶ್ವ ಪರ್ವತ ದಿನ' ಮತ್ತು ಡಿ. ೨೪ರ 'ಶಕ್ತಿ ಉಳಿತಾಯ ದಿನ'ಗಳ ಮಹತ್ವದ ಕುರಿತು ಪಾಠ ಮಾಡುತ್ತಿದ್ದಾಗ ಶ್ರೀಹರಿ ಈ ಪ್ರಶ್ನೆ ಎತ್ತಿದ್ದ. ರಷ್ಯ ಮತ್ತು ಭಾರತದ ಒಪ್ಪಂದದ ವಾರ್ತೆಯನ್ನು ಓದಿದ್ದ/ನೋಡಿದ್ದ ಈತನ ಆತಂಕ ಅದೆಷ್ಟು ತೀವ್ರವಾಗಿತ್ತೆಂದರೆ ನಾನು ಆ ದಿನ ಪರಮಾಣು ವಿಷಯವನ್ನೇ ಎತ್ತದಿದ್ದರೂ ಆತನೊಳಗೆ ಹಠಾತ್ತಾಗಿ ಅದು ಪ್ರಕಟವಾಗಿತ್ತು. ನನ್ನ ಊಹೆಯ ಪ್ರಕಾರ, ಇಡೀ ದೇಶದಲ್ಲಿ ಈ ಪ್ರಶ್ನೆ ಕೇಳಿದ ಆರನೆಯ ಕ್ಲಾಸಿನ ಹುಡುಗ ಈತನೊಬ್ಬನೇ ಇರಬೇಕು. ಅದು ನನ್ನ ಮಟ್ಟಿಗೆ ಸಂತಸದ ಸಂಗತಿಯಾಗಿತ್ತು.

* * *

ಆತಂಕದ ಇನ್ನೊಂದು ಮಗ್ಗುಲನ್ನು ಈಗ ನೋಡೋಣ. ಇಡೀ ವಿಶ್ವವೇ ಅಪಾಯದ ಅಂಚಿಗೆ ಹೊರಳುತ್ತಿದೆ, ಶತಾಯ ಗತಾಯ ಪರಿಸರ ಸಂರಕ್ಷಣೆ ಮಾಡಬೇಕು ಎಂಬ ಉದ್ದೇಶದಿಂದ ವಿಶ್ವ ಸಂಸ್ಥೆ ವರ್ಷದುದ್ದಕ್ಕೂ ೨೦ಕ್ಕೂ ಹೆಚ್ಚು ಬಗೆಯ ಪರಿಸರ ದಿನಗಳನ್ನು ಘೋಷಿಸಿದೆ. ಕೆರೆ ಸರೋವರಗಳ ದಿನ, ಜೀವಿ ವೈವಿಧ್ಯ ರಕ್ಷಣಾ ದಿನ, ಸಾಗರ ದಿನ, ಅಕ್ಷಯ ಇಂಧನ ದಿನ, ಮರುಭೂಮಿ ತಡೆ ದಿನ, ಅರಣ್ಯ ದಿನ, ಆವಾಸ ದಿನ, ಪರ್ವತ ದಿನ... ಹೀಗೆ. ಸಾಲದ್ದಕ್ಕೆ ನಮ್ಮ ದೇಶವೂ ಇಂಥ ಇನ್ನೂ ನಾಲ್ಕಾರು ಪರಿಸರ ಸಂಬಂಧಿ ದಿನಗಳನ್ನು ಆಚರಿಸಬೇಕೆಂದು ಕರೆ ನೀಡಿದೆ. ನೂರಕ್ಕೂ ಹೆಚ್ಚು ದೇಶಗಳ ನಾಗರಿಕರು, ಎಳೆಯರು ಅಂಥ ದಿನಗಳನ್ನು ಆಚರಿಸುವ ವರದಿಗಳು ಬರುತ್ತಿವೆ. ನಮ್ಮ ದೇಶದಲ್ಲಿ ಮಾತ್ರ 'ವಿಶ್ವ ಪರಿಸರ ದಿನ' ಮತ್ತು 'ಓಝೋನ್ ದಿನ' ಎರಡನ್ನು ಬಿಟ್ಟರೆ ಇತರ ವಿಶೇಷ ದಿನಗಳು ಗೊತ್ತೇ ಇಲ್ಲ. ನಾನು ಮತ್ತು ಈಶ್ವರ ಪ್ರಸಾದ್ ಎಂಬ ಗೆಳೆಯ ಸೇರಿ ಈ ಎಲ್ಲ ದಿನಗಳನ್ನು ಪಟ್ಟಿ ಮಾಡಿ, ಒಂದೊಂದರ ವಿಶೇಷ ಮಹತ್ವ ಕುರಿತು ವಿವರಗಳನ್ನು ಬರೆದೆವು. ಪ್ರತಿಯೊಂದು ವಿಶೇಷ ದಿನದ ಸಂದರ್ಭದಲ್ಲೂ ನಾವದನ್ನು ಏಕೆ, ಹೇಗೆ ಆಚರಿಸಬೇಕು ಎಂಬ ಸೂಚನೆ ನೀಡಿದೆವು. ಶಾಲಾ ಶಿಕ್ಷಕರು, ಪಂಚಾಯ್ತಿ ಮಟ್ಟದ ಗ್ರಾಮವಾಸಿಗಳು, ಬಳಕೆದಾರರು, ಸರಕಾರಿ ಇಲಾಖೆಗಳು, ಜನಪ್ರತಿನಿಧಿಗಳು ಆ ದಿನಕ್ಕೆ ಏನೇನು ಸಿದ್ಧತೆ ಮಾಡಬೇಕು ಎಂಬ ವಿವರಗಳುಳ್ಳ ೨೦೦ ಪುಟಗಳ ಒಂದು ಕೈಪಿಡಿಯನ್ನೇ ಸಿದ್ಧಮಾಡಿದೆವು. ಬಿ.ಎಲ್. ಶಂಕರ್ ಸಲಹೆಯ ಮೇರೆಗೆ ವಿಧಾನ ಸಭೆಯ ಸಭಾಪತಿ ಮತ್ತು ಮೇಲ್ಮನೆಯ ಸಭಾಧ್ಯಕ್ಷರಿಗೆ ಅದನ್ನು ತೋರಿಸಿದೆವು. ಸರಕಾರವೇ ಮಾಡಬೇಕಿದ್ದ ಕೆಲಸವನ್ನು ನಾವು ಮಾಡಿದ್ದರಿಂದ ವಿಧಾನ ಸೌಧದ ಸಭಾಂಗಣದಲ್ಲೇ ಅದನ್ನು ಬಿಡುಗಡೆ ಮಾಡಬೇಕೆಂದು ಅವರಿಬ್ಬರನ್ನು ಒಪ್ಪಿಸಿದೆವು. ನಾಡಿನ ಭವಿಷ್ಯದ ದೃಷ್ಟಿಯಿಂದ ಈ ಕೈಪಿಡಿ ಎಷ್ಟು ಮುಖ್ಯ ಎಂಬುದನ್ನು ಸಂಕ್ಷಿಪ್ತ ವರ್ಣಿಸಿ, ಕಾಗೋಡು ತಿಮ್ಮಪ್ಪನವರು ಎಲ್ಲ ಶಾಸಕರಿಗೂ ಅಧಿವೇಶನದ ನಡುವೆಯೇ ಅದರ ಬಿಡುಗಡೆ ಕಾರ್ಯಕ್ರಮಕ್ಕೆ ಹಾಜರಿರಲು ಸುತ್ತೋಲೆ ಕಳಿಸಿದರು. ಖಂಡಿತ ಬರುತ್ತೇವೆಂದು ಐವತ್ತಕ್ಕೂ ಹೆಚ್ಚು ಶಾಸಕರು ವೈಯಕ್ತಿಕ ಆಶ್ವಾಸನೆ ನೀಡಿದರು. ಬಂದವರೆಷ್ಟು ಗೊತ್ತೆ? ಕಾಗೋಡು ತಿಮ್ಮಪ್ಪ ಮತ್ತು ಡಿ.ಎಸ್. ಶಂಕರಮೂರ್ತಿ ಬಿಟ್ಟರೆ ಕೇವಲ ನಾಲ್ಕು ಶಾಸಕರು ಮಾತ್ರ. ಅವರೇನೂ ದೂರ ಪ್ರಯಾಣ ಮಾಡಿ ಬರಬೇಕಿರಲಿಲ್ಲ. ವಿಧಾನ ಸೌಧದ ನೆಲಮಹಡಿಯಿಂದ ಲಿಫ್ಟ್ ಏರಿ ಮೂರನೆಯ ಮಹಡಿಗೆ ಬಂದಿದ್ದರೆ ಸಾಕಿತ್ತು. ಬರಲಿಲ್ಲ. ಸಿಬ್ಬಂದಿ ವರ್ಗದ ಕೆಲವರು ಮತ್ತು ಇತರ ಪರಿಚಿತ ಜನಸಾಮಾನ್ಯರೂ ಸೇರಿ ಸುಮಾರು ೫೦ ಜನರ ಸಮ್ಮುಖದಲ್ಲಿ ಪುಸ್ತಕ ಬಿಡುಗಡೆಯಾಯಿತು.



ಭೂಮಿಯ ಹವಾಗುಣ ಏರುಪೇರಾಗುತ್ತಿದೆ, ಮನುಕುಲಕ್ಕೆ ಅಷ್ಟೇ ಅಲ್ಲ, ಜೀವಜಗತ್ತಿಗೆ ಏನೆಲ್ಲ ಸಂಕಟ ಬರಲಿದೆ ಎಂಬುದನ್ನು ಅದೆಷ್ಟು ಬಗೆಯ ಸಾಕ್ಷ್ಯಗಳ ಮೂಲಕ ೫೦೦೦ಕ್ಕೂ ಹೆಚ್ಚು ವಿಜ್ಞಾನಿಗಳು ಒಕ್ಕೊರಲಿನಿಂದ ಹೇಳುತ್ತಿದ್ದರೂ ನಮ್ಮ ಜನಪ್ರತಿನಿಧಿಗಳಾಗಲೀ, ಆಡಳಿತ ತಜ್ಞರಾಗಲೀ ಸಾಮಾಜಿಕ ಧುರೀಣರಾಗಲೀ ಕೊಂಚವೂ ತಲೆಕೆಡಿಸಿಕೊಳ್ಳುತ್ತಿಲ್ಲ. ಜಿಡಿಪಿಯ ಜಪಮಾಲೆ ಹಿಡಿದು ಅಭಿವೃದ್ಧಿಯ ಮಹಾಮಂತ್ರವನ್ನೇ ಮತ್ತೆ ಮತ್ತೆ ಜಪಿಸುತ್ತ, ಇನ್ನಷ್ಟು ಗಣಿಗಾರಿಕೆ, ಇನ್ನಷ್ಟು ಶಕ್ತಿಸ್ಥಾವರಗಳು, ಇನ್ನಷ್ಟು ಸೂಪರ್ ಹೈವೇಗಳು, ಇನ್ನಷ್ಟು ಅಣೆಕಟ್ಟುಗಳು, ಇನ್ನಷ್ಟು ವಿಮಾನ ನಿಲ್ದಾಣಗಳ ಮಾಯಾಬಜಾರುಗಳನ್ನೇ ನಾಯಕರೆಲ್ಲ ಮಾಧ್ಯಮಗಳೆದುರು ಝಳಪಿಸುತ್ತ ಸಾಗುತ್ತಿದ್ದಾರೆ. ಜಾಗತಿಕ ಸಂಕಟಕ್ಕೆ ಜಾಗತಿಕ ಧುರೀಣರೇ ಅಂತಾರಾಷ್ಟ್ರೀಯ ಮಟ್ಟದಲ್ಲಿ ಏನೋ ಮದ್ದು ಹುಡುಕುತ್ತಾರೆಂಬ ಭ್ರಮೆಯಲ್ಲಿ ನಾವಿದ್ದೇವೆ. ರಾಷ್ಟ್ರಮಟ್ಟದಲ್ಲಿ, ರಾಜ್ಯಮಟ್ಟದಲ್ಲಿ, ಬೇರುಮೂಲದಲ್ಲಿ ನಾವೂ ಅಷ್ಟಿಷ್ಟು ಸಿದ್ಧತೆ ನಡೆಸಬೇಕೆಂಬ ತುರ್ತು ಯಾರಿಗೂ ಇದ್ದಂತಿಲ್ಲ.

ಅಭಿವೃದ್ಧಿ ನಮಗೆ ಬೇಕು ನಿಜ. ಆದರೆ ಅದು ನಾಳಿನ ಪೀಳಿಗೆಯನ್ನು ಪ್ರಪಾತಕ್ಕೆ ತಳ್ಳಬಾರದು. ಸುಸ್ಥಿರ ಅಭಿವೃದ್ಧಿಯ ನಾಲ್ಕು ಮೂಲತತ್ವಗಳೆಂದರೆ (೧) ಪೆಟ್ರೋಲ್, ಕಲ್ಲಿದ್ದಲಿನಂಥ ಪಳೆಯುಳಿಕೆ ಇಂಧನ ಮತ್ತು ಖನಿಜಗಳ ಮೇಲಿನ ಅವಲಂಬನೆಯನ್ನು ಕಮ್ಮಿ ಮಾಡುತ್ತ ಹೋಗಬೇಕು (೨) ಪರಿಸರದಲ್ಲಿ ಬಹುದೀರ್ಘ ಕಾಲ ಉಳಿಯುವಂಥ ಕೆಮಿಕಲ್‌ಗಳನ್ನು ಬಳಸಬಾರದು, (೩) ಗಿಡಮರ, ಜೀವಜಂತುಗಳ ಧ್ವಂಸಕಾರ್ಯವನ್ನು ಕಡಿಮೆ ಮಾಡಬೇಕು, ಮತ್ತು (೪) ಮುಂದಿನ ಪೀಳಿಗೆಯವರ ಬದುಕುವ ಹಕ್ಕುಗಳನ್ನು ಹೊಸಕಿ ಹಾಕಬಾರದು. ನಾವು ಇಂದು ಆ ಎಲ್ಲ ಮಾಡಬಾರದ ಕೃತ್ಯಗಳನ್ನೂ ಮಾಡುತ್ತಿದ್ದೇವೆ. ಆಳುವವರಂತೂ ಅಂಥ ಕೃತ್ಯಗಳಿಗೆ ತಡೆ ಹಾಕುವ ಬದಲು, ಈಗಿನ ದುಸ್ಥಿರ ಪಥದಲ್ಲೇ ಮುಂದುವರೆಯುವಂಥ ಸಾಮಾಜಿಕ ಯೋಜನೆಗಳನ್ನು ರೂಪಿಸುತ್ತಾರೆ. ತಾವೇ ಸ್ವತಃ ಆ ಪಥದ ಮುಂಚೂಣಿಯಲ್ಲಿ ಸಾಗುತ್ತಿರುತ್ತಾರೆ.

ಹೋಗಲಿ, ಅಭಿವೃದ್ಧಿಯ ಇಂದಿನ ಹಪಾಹಪಿಯಲ್ಲಿ ಸಾಮಾಜಿಕ ನ್ಯಾಯವಾದರೂ ಇದೆಯೆ– ಅದೂ ಇಲ್ಲ. ಇದ್ದವರ, ಇಲ್ಲದವರ ನಡುವಣ ಕಂದರ ದಿನದಿನಕ್ಕೆ ಅಗಲವಾಗುತ್ತಿದೆ, ಆಳವಾಗುತ್ತಿದೆ. ಇತ್ತೀಚಿನ ವರದಿಗಳ ಪ್ರಕಾರ, ಭಾರತದ ಅತಿ ಶ್ರೀಮಂತ ಶೇ. ೧೦ ಜನರ ಸಂಪತ್ತು ಅತಿ ಕೆಳಗಿನ ಶೇ.೧೦ ಜನರ ಒಟ್ಟೂ ಸಂಪತ್ತಿಗಿಂತ ೩೭೦ ಪಟ್ಟು ಹೆಚ್ಚಿಗೆ ಇದೆ. ಕಳೆದ ೧೫

ವರ್ಷಗಳಿಂದ ಶ್ರೀಮಂತರ ಸಂಪತ್ತು ಹೆಚ್ಚುತ್ತಲೇ ಹೋಗುತ್ತಿದ್ದು, ಇಂದು ಇಡೀ ಭಾರತದ ಮುಕ್ಕಾಲು ಪಾಲು ಸಂಪತ್ತೆಲ್ಲ ಆ ಶೇ.೧೦ ಜನರ ಬಳಿ ಬಂದು ಸೇರಿದೆ. ಹಾಗೆಂದು ಅವರು ಅಮೆರಿಕ, ಜಪಾನ್‌ಗಳ ಉದ್ಯೋಗಪತಿಗಳ ಹಾಗೆ ಸರಕುಗಳ ಉತ್ಪಾದನೆಯನ್ನು ಹೆಚ್ಚಿಸಿದ್ದಾರೆಯೇ ಅಥವಾ ಉದ್ಯೋಗವನ್ನು ಸೃಷ್ಟಿಸಿದ್ದಾರೆಯೇ ಅದೂ ಇಲ್ಲ! ನಮ್ಮ ಧನಿಕರ ಸಂಪತ್ತಿನ ಬಹುಪಾಲೆಲ್ಲ ಖನಿಜ, ಖನಿಜ ತೈಲ ಮತ್ತಿತರ ನೈಸರ್ಗಿಕ ಸಂಪತ್ತಿರುವ ಆಯಕಟ್ಟಿನ ಭೂಮಿಯ (ರಿಯಲ್ ಎಸ್ಟೇಟ್) ಸ್ವಾಹಾಕಾರದಿಂದಾಗಿ ಬಂದಿದೆ; ಇಲ್ಲವೆ ಸರಕಾರಿ ಸ್ವಾಮ್ಯದ ಕಂಪನಿಗಳ (ಅಂದರೆ ನಮ್ಮೆಲ್ಲರ ಪಾಲಿನ) ಶೇರು ಖರೀದಿಯಿಂದಾಗಿ ಬಂದಿದೆ. ರಾಷ್ಟ್ರದ ನಿವ್ವಳ ಸಂಪತ್ತಿನ ನಿರಂತರ ವೃದ್ಧಿಗೆ ಸಹಾಯಕವಾಗುವ ಬದಲು ಈ ಧನಿಕ ಸೊತ್ತೆಲ್ಲ ಭವಿಷ್ಯದ ಪೀಳಿಗೆಯ ಸಂಪತ್ತನ್ನು ದೋಚುವುದರಲ್ಲೇ ನಿರತವಾಗಿದೆ. ಇವರ 'ಸಾಧನೆ'ಗಳಿಂದಾಗಿ ಅಷ್ಟಿಷ್ಟು ಉದ್ಯೋಗಾವಕಾಶ ಸೃಷ್ಟಿಯಾದರೂ ರಾಷ್ಟ್ರದ ಉತ್ಪಾದಕತೆಯನ್ನು ಹೆಚ್ಚಿಸುವ ಬದಲು ವಿದೇಶೀ ಕಂಪನಿಗಳ ಲಾಭಾಂಶವನ್ನು ಇನ್ನಷ್ಟು ಹೆಚ್ಚಿಸುವತ್ತ ಅವರೆಲ್ಲರ ಬಹುಪಾಲು ಸೇವೆ ಮೀಸಲಾಗಿದೆ.

ಇತ್ತ ಗ್ರಾಮ ಭಾರತದ ಸ್ಥಿತಿಗತಿಯಾದರೂ ಸುಧಾರಿಸಿದೆಯೆ, ಅದೂ ಇಲ್ಲ. ಹಳ್ಳಿಗಳನ್ನು ಖಾಲಿ ಮಾಡಿಸುವ ಅಜ್ಞಾತ ಕಾರ್ಯಸೂಚಿ ಕಳೆದ ಎರಡು ದಶಕಗಳಿಂದ ನಮ್ಮಲ್ಲಿ ಜಾರಿಯಲ್ಲಿದೆ. ಸರಕಾರದ ಮೇಲೆ ಯಾವೊಂದು ಜವಾಬ್ದಾರಿಯನ್ನೂ ಹೊರಿಸದೆ ತಮ್ಮ ಪಾಡಿಗೆ ತಾವು ಸ್ವಾವಲಂಬಿಗಳಾಗಿ ಬದುಕುತ್ತಿದ್ದ ರೈತರ (ಹಳ್ಳಿಗೆ ಅಗತ್ಯವಾದ ನೀರು, ನಾರು, ಗೊಬ್ಬರ, ಮೇವು, ಬಿತ್ತನೆ ಬೀಜ, ಇಂಧನ ಹೀಗೆ ಎಲ್ಲ) ಸ್ವಾತಂತ್ರ್ಯವನ್ನು ಹರಣ ಮಾಡಿ ಅವರೆಲ್ಲರೂ ಈಗ ಕಂಪನಿಗಳ, ಬ್ಯಾಂಕರ್‌ಗಳ ಮರ್ಜಿಯಲ್ಲಿ ಬದುಕುವಂತೆ ಮಾಡಿದ್ದೇ ಈ ದೇಶದ ಇದುವರೆಗಿನ ಸಾಧನೆಯಾಗಿದೆ. ಗ್ರಾಮವಾಸಿಗಳ ಪ್ರತಿಯೊಂದು ಅಗತ್ಯವನ್ನೂ ಕಾರ್ಪೊರೇಟ್ ಕಂಪನಿಗಳೇ ಪೂರೈಸುವಂತಾಗಿದೆ. ಇಂದು ಹಳ್ಳಿಯಲ್ಲಿ ಚಪ್ಪರಗಳ ಬದಲು ಶಾಮಿಯಾನಾಗಳು ಬರುತ್ತವೆ. ಬಿದಿರು, ಅಡಕೆ ಕಂಬಗಳ ಬದಲು 'ಟೆಂಟ್ ಹೌಸ್'ಗಳಿಂದ ಲೋಹದ ಕಂಬಗಳು ಬರುತ್ತವೆ. ಮಣ್ಣಿನ ಬಿಂದಿಗೆಗಳ ಬದಲು ಪ್ಲಾಸ್ಟಿಕ್ ಕೊಡಗಳು ಬರುತ್ತವೆ. ಯಾರೂ ಶ್ರಮದ ದುಡಿಮೆ ಮಾಡಬಾರದು; ಕೃಷಿಕರಿಗೆ ಎತ್ತುಗಳೂ ಇರಬಾರದು, ಕೂಲಿಗಳೂ ಸಿಗಬಾರದು. ಯಾರಿಗೂ ಮಣ್ಣಿನೊಂದಿಗಿನ ಸಂಪರ್ಕ ಉಳಿಯಬಾರದು. ಎಲ್ಲರೂ ನಗರಗಳನ್ನು ಸೇರಿ, ಆಳುವ ದೊರೆಗಳ ಚುನಾವಣಾ ತಿರುಗಾಟವನ್ನು ಕಡಿಮೆ ಮಾಡಬೇಕು. ಈಗೀಗಂತೂ 'ನೂರಿಪ್ಪತ್ತು ಕೋಟಿ ಜನರಿಗೆ ಊಟ ತಯಾರಿಸಲು ಎಪ್ಪತ್ತು ಕೋಟಿ ಅಡುಗೆಭಟ್ಟರು ಬೇಕೇಕೆ?' ಎಂದು ಕೃಷಿಕರನ್ನು ಲೇವಡಿ ಮಾಡಲಾಗುತ್ತಿದೆ. ಇಡೀ ದೇಶಕ್ಕೆ ಆಹಾರ ಪೂರೈಸಲೆಂದು ಬೆರಳೆಣಿಕೆಯ ಕೃಷಿಕಂಪನಿಗಳನ್ನು ಹೊಲಕ್ಕಿಳಿಸಿ, ಆ ಎಪ್ಪತ್ತು ಕೋಟಿ ಗ್ರಾಮವಾಸಿಗಳನ್ನು ಪಟ್ಟಣಗಳಲ್ಲಿ ಗುಡ್ಡೆ ಹಾಕಿ ಅವರಿಗೆಲ್ಲ ಕಂಪನಿಗಳ ಮೂಲಕವೇ ನೀರು, ಊಟ, ಆಸ್ಪತ್ರೆ, ಶಾಲೆ, ಮನರಂಜನೆ, ಸಂಚಾರ, ಕಕ್ಕಸು, ಸ್ಮಶಾನ ವ್ಯವಸ್ಥೆಯನ್ನು ಒದಗಿಸಬೇಕೆಂಬ ಧಾವಂತ ಎದ್ದು ಕಾಣುತ್ತಿದೆ.

ಇಷ್ಟೆಲ್ಲ ಸಾಧನೆಯ ಫಲಿತಾಂಶದ ರೂಪದಲ್ಲಿ ಈಗ ಬಿಸಿ ಪ್ರಳಯಕ್ಕೆ ಭಾರತವೂ ಭಯಂಕರ ಕೊಡುಗೆ ನೀಡತೊಡಗಿದೆ. ಭೂಮಿಯ ತಾಪಮಾನವನ್ನು ಹೆಚ್ಚಿಸಬಲ್ಲ 'ಹಸುರುಮನೆ' ಅನಿಲಗಳನ್ನು ಕಕ್ಕುವ ಅತಿ ದೊಡ್ಡ ರಾಷ್ಟ್ರಗಳಲ್ಲಿ ಭಾರತ ಮೂರನೆಯ ಶ್ರೇಯಾಂಕಕ್ಕೆ ಏರಿದೆ (ಭ್ರಷ್ಟಾಚಾರ ಸೂಚ್ಯಂಕದಲ್ಲೂ ಅತಿ ಎತ್ತರದ ಸ್ಥಾನದಲ್ಲಿರುವ ಈ ನಮ್ಮ ದೇಶ 'ಹಸಿವೆ ಸೂಚ್ಯಂಕ' 'ಮಾನವ ಅಭಿವೃದ್ಧಿ ಸೂಚ್ಯಂಕ'ಗಳಲ್ಲೂ ಅತಿಕುಖ್ಯಾತ ಸ್ಥಾನದಲ್ಲಿದೆ ಬಿಡಿ). ಬಿಸಿಭೂಮಿಯ ಲಕ್ಷಣಗಳಾದ ಬರಗಾಲ, ಅತಿವೃಷ್ಟಿ, ಭೂಕುಸಿತ, ಋತುವಾನದ ಏರುಪೇರಿನಿಂದಾಗಿ ಕೃಷಿಪೀಡೆಗಳ ಹೆಚ್ಚಳ ಹಾಗೂ ಕರಾವಳಿಯ ಅಳಿವೆಗಳಲ್ಲಿ ಉಪ್ಪುನೀರಿನ ಮಹಾಪೂರ ಇವೇ ಮುಂತಾದ ಪ್ರಕೋಪಗಳನ್ನು ತಡೆಯುವತ್ತ ಮುಂಜಾಗ್ರತಾ ಯೋಜನೆಗಳು ಹಾಗಿರಲಿ, ಪ್ರಜೆಗಳಿಗೆ ಅದರ ಬಗ್ಗೆ ಮಾಹಿತಿ ನೀಡುವ ಕೆಲಸವೂ ಆರಂಭವಾಗಿಲ್ಲ. ನದಿ ಜೋಡಣೆ, ನದಿ ತಿರುವಿನಂಥ ಭಾರೀ ಯೋಜನೆ ಹಾಕುವವರು ನಾಳಿನ ಈ ವಿಪತ್ತಿನ ಪರಿಣಾಮ ಏನಾದೀತು ಎಂದು ಯೋಚಿಸುತ್ತಿಲ್ಲ. ಜರ್ಮನಿಯಂಥ ಶೀತದೇಶಗಳಲ್ಲಿ ಸೌರಶಕ್ತಿಯಿಂದಲೇ ಕಾರ್ಖಾನೆಗಳು ನಡೆಯುವಂತಿರುವಾಗ ಬಳ್ಳಾರಿಯಂಥ ಉರಿಜಿಲ್ಲೆಯಲ್ಲೂ ಬಿಸಿಯೂಟ ತಯಾರಿಸಲು ನಮ್ಮ ಸರಕಾರ ಸೀಮೆಎಣ್ಣೆಯನ್ನೇ ಪೂರೈಸುತ್ತಿದೆ. ವಿಕೇಂದ್ರೀಕೃತ ಶಕ್ತಿಮೂಲಗಳನ್ನು ಶೋಧಿಸುವ ಬದಲು ಕಲ್ಲಿದ್ದಲು ಇಲ್ಲದ ರಾಜ್ಯಗಳಲ್ಲೂ ಸೂಪರ್ ಥರ್ಮಲ್, ಅಲ್ಟ್ರಾಥರ್ಮಲ್ ಮಹಾಯೋಜನೆಗಳು ರೂಪುಗೊಳ್ಳುತ್ತಿವೆ.

ಹಾಗಿದ್ದರೆ ಅಭಿವೃದ್ಧಿಯನ್ನೇ ಸ್ಥಗಿತಗೊಳಿಸಬೇಕೆ? ಅದು ಹಾಗಲ್ಲ. ನಾವು ಮೂಲಸೌಲಭ್ಯಗಳ ಹೆಸರಿನಲ್ಲಿ ಮೂಲ ಸಂಪತ್ತುಗಳನ್ನೇ ಬಲಿ ಹಾಕುತ್ತಿದ್ದೇವೆ.



ನದಿ, ಕೆರೆ, ಕಡಲು, ಕರಾವಳಿ, ಅಂತರ್ಜಲ, ಅರಣ್ಯಗಳೇ ನಮ್ಮ ಅಸಲೀ ಮೂಲ ಸೌಲಭ್ಯಗಳಾಗಿದ್ದವು. ಅವನ್ನೆಲ್ಲ ಕೊಳಕು ಮಾಡುತ್ತ, ಇಲ್ಲವೆ ಬರಿದು ಮಾಡುತ್ತ ಅದ್ದೂರಿಯ ನಿಲ್ದಾಣಗಳನ್ನೋ ಬಂದರುಗಳನ್ನೋ ಸೂಪರ್ ಹೈವೇಗಳನ್ನೋ ನಿರ್ಮಿಸಿ ಅದೆಂಥದೊ ಸ್ವರ್ಗವನ್ನು ಕಟ್ಟಲು ಹೊರಟಿದ್ದೇವೆ. ಪಶ್ಚಿಮ ಘಟ್ಟಗಳ ಹಸುರನ್ನು ಅಷ್ಟಿಷ್ಟಾದರೂ ಉಳಿಸೋಣವೆಂಬ ತಜ್ಞರ ಶಿಫಾರಸನ್ನು ಹೊಸಕಿ ಹಾಕಲು ಇಡೀ ಶಾಸಕ ಸಮುದಾಯವೇ ಒಗ್ಗಟ್ಟಾಗಿ ನಿಂತಿದೆ. ನಮಗೆ, ನಮಗಷ್ಟೇ ಅಲ್ಲ ಇಡೀ ಜಗತ್ತಿಗೆ, ಬೇಕಿರುವುದು ಹಸುರು ಆರ್ಥಿಕತೆ. ಪಳೆಯುಳಿಕೆ ಇಂಧನದ ಮೇಲಿನ ಅವಲಂಬನೆಯನ್ನು ಕ್ರಮೇಣ ಕಡಿಮೆ ಮಾಡುತ್ತ, ಸೌರಶಕ್ತಿ, ಗಾಳಿಶಕ್ತಿ, ಕಡಲಶಕ್ತಿ, ಜೀವದ್ರವ್ಯ ಶಕ್ತಿಯನ್ನು ಬಳಸಿಕೊಳ್ಳುವತ್ತ ನಮ್ಮ ತಂತ್ರಜ್ಞಾನವನ್ನು ಒಗ್ಗಿಸಿಕೊಳ್ಳಬೇಕು. ದೇಶದ ಇಕಾನಮಿಯನ್ನು ಜೀವಾಧಾರಿತ ಆರ್ಥಿಕತೆಯತ್ತ ಕ್ರಮೇಣ ತಿರುಗಿಸಬೇಕು. ಗಿಡಮರ, ಜೀವದ್ರವ್ಯಗಳಿಂದಲೂ ಪ್ಲಾಸ್ಟಿಕ್ ಉತ್ಪಾದಿಸಲು ಸಾಧ್ಯವಿದೆ ಎಂದು ವಿಜ್ಞಾನಿಗಳು ತೋರಿಸಿದ್ದಾರೆ. ನಗರಗಳಿಂದ ಹೊರಹೊಮ್ಮುವ ತ್ಯಾಜ್ಯದ್ರವ್ಯಗಳನ್ನೂ ಸಂಪತ್ತನ್ನಾಗಿ ಪರಿವರ್ತಿಸಲು ಸಾಧ್ಯವಿದೆ ಎಂಬುದನ್ನು ಸಿಂಗಪುರದ ನಗರಾಡಳಿತ ತೋರಿಸಿಕೊಟ್ಟಿದೆ. ಇಂದಿನ ಬದುಕಿನ ಯಾವ ಸೌಕರ್ಯವನ್ನೂ ಬಲಿಹಾಕದೆ ನಾಳಿನ ಹಸುರು ಆರ್ಥಿಕತೆಯನ್ನು ಕಟ್ಟಿಕೊಳ್ಳಲು ಸಾಧ್ಯವಿದೆ. ಚಂದ್ರನತ್ತ, ಮಂಗಳನತ್ತ ತಂತ್ರಜ್ಞಾನದ ರೇಸ್ ಮಾಡುವ ಬದಲು, ನಾಳಿನ ಸುಸ್ಥಿರ ತಂತ್ರಜ್ಞಾನವನ್ನು ರೂಪಿಸುವಂತೆ ವಿಜ್ಞಾನಿಗಳಿಗೆ ಪ್ರೇರಣೆ ನೀಡಬಲ್ಲ, ಇಡೀ ರಾಷ್ಟ್ರದ ಪ್ರತಿಭೆಯನ್ನೆಲ್ಲ ಒಗ್ಗೂಡಿಸಬಲ್ಲ ನೇತೃತ್ವ ನಮಗಿಂದು ಬೇಕು. ಎಲ್ಲರನ್ನೂ ನಗರಗಳತ್ತ ದೌಡಾಯಿಸುವ ಬದಲು ಎಲ್ಲರೂ ಭಣಗುಡುವ ಭೂಮಿಯನ್ನು ಹಸುರು ಮಾಡುವತ್ತ ಹಿಮ್ಮೊಗ ಹೆಜ್ಜೆ ಇಡುವಂತೆ ಪ್ರೋತ್ಸಾಹಿಸಿ, ಇಡೀ ಜಗತ್ತಿಗೆ ಸುಸ್ಥಿರ ಬದುಕು, ಸಮಾನ ಬದುಕು ಸಾಧ್ಯವೆಂದು ತೋರಿಸಿ, ಭೂಮಿಯನ್ನು ಬಚಾವು ಮಾಡುವ ಕಾರ್ಯಕ್ಕೆ ಭಾರತ ಮುಂದಾಗಬೇಕು. ಇಷ್ಟಕ್ಕೂ ನಾಗರಿಕತೆಯ ಕಳೆದ ೫೦೦೦ ವರ್ಷಗಳಲ್ಲಿ ೪೮೫೦ ವರ್ಷಗಳ ಕಾಲ ಸೂರ್ಯನೇ ಶಕ್ತಿಮೂಲವಾಗಿದ್ದ. ಮುಂದಿನ ೫೦ ವರ್ಷಗಳ ನಂತರದ ಅನವರತವೂ ಸೂರ್ಯನೇ ಏಕೈಕ ಶಕ್ತಿಮೂಲವಾಗಿ ಉಳಿದಿರುತ್ತಾನೆ. ಈ ನಡುವಿನ ಚಿಕ್ಕ ಅವಧಿಯಲ್ಲಿ ಇಡೀ ಮಾನವ ಸಂಕುಲವನ್ನು ಸಂಕಟದ ಪ್ರಪಾತಕ್ಕೆ ತಳ್ಳಹೊರಟ ಇಂದಿನ ತಂತ್ರಜ್ಞಾನದ ದಿಕ್ಕನ್ನು ಬದಲಿಸಬಲ್ಲ ಮುಂದಾಳುಗಳು ನಮಗೆ ಬೇಕಾಗಿದ್ದಾರೆ.

ಅಂಥ ಬದಲೀ ಚಿಂತಕರನ್ನು, ಸಾಧಕರನ್ನು ಎಲ್ಲಿಂದ ಹುಡುಕಿ ತರೋಣ? ಅವಸರದಲ್ಲಿ ಅಂಥವರು ಸೃಷ್ಟಿಯಾಗುವುದಿಲ್ಲ. ನಾಳಿನ ಪೀಳಿಗೆಯನ್ನು ಹುಷಾರಾಗಿ ರೂಪಿಸಬೇಕು. ಇನ್ನು ೧೫-೨೦ ವರ್ಷಗಳ ನಂತರವೇ ಬಿಸಿ ಪ್ರಳಯದ ಅಸಲೀ ಕಾವು ನಮಗೆಲ್ಲ ತಟ್ಟತೊಡಗುತ್ತದೆ. ಆಗ ದೇಶವನ್ನು ಬಚಾವು ಮಾಡಿ, ಜಗತ್ತಿಗೇ ಬದಲೀ ಮಾರ್ಗವನ್ನು ತೋರಿಸಬಲ್ಲ ಯೋಜನಾತಜ್ಞರು, ರಾಜಕಾರಣಿಗಳು, ಐಎಎಸ್ ಅಧಿಕಾರಿಗಳು, ಅರಣ್ಯತಜ್ಞರು, ಕಂಪನಿ ಸೆಕ್ರೆಟರಿಗಳು, ವಾಣಿಜ್ಯೋದ್ಯಮಿಗಳು, ವಿದೇಶಾಂಗ ಕಾರ್ಯದರ್ಶಿಗಳು, ವಕೀಲರು, ಸೇನಾನಿಗಳು, ಪ್ರಾಯಶಃ ಸ್ವಾಮೀಜಿಗಳು ಎಲ್ಲರೂ ಇಂದು ಯಾವುದೋ ಹೈಸ್ಕೂಲುಗಳಲ್ಲಿ, ಪ್ರಾಥಮಿಕ ಶಾಲೆಯಲ್ಲಿ ಓದುತ್ತಿದ್ದಾರೆ. ಇಂದಿನ ಅವರ ಓದಿನ ಆದ್ಯತೆಯನ್ನು ಬದಲಿಸಬೇಕಿದೆ.

ಅದಕ್ಕೇ ಆರನೇ ಕ್ಲಾಸಿನ ಶ್ರೀಹರಿಯ ಉದಾಹರಣೆಯನ್ನು ಈ ಲೇಖನದ ಆರಂಭದಲ್ಲಿ ಕೊಟ್ಟಿದ್ದು.

**(ನಾಗೇಶ ಹೆಗಡೆಯವರು ಕರ್ನಾಟಕದ ಹೆಸರಾಂತ ಪರಿಸರವಾದಿ ಮತ್ತು ಪರಿಣಿತ ವಿಜ್ಞಾನ ಲೇಖಕರಲ್ಲೊಬ್ಬರು. ಹಾಗೇ ಬಹು ಜನಪ್ರಿಯ ಅಂಕಣಕಾರರು.)**

# ಉತ್ಪಾದನೆಯ ಹೆಚ್ಚಳವೋ? ಉದ್ಯೋಗ ಸೃಷ್ಟಿಯೋ?

–ಪ್ರಸನ್ನ



ತಲೆಬರಹವನ್ನು ಕಂಡು ಆಶ್ಚರ್ಯಪಡಬೇಡಿ. ಇಂದಿನ ಉತ್ಪಾದನೆಯ ಬೀಜಮಂತ್ರವೇ ಉದ್ಯೋಗ ಕಡಿತ. ಗ್ರಾಮೀಣ ಉದ್ಯೋಗಗಳನ್ನು (ಅಥವಾ ಪಾರಂಪರಿಕ ಉದ್ಯೋಗ ಅನ್ನಿ ಬೇಕಿದ್ದರೆ) ನಾಶಮಾಡಿದ ನಂತರ ಸಿದ್ಧಿಸುವ (ಪೇಟೆಯ ಉದ್ದಿಮೆಗಳ) ಉತ್ಪಾದನೆಯ ಹೆಚ್ಚಳವನ್ನೇ ನಾವು ಅಭಿವೃದ್ಧಿ ಎಂದು ಕರೆಯುತ್ತಿರುವುದು. ಉದಾಹರಣೆಗೆ ಹೇಳುವುದಾದರೆ, ಒಂದು ಕೈಮಗ್ಗ ನಾಶವಾದರೆ ಆರು ಜನ ಗ್ರಾಮಸ್ಥರು ಉದ್ಯೋಗ ಕಳೆದುಕೊಳ್ಳುತ್ತಾರೆ. ಒಂದು ವಿದ್ಯುತ್‌ಮಗ್ಗ ಸ್ಥಾಪಿತವಾದರೆ ಕೇವಲ ಅರ್ಧಜನಕ್ಕೆ ಕೆಲಸ ಸಿಕ್ಕುತ್ತದೆ. ಸ್ವಯಂಚಾಲಿತ ಯಂತ್ರಗಳನ್ನು ಬಳಸಿದ ಅಭಿವೃದ್ಧಿಯೆಂದರೇನೇ ಉದ್ಯೋಗ ಕಡಿತವಾಗಿದೆ.

ಇತ್ತೀಚೆಗೆ ನಾವು ಬಳಸುತ್ತಿರುವ ಮತ್ತೊಂದು ಪದವಿದೆ: ತೆರೆದ ಮಾರುಕಟ್ಟೆ. ತೆರೆದ ಮಾರುಕಟ್ಟೆಯು ತೆರೆದಿರುವುದು ರಾಗಿಜೋಳಗಳಿಗಲ್ಲ, ಟೀವಿ, ಫ್ರಿಜ್ಜು, ಕಂಪ್ಯೂಟರು ಹಾಗೂ ಕಾರುಗಳ ಸಲುವಾಗಿ ತೆರೆದಿದೆ ಅದು. ತೆರೆದ ಮಾರುಕಟ್ಟೆಯಿಂದಾಗಿ ಕೃಷಿಯೆಂಬುದು ಕುದುರೆ ಜೂಜಿನಂತಾಗಿದೆ. ಹತ್ತುಸಾವಿರ ರೂಪಾಯಿ ಬೆಲೆಯಿದೆಯೆಂದು ಪದಾರ್ಥವೊಂದನ್ನು ಬೆಳೆದರೆ ಮುಂದಲ ವರ್ಷ ಹತ್ತುರೂಪಾಯಿ ಕೂಡಾ ಗಿಟ್ಟದೆ ಹೋಗುವ ಪರಿಸ್ಥಿತಿ ರೈತರ ಪಾಲಿಗಿದೆ.

ಅದೇನೇ ಇರಲಿ ರೈತರೂ ಸೇರಿದಂತೆ ಸಕಲ ಗ್ರಾಮಸ್ಥರೂ, ತೆರೆದ ಮಾರುಕಟ್ಟೆಯ ಕನಸನ್ನು ಕೆಲಕಾಲ ನಂಬಿದರು. ಕೆಲವರು ಈಗಲೂ ನಂಬಿದ್ದಾರೆ. ರಾಗಿ ಬೆಳೆಯುವ ಒಂದೆಕರೆ ಹೊಲಕ್ಕೆ ನೂರುಸೈಟಿನ ಬೆಂಗಳೂರು ಬೆಲೆ ಬರುವ ಸಾಧ್ಯತೆಯು ರೈತರನ್ನು ಹುಚ್ಚಾಗಿಸಿತು. ಗ್ರಾಮಸ್ಥರು ಸುಲಭಸಂಸ್ಕೃತಿಯನ್ನು ಸುಲಭವಾಗಿಯೇ ರೂಢಿಸಿಕೊಂಡರು. ಶ್ರಮಸಂಸ್ಕೃತಿಯನ್ನು ಸಂಕೇತಗಳನ್ನಾಗಿಸಿಕೊಂಡು, ಗುಡಿ ಹಾಗೂ ಮಠಗಳಲ್ಲಿ ಪೂಜೆಗೆಂದಿಟ್ಟು, ಧೋತಿ ಕಳಚಿ, ಬೈಕು ಹತ್ತಿ, ಮೋಬೈಲು ಕಿವಿಗಿಕ್ಕಿಕೊಂಡು ತಾಲ್ಲೂಕು ಕಚೇರಿಗಳನ್ನು ಸುತ್ತತೊಡಗಿದರು. ಆದರೆ ಸುಲಭತೆಯೆಂಬುದು ಸುಲಭ ಆಯಾಸವಷ್ಟೆ ಹೌದು ಎಂದು ನಿಧಾನವಾಗಿ ಅರಿವಾಗತೊಡಗಿದೆ. ಈಗವರು, ಇತ್ತ ಸುಲಭತೆಯೂ ದಕ್ಕದೆ, ಅತ್ತ ಶ್ರಮಜೀವನಕ್ಕೂ ಮರಳಲಾಗದೆ, ಅಬ್ಬೇಪಾರಿಗಳಾಗಿ ಆತ್ಮಹತ್ಯೆ ಮಾಡಿಕೊಳ್ಳುತ್ತ ಅಥವಾ ಎಂಡ್ಕುಡ್ಕ ರತ್ನನಾಗುತ್ತ, ಅಲೆದಾಡುತ್ತಿದ್ದಾರೆ. ಇರಲಿ.

ನಾವು ಭಾರತೀಯರು ಕೊಂಚ ತಡವಾಗಿ, ಸ್ವಯಂಚಾಲಿತ ಯಂತ್ರ ಹಾಗೂ ತೆರೆದಮಾರುಕಟ್ಟೆಯ ನೀತಿಯನ್ನು ಒಪ್ಪಿಕೊಂಡು, ಉತ್ಪಾದನೆಯನ್ನು ಹೆಚ್ಚಿಸಲಿಕ್ಕೆ ಹೊರಟೆವು. ಹಾಗೆ ಹೆಚ್ಚಿದ ಉತ್ಪಾದನೆಯ ತುಂಡೊಂದನ್ನು ಬಡವರತ್ತ ಎಸೆಯಬೇಕೆಂಬ ಇರಾದೆಯೂ ಭಾರತೀಯ ಶ್ರೀಮಂತರಿಗಿತ್ತು, ಇರಲಿ.

ಹೇಗೆ ಬಂತು ಈ ಯೋಚನೆ? ಕೂಲಿಕಾರರನ್ನು ನಿಭಾಯಿಸಿ ನಿಭಾಯಿಸಿ ನಲುಗಿಹೋಗಿದ್ದರು ಸಾಹುಕಾರರು. ಕೂಲಿಕಾರರ ಹಕ್ಕುಗಳು, ಕೂಲಿಕಾರರ ಗೋಳುಕರೆ, ಕೂಲಿಕಾರರ ಮುಷ್ಕರಗಳು, ಒಂದು ಕಡೆಯಾದರೆ, 'ಬೆರಕೆ ಆರ್ಥಿಕತೆ'ಯೆಂಬ ಕಾಂಗ್ರೆಸ್ಸಿನ ಹಳೆಯ ನೀತಿ ಸೃಷ್ಟಿಸಿದ್ದ ವಿಳಂಬಗತಿಯ ಆಡಳಿತ ಹಾಗೂ ಭ್ರಷ್ಟಾಚಾರಗಳು ಮತ್ತೊಂದು ಕಡೆಯಿಂದ ಅವರನ್ನು ಹಿಂಸಿಸಿತ್ತು. ಸಹಜವಾಗಿಯೇ ಶ್ರೀಮಂತರು ತಂತ್ರಜ್ಞಾನ ಹಾಗೂ ತೆರೆದ ಮಾರುಕಟ್ಟೆಯ ನೀತಿಗೆ ಮಾರುಹೋದರು.

ಅನಿರ್ಬಂಧಿತವಾದ ಹೆಚ್ಚಳವು ನಿಜಕ್ಕೂ ಸಾಧ್ಯವೇ? ಸಾಧ್ಯವಿಲ್ಲ. ಆದರೆ ವಸಾಹತುಶಾಹಿ ನೀತಿ ಬಳಸಿ, ಬಡರಾಷ್ಟ್ರಗಳು ಹಾಗೂ ತನ್ನದೇ ಕಾರ್ಮಿಕರನ್ನು ಶೋಷಿಸುವ ಮೂಲಕ, ಅದು ಕೆಲಕಾಲ ಸಾಧ್ಯವೆಂದು ಉತ್ತರವಿಶ್ವದ ಪಶ್ಚಿಮ ದೇಶಗಳು, ಅರ್ಥಾತ್ ಯೂರೋಪು ಹಾಗೂ ಉತ್ತರಅಮೇರಿಕ ದೇಶಗಳು ಮೊದಲಿಗೆ ತೋರಿಸಿಕೊಟ್ಟವು. ದಕ್ಷಿಣವಿಶ್ವದ ಪೂರ್ವಾತ್ಯ ದೇಶಗಳು– ಅಲ್ಪಸ್ವಲ್ಪ ಬದಲಾವಣೆಯೊಂದಿಗೆ, ಪಶ್ಚಿಮದ ಮಾದರಿಯನ್ನು ಅನುಸರಿಸಿದವು.



ಏನಿದು ಮಾದರಿ? ಬಡರಾಷ್ಟ್ರಗಳನ್ನು, ಇಲ್ಲವೇ ಆಕ್ರಮಿಸಿಕೊಳ್ಳುವುದು, ಇಲ್ಲವೇ ವಿವಿಧ ರೀತಿಯ ಬಲವಂತ ಹೇರಿ ಕಚ್ಚಾವಸ್ತು ಅಥವಾ ಕಚ್ಚಾಕೂಲಿ ಅಥವಾ ಕಚ್ಚಾಭೂಮಿ, ಕಚ್ಚಾಬೆಳಕು, ಕಚ್ಚಾನೀರು, ಕಚ್ಚಾತೈಲ, ಇತ್ಯಾದಿ ಕಚ್ಚಾಸಾಮಗ್ರಿಯನ್ನು ಸುಲಭ ಬೆಲೆಗೆ ಗೆಬರಿಕೊಂಡು ತರುವುದು. ತಮ್ಮ ರಾಷ್ಟ್ರಗಳಲ್ಲಿ, ಕೊಂಚ ಬಲವಂತದಿಂದಲೇ, ಔದ್ಯೋಗಿಕ ಕ್ರಾಂತಿಯನ್ನು ಜಾರಿಗೆ ತಂದು ದುಡ್ಡು ಮಾಡುವುದು.

ವಸಾಹತುಶಾಹಿ ಪದ್ಧತಿಯನ್ನು ಮೊದಲಿಗೆ ಅನುಸರಿಸಿದ ಯೂರೋಪು ಹಾಗೂ ಉತ್ತರಅಮೇರಿಕೆಗಳು, ಹದಿನೆಂಟರಿಂದ ಆರಂಭಿಸಿ ಇಪ್ಪತ್ತನೆಯ ಶತಮಾನದವರೆಗೆ, ಕಣ್ಣುಕುಕ್ಕುವಂತಹ ಶ್ರೀಮಂತಿಕೆ, ಸಂಗೀತ, ಸಾಹಿತ್ಯ, ನಾಟಕ, ಸೌಂದರ್ಯ, ಶಿಷ್ಟಾಚಾರ, ಎಲ್ಲವನ್ನೂ ಮೆರೆದವು. ಅವರ ವೈಭವ ಕಂಡು ನಾವು ದಂಗಾಗಿ ಹೋದೆವು. ನಾವೂ ಸಹ ನವವಸಾಹತುಶಾಹಿ ನೀತಿಯನ್ನು ಅನುಕರಿಸತೊಡಗಿದೆವು. ೧೯೯೧ರ ನಂತರವಂತೂ– ನರಸಿಂಹರಾಯರ ಸಾರಥ್ಯದಲ್ಲಿ ಹಾಗೂ ಮನಮೋಹನಸಿಂಗರ ಆರ್ಥಿಕ ಮಂತ್ರಿತ್ವದಲ್ಲಿ, 'ಬೆರಕೆ ಆರ್ಥಿಕತೆ' ಎಂಬ ನೆಹರೂ ಯುಗದ ನೀತಿಯನ್ನು ಗಂಗೆಯಲ್ಲಿ ತೇಲಿಬಿಟ್ಟು 'ತೆರೆದ ಮಾರುಕಟ್ಟೆ'ಯೆಂಬ ಹೊಸ ನೀತಿಯನ್ನು ಅಪ್ಪಿಕೊಂಡೆವು. ನಮ್ಮ ರಾಷ್ಟ್ರೀಯ ಚಳುವಳಿಯ ನಾಯಕರುಗಳು ವಸಾಹತುಶಾಹಿ ಪದ್ಧತಿಯ ಬಗ್ಗೆ ತಳೆದಿದ್ದ ವಿಮರ್ಶಾತ್ಮಕವಾದ ನಿಲುವು, ಹೀಗೆ, ಸಂಪೂರ್ಣವಾಗಿ ಮರೆಯಾಯಿತು.

ಬಂದಿತು ಬದಲಾವಣೆ: ರಾಗಿಮುದ್ದೆಯ ಬದಲಿಗೆ ಬರ್ಗರುಗಳು, ಸಗಣಿಗೊಬ್ಬರಕ್ಕೆ ಬದಲು ಮಾಂಟೆಸೋ ಕ್ರಿಮಿನಾಶಕಗಳು, ವರನಟ ರಾಜಕುಮಾರನಿಗೆ ಬದಲು ಹಾಲಿವುಡ್ಡಿನ ಹೀರೋಗಳು, ಲಭ್ಯವಾಗತೊಡಗಿದರು. ಕುಳಿತು ಹಾಡುವ ಅಯ್ಯರಿಗಳ ಬದಲು ಕಿರುಚಿ ಕುಣಿಯುವ ಮೈಕೆಲ್‌ಜಾಕ್ಸನ್‌ಗಳು, ಬಿಜ್ಜೋಲೆಗೌರಮ್ಮನಂತಹ ಗಂಗೂಬಾಯಿಗೆ ಬದಲು ಕುಣಿಯುತ್ತ ಹಾಡುವ ಬಿಳಿತೊಗಲಿನ ಅರೆಬತ್ತಲೆ ರಮಣಿಯರು ಲಭ್ಯವಾಗತೊಡಗಿದರು. ನಿರ್ಭಿಡೆಯಿಂದ, ನಮ್ಮದೇ ಮೊಬೈಲುಗಳಲ್ಲಿ ಪೋಲಿಚಿತ್ರಗಳನ್ನು ವೀಕ್ಷಿಸುವುದು ನಮಗೆ ಸಾಧ್ಯವಾಯಿತು. ತೆರೆದ ಮಾರುಕಟ್ಟೆಯ ಪ್ರಯೋಗವು ಮೊದಲ ಹತ್ತುವರ್ಷಗಳ ಕಾಲ ಆರ್ಥಿಕವಾಗಿ ಸಾಕಷ್ಟು ಯಶಸ್ವಿಯಾಯಿತು. ತತ್‌ಪರಿಣಾಮವಾಗಿ ಬೆಂಗಳೂರಿನ ಖಾಲಿ ರಸ್ತೆಗಳ ತುಂಬ ಕಾರುಗಳು ತುಂಬಿಕೊಂಡವು. ಹೀಗೆ ಭಾರತೀಯ ಆರ್ಥಿಕತೆ ಎಂಬ ವಾಹನವು, ಕೊಂಚಕಾಲ ಚಲಿಸಿ, ಕಡೆಗೆ ಹಿಂದಕ್ಕೂ ಹೋಗದೆ ಮುಂದಕ್ಕೂ ಹೋಗದೆ, ಚಲಿಸುತ್ತಲೇ ನಿಂತಿರುವುದನ್ನು ಕಲಿತಿತು. ನಾವೂ ನಿಂತಲ್ಲೆ, ಏದುಸಿರುಬಿಡುತ್ತ, ಉದ್ವೇಗಪಡುತ್ತ, ಓಡುತ್ತಿರುವ ಹವ್ಯಾಸ ಬೆಳೆಸಿಕೊಂಡೆವು.

ಶ್ರೀಮಂತರೆಂದರೆ ಯಾರು? ಇಂದಿನ ಕೈಗಾರಿಕೋದ್ಯಮಿಗಳು, ಸೇವಾಉದ್ದಿಮೆಗಳ ಪತಿಗಳು, ಬ್ಯಾಂಕಿಂಗ್ ಉದ್ದಿಮೆಗಳ ಪತಿಗಳು, ಆರ್ಥಿಕತಜ್ಞರು, ರಾಜಕಾರಣಿಗಳು, ಬುದ್ಧಿಜೀವಿಗಳು, ಮಠಾಧೀಶರು, ರಿಯಲೆಸ್ಟೇಟಿನ ದಂಧೆ ಮಾಡುವವರು, ಕಳ್ಳಕಾಕರು, ಒಟ್ಟಾರೆಯಾಗಿ ನಾವೆಲ್ಲರೂ ಹೌದು. ಕಾಂಗ್ರೆಸ್‌ಪಕ್ಷದಿಂದ ಹಿಡಿದು ಬಿಜೆಪಿಯವರೆಗಿನ ಎಲ್ಲ ರಾಜಕೀಯಪಕ್ಷಗಳೂ, ಸ್ವದೇಶಿ ಎಂಬ ಪದವನ್ನು 'ರಾಷ್ಟ್ರದ ಗಡಿ' ಎಂಬ ಸೀಮಿತಅರ್ಥಕ್ಕೆ ಒಗ್ಗಿಸಿಕೊಂಡು, ದೇಶಪ್ರೇಮಿಗಳು ತಾವು ಎಂದು ತಮ್ಮನ್ನೇ ನಂಬಿಸಿಕೊಂಡು, ಮುಕ್ತಮಾರುಕಟ್ಟೆಯಲ್ಲಿ ಚಲಿಸದೆ ನಿಂತಿದ್ದಾವೆ ಹಾಗೂ ಭ್ರಷ್ಟರಾಗುತ್ತಿದ್ದಾವೆ. ಮಧ್ಯಮವರ್ಗ ಹಾಗೂ ಮೇಲ್‌ಮಧ್ಯಮವರ್ಗದ ಸುಶಿಕ್ಷಿತರು, ಪ್ರಜ್ಞಾವಂತರು... ಇತ್ಯಾದಿ ಎಲ್ಲ ಧೀಮಂತರೂ ಸೇರಿ ಮುಕ್ತಮಾರುಕಟ್ಟೆಯ ಜಯಘೋಷ ಮಾಡುತ್ತಿದ್ದಾರೆ. ಗಾಂಧೀಜಿ, ಮಾರ್ಕ್ಸ್, ಅಂಬೇಡ್ಕರ್ ಇತ್ಯಾದಿ ಹಳಬರನ್ನೂ ಸಹ, ಹೇಗಾದರೂ ಮಾಡಿ, ಪೇಟೆಯ ಗೌಜು ಗದ್ದಲದೊಳಗೆ ತುರುಕಿಬಿಡಬೇಕೆಂದು ಹರಸಾಹಸ ಪಡುತ್ತಿದ್ದಾರೆ.

ಗದ್ದಲದೊಳಗೆ ಸೇರದೆ ಹೊರಗೆ ನಿಂತವರೂ ಕೆಲವರಿದ್ದಾರೆ.

ಅವರನ್ನು ಮಡಿವಂತ ಗಾಂಧಿವಾದಿಗಳು ಇಲ್ಲವೇ ವ್ಯಗ್ರ ಎಡಪಂಥೀಯರು ಎಂದು ಕರೆಯಬಹುದಾಗಿದೆ. ಅವರು ಏನನ್ನೂ ಮಾಡುತ್ತಿಲ್ಲ. ಸಂದಿಗ್ಧ ಅನುಭವಿಸುತ್ತಿದ್ದಾರೆ. ಇತ್ತ ಬಂಡವಾಳಶಾಹಿ ಪದ್ಧತಿಯನ್ನು ತಿರಸ್ಕರಿಸುತ್ತಲೇ ಅತ್ತ ಬೃಹತ್ ಯಂತ್ರೋದ್ಯಮವನ್ನು ಬೆಂಬಲಿಸಹೊರಟು, ಇತ್ತ ಗ್ರಾಮಸ್ಥರಿಗೂ ಸಲ್ಲದೆ ಅತ್ತ ಮಾರುಕಟ್ಟೆಗೂ ಸಲ್ಲದೆ, ನಡುಮಧ್ಯೆ ಬಿದ್ದಿದ್ದಾರೆ ಎಡಪಂಥೀಯರು. ಇಲ್ಲವೇ ರಕ್ತಕ್ರಾಂತಿಯೆಂಬ ವ್ಯರ್ಥಹೋರಾಟದಲ್ಲಿ ನೋವುಣ್ಣುತ್ತಿದ್ದಾರೆ. ಕರ್ಮಠ ಬ್ರಾಹ್ಮಣ ಯತಿಗಳ ಮಡಿವಂತ ಸ್ಥಿತಿ ಅವರದ್ದು. ಪ್ರಶ್ನೆಮಾಡುವ ಕಾಮ್ರೇಡುಗಳನ್ನು ಒಬ್ಬೊಬ್ಬರನ್ನಾಗಿಯೇ ಹೊರಹಾಕುತ್ತ, ಎಡಪಂಥವೆಂಬ ಬೇಲಿ ಮಾತ್ರವನ್ನೇ ಉಳಿಸಿಕೊಂಡಿದ್ದಾರೆ. ಇತ್ತ ಗಾಂಧೀವಾದಿಗಳು ಸಂಪೂರ್ಣ ಸನ್ಯಾಸ ಸ್ವೀಕರಿಸಿದ್ದಾರೆ.

ಆದರೆ ನನಗೆ ನಂಬಿಕೆ ಇದೆ. ಒಂದಲ್ಲ ಒಂದು ದಿನ ಇವರಿಬ್ಬರೂ ತಮ್ಮ ಸಂದಿಗ್ಧಗಳನ್ನು ಮೀರಿ ಹೊರಬಂದಾರು, ಒಟ್ಟಾದಾರು, ಬಡಜನರನ್ನು ಮತ್ತೊಮ್ಮೆ ಮುಂದಕ್ಕೆ ಕೊಂಡೊಯ್ದಾರು ಎಂದು. ನಂಬಿಕೆಗೆ ಕಾರಣವೂ ಇದೆ. ಅಮೇರಿಕೆಯೆಂಬ ರಾಕ್ಷಸನನ್ನು ಎದುರಿಸಿನಿಂತು ದಕ್ಷಿಣ ಅಮೇರಿಕೆಯ ಕೆಲವು ಬಡರಾಷ್ಟ್ರಗಳನ್ನು ಮುಂದಕ್ಕೊಯ್ಯುತ್ತಿರುವವರು ಎಡಪಂಥೀಯರೇ ತಾನೆ? ಹಸಿರು ಕೈಗಾರಿಕೆ, ಪರ್ಯಾಯ ಧಾರ್ಮಿಕತೆ, ಸಹಕಾರ, ಸರಳತಂತ್ರಜ್ಞಾನ... ಇತ್ಯಾದಿ ಕ್ಷೇತ್ರಗಳಲ್ಲಿ, ಕ್ಯೂಬಾದೇಶ ಮೊದಲುಗೊಂಡು, ದಕ್ಷಿಣ ಅಮೇರಿಕೆಯ ಹಲವು ಎಡಪಂಥೀಯರು ಅಸಾಧಾರಣ ಕೆಲಸ ಮಾಡಿದ್ದಾರೆ ತಾನೆ? ಇರಲಿ,

ಗ್ರಾಮೀಣಾಭಿವೃದ್ಧಿ! ಹೇಗೆ ಮಾಡುತ್ತೀರಿ ಗ್ರಾಮೀಣಾಭಿವೃದ್ಧಿಯನ್ನು? ಸ್ವಯಂಚಾಲಿತ ಯಂತ್ರಗಳನ್ನು ಬಳಸಿಯೆ? ಅಲ್ಲ. ಗ್ರಾಮೀಣ ಪ್ರದೇಶಗಳಿಗೆ ಬೇಕಿರುವುದು ಸ್ವಯಂಚಾಲಿತ ವೈಚಾರಿಕತೆಯೇ ಹೊರತು ಸ್ವಯಂಚಾಲಿತ ಯಾಂತ್ರಿಕತೆಯಲ್ಲ. ಏನದು ಸ್ವಯಂಚಾಲಿತ ವೈಚಾರಿಕತೆಯೆಂದರೆ? ಕುವೆಂಪು ಅವರು ಅದನ್ನು ನಿರಂಕುಶಮತಿ ಎಂದು ಕರೆದಿದ್ದರು. ಸ್ವಯಂಚಾಲಿತ ವೈಚಾರಿಕತೆ, ಅಥವಾ ನಿರಂಕುಶಮತಿ, ಅಥವಾ ಸತ್ಯನಿಷ್ಠೆ, ಅಥವಾ 'ರಾಮರಾಜ್ಯ', ಎಂಬಿತ್ಯಾದಿ ಪರಿಕಲ್ಪನೆಗಳನ್ನು ಹಲವು ರೀತಿಯಿಂದ ಅರ್ಥೈಸಬಹುದಾಗಿದೆ.

ಈಗೊಂದು ಮಾದರಿಯ ನಿರಂಕುಶಮತಿ ಚಾಲತಿಯಲ್ಲಿದೆ. ನಾನದನ್ನು ಅಂಬರೀಶ ಮಾದರಿ ಎಂದು ಕರೆಯಲು ಇಚ್ಚಿಸುತ್ತೇನೆ. ಕುವೆಂಪು ಅವರ ಜನಾಂಗದಲ್ಲಿಯೇ ಹುಟ್ಟಿ, ಕುವೆಂಪು ಅವರ ಕಲಾವೃತ್ತಿಯನ್ನೇ ಸ್ವೀಕರಿಸಿರುವ, ಅಂಬರೀಶರು ಈ ರೀತಿ ನುಡಿದರು: 'ಏನೀಗ? ಮುನ್ನೂರಾ ಐವತ್ತು ಹುಡುಗೀರ್ನ ಇಟ್ಕಂಡಿವ್ನಿ, ಏನೀಗ?' ಅಥವಾ ಸ್ವಾತಂತ್ರ್ಯದ ಎಲ್ಲ ಅರ್ಥಗಳನ್ನೂ 'ಕಿಸ್ ಆಫ್ ಲವ್' ಎಂಬ ದೈಹಿಕ ಅರ್ಥಕ್ಕಿಳಿಸುವ ಮಾದರಿಯೂ ಜಾರಿಯಲ್ಲಿದೆ. ಕುವೆಂಪು, ಶ್ರೀರಾಮಚಂದ್ರ, ಮಹಾತ್ಮಾಗಾಂಧಿ, ಇತ್ಯಾದಿ ಹಳಬರ ಮಾದರಿ ಅದಲ್ಲ. ಶ್ರಮಸಹಿತವಾದ, ಆದರೆ ಸಮಾನವಾದ, ಸರಳ ಜೀವನ ನಡೆಸುವುದು ಹಳಬರ ಮಾದರಿಯಾಗಿತ್ತು.



ಕುವೆಂಪು ಅವರಿಗೆ ಅರಿವಿತ್ತು: ಗ್ರಾಮಗಳಿಗೆ ಬೇರು ಬಿಡುವ ಹವ್ಯಾಸ ಎಂದು. ಬೇರುಗಳು ಹಾಗೂ ಬಿಳಲುಗಳು ನಿರಂಕುಶಮತಿಯನ್ನು ಸಲಹಲಾರವು ಎಂಬ ಅರಿವಿತ್ತು ಅವರಿಗೆ. ಕುವೆಂಪು ಅವರು ಅಷ್ಟಾಗಿ ಗಮನಿಸದೆ ಇದ್ದ ಮತ್ತೊಂದು ಅರಿವು, ಇಪ್ಪತ್ತೊಂದನೆಯ ಶತಮಾನದಲ್ಲಿ ಬದುಕಿರುವ ನಮಗಾಗುತ್ತಿದೆ. ಕುವೆಂಪು ಅವರ ಅರಿವಿನಷ್ಟೇ ಪ್ರಮುಖವಾದ ಹಾಗೂ ಪ್ರಖರವಾದ ಅರಿವಿದು. ಆಧುನಿಕತೆ ಸುಸ್ಥಿರವಲ್ಲ ಎಂಬ ಅರಿವು ನಮಗಾಗುತ್ತಿದೆ.

ಹೌದು! ಪರಂಪರೆ ಚಲನಶೀಲವಲ್ಲ, ಆಧುನಿಕತೆ ಸುಸ್ಥಿರವಲ್ಲ. ಇದೊಂದು ಸಂದಿಗ್ಧ. ನೀರಿರುವ ಮಲೆನಾಡಿನಲ್ಲಿ ಫಲವತ್ತತೆ ಕಡಿಮೆ, ನೀರಿರದ ಬಯಲುಸೀಮೆಯಲ್ಲಿ ಫಲವತ್ತತೆ ಅಧಿಕ. ಹಲ್ಲಿರುವಲ್ಲಿ ಕಡಲೆ ಕಡಿಮೆ, ಹಲ್ಲಿರದಲ್ಲಿ ಕಡಲೆ ಅಧಿಕ. ಇದನ್ನು ಸಂದಿಗ್ಧ ಎಂದು ತಿಳಿಯುವುದಕ್ಕಿಂತ, ಇದೇ ಪ್ರಕೃತಿ ನಿಯಮ ಎಂದು ತಿಳಿಯುವುದು ಸೂಕ್ತ. ಹಾಗೆಂದೇ ಅರಿವಿರುವವರು ಹಿತಮಿತವಾದ ಮಧ್ಯಮಮಾರ್ಗ ಬಳಸುತ್ತಾರೆ. ಅಭಿವೃದ್ಧಿಗೂ ಒಂದು ಮಧ್ಯಮಮಾರ್ಗ ಸಾಧ್ಯವಿದೆ.

ಚಲನಶೀಲ ವೈಚಾರಿಕತೆ ಹಾಗೂ ಪಾರಂಪರಿಕ ಸುಸ್ಥಿರತೆ ಎರಡೂ ಸಭ್ಯತೆಯ ಅಗತ್ಯಗಳು. ಶ್ರಮಸಹಿತವಾದ ಸರಳ ಬದುಕಿನಲ್ಲಿ ಇವೆರಡೂ ಸಂಗತಿಗಳನ್ನು ಒಟ್ಟಾಗಿ ಹಿಡಿದಿಡುವುದು ಸಾಧ್ಯವಿದೆ. ಸರಳ ಬದುಕಿನಲ್ಲಿ ಇವೆರಡೂ ಸಂಗತಿಗಳನ್ನು ಒಟ್ಟಾಗಿ ಹಿಡಿದಿಡುವುದು ಸಾಧ್ಯವಿದೆ. ಆಧುನಿಕ ಅಭಿವೃದ್ಧಿ ಮಾದರಿಯಲ್ಲಿ ಸಾಧ್ಯವಿಲ್ಲ. ಆಧುನಿಕ ಅಭಿವೃದ್ಧಿಯೆಂಬುದು ಬೆಂಗಳೂರಿನ ರಸ್ತೆಗಳಂತೆ ಧೂಳು, ದುಮ್ಮಾನ, ಆತಂಕ, ಉದ್ವೇಗಗಳನ್ನು ಅನುಭವಿಸುತ್ತಲೇ ಚಲನೆಯ ಭ್ರಮೆಯಲ್ಲಿ ನಿಂತಿರುವುದು ಆಧುನಿಕ ಅಭಿವೃದ್ಧಿಯಾಗಿದೆ. ಆಧುನಿಕ ಅಭಿವೃದ್ಧಿಯು ಬಡವರಿಗೆಷ್ಟು ಅಪಾಯಕಾರಿಯೋ ಅಷ್ಟೇ ಶ್ರೀಮಂತರಿಗೂ ಅಪಾಯಕಾರಿಯಾಗಿದೆ. ಈ ಸಂಗತಿ, ಇತ್ತೀಚಿನ ದಿನಗಳಲ್ಲಿ, ಅವರಿಗೂ ಅರಿವಾಗತೊಡಗಿದೆ.

## 'ಅಭಿವೃದ್ಧಿ' ಎಂಬ ಆಕಾಶದ ರಣಹದ್ದುಗಳು

–ಡಾ. ರಾಜೇಂದ್ರ ಚೆನ್ನಿ




**ಕೆ**ಲವು ದಿನಗಳಿಂದ ನಾನು ಓದುತ್ತಿರುವ ಪುಸ್ತಕವೊಂದು ನನ್ನನ್ನು ಆಳವಾಗಿ ಕೆದಕಿ, ಹಿಡಿದು ಅಲ್ಲಾಡಿಸಿಬಿಟ್ಟಿದೆ. ನಾವು ನಮ್ಮ ಸದ್ಯದ ಚರಿತ್ರೆಯ ಸತ್ಯಗಳನ್ನು ಗ್ರಹಿಸಬಲ್ಲೆವೆ ಅಥವಾ ಕಂಡದ್ದನ್ನು ಅರಿಯಲಾಗದೆ ಸತ್ಯಕ್ಕೆ ಹೆದರಿಕೊಂಡು ಉಗುರು ಬೆಚ್ಚಗಿನ ಮಿಥ್ಯೆಗಳನ್ನೇ ನೆಚ್ಚಿಕೊಂಡು ಸಾಮೂಹಿಕವಾದ ಮಂಪರಿನಲ್ಲಿ ಬದುಕುತ್ತಿದ್ದೇವೆಯೇ ಎಂದು ಕೇಳಿಕೊಳ್ಳುವಂತೆ ಮಾಡಿದೆ. ಹತ್ತಾರು ವರ್ಷಗಳಿಂದ ಜಾಗತೀಕರಣದ ಬಗ್ಗೆ ಅಧ್ಯಯನ ಮಾಡುತ್ತ ಬರೆಯುತ್ತ ಬಂದ ನನಗೆ ಈ ಪುಸ್ತಕವನ್ನು ಓದುತ್ತಿರುವಂತೆ ಅದರ ಮೂಲದಲ್ಲಿರುವ ಕರಾಳ ಹಿಂಸೆಗಳನ್ನು ಅರ್ಥಮಾಡಿಕೊಳ್ಳಲು ಆಗಲಿಲ್ಲವೇ ಎನ್ನುವ ಸಂಶಯವೂ ಬಾಧಿಸುತ್ತಿದೆ.

ಈ ಪುಸ್ತಕ ನಾಓಮಿ ಕ್ಲೀನ್ (Naomi Klein) ಬರೆದಿರುವ 'The Shock Doctrine' ಎನ್ನುವ ಕೃತಿ. ಈ ಕೃತಿ ಆರಂಭವಾಗುವುದು ಹೀಗೆ: ಅಮೇರಿಕದ ನ್ಯೂ ಓರ್ಲೀನ್ಸ್ ನಗರವನ್ನು ಅಪ್ಪಳಿಸಿದ ಚಂಡಮಾರುತವು ಅದು ತಂದ ಪ್ರವಾಹದಿಂದ ನಗರದ ಕೆಳಮಧ್ಯಮವರ್ಗದವರು ವಾಸ ಮಾಡುತ್ತಿದ್ದ ಬಡಾವಣೆಗಳನ್ನು, ಮನೆಗಳನ್ನು ಗುಡಿಸಿಹಾಕಿಬಿಡುತ್ತದೆ. ಸಾವಿರಾರು ಜನ ಬೀದಿ ಪಾಲಾಗುತ್ತಾರೆ. ಆದರೆ ಅಲ್ಲಿಯ ರಾಜಕೀಯ ಧುರೀಣರು "ನಾವು ಮಾಡಲಾಗದ್ದನ್ನು ದೇವರೇ ಮಾಡಿದ. ಈಗ ಸ್ವಚ್ಛವಾದ ಸ್ಲೇಟಿನ ಮೇಲೆ ಹೊಸದಾಗಿ ಬರೆದಂತೆ ಈ ನಗರವನ್ನು ಮರುನಿರ್ಮಾಣ ಮಾಡಬಹುದು" ಎಂದು ಸಂಭ್ರಮಿಸುತ್ತಾರೆ. ಆ ನಗರಕ್ಕೆ ಕಾರ್ಪೋರೇಟ್ ಬಂಡವಾಳಶಾಹಿ ಪ್ರತಿನಿಧಿಗಳು ದಂಡು ದಂಡಾಗಿ ಬಂದಿಳಿದು ಪ್ರಕೃತಿಯೇ ಗುಡಿಸಿ ಹಾಕಿದ ಜಾಗಗಳಲ್ಲಿ ಟೂರಿಸ್ಟ್ ರೆಸಾರ್ಟುಗಳನ್ನು, ಐಶಾರಾಮಿ ಬಂಗಲೆಗಳನ್ನು ನಿರ್ಮಿಸುವ ಯೋಜನೆಗಳನ್ನು ಆರಂಭಿಸುತ್ತಾರೆ. ಅವರಿಗೆ ಬಹಳ ಅನುಕೂಲವಾದ ಸಂಗತಿಯೆಂದರೆ ಚಂಡಮಾರುತದಿಂದಾಗಿ ಆಘಾತದಲ್ಲಿರುವ ಜನರಿಂದ ಪ್ರತಿರೋಧ ಬರುವ ಸಾಧ್ಯತೆಯಿಲ್ಲ. ಸರಕಾರ ಕೂಡ ಪುನರ್ವಸತಿಯ ಹೆಸರಿನಲ್ಲಿ ಕಾರ್ಪೋರೇಟ್ ಕಂಪನಿಗಳಿಗೆ ತೆರಿಗೆ ವಿನಾಯತಿ, ಕಾನೂನುಗಳಿಂದ ಸ್ವಾತಂತ್ರ್ಯ ಇವುಗಳನ್ನು ಕೊಡಬಲ್ಲದು.



ಇದೇ ರೀತಿ ಶ್ರೀಲಂಕಾದ ಕರಾವಳಿಯ ಮೇಲೆ ಸುನಾಮಿ ಅಲೆಗಳು ಅಪ್ಪಳಿಸಿ ಬಡ ಮೀನುಗಾರರ ವಸತಿಗಳನ್ನು ಗುಡಿಸಿ ಹಾಕುತ್ತವೆ. ಅವರನ್ನು 'ತೆರವುಗೊಳಿಸುತ್ತವೆ'. ಶ್ರೀಲಂಕಾ ಸರಕಾರವು ಹೀಗೆ ಹೇಳುತ್ತದೆ. "ಇದು ಒಂದು ದುರಂತವೆನ್ನುವುದು ನಿಜ. ಆದರೆ ಪ್ರಕೃತಿಯು ಇದರ ಮೂಲಕ ಒಂದು ಅನನ್ಯವಾದ ಅವಕಾಶವನ್ನು ತೆರೆದಿಟ್ಟಿದೆ. ಇಲ್ಲಿ ನಾವು ಈಗ ವಿಶ್ವದರ್ಜೆಯ ಟೂರಿಸ್ಟ್ ನೆಲೆಯನ್ನು ನಿರ್ಮಿಸಬಹುದಾಗಿದೆ".

ನಾಓಮಿ ಕ್ಲೀನ್ ಈ ಉದಾಹರಣೆಗಳ ಮೂಲಕ 'shock doctrine'' ಅಂದರೆ ಏನು ಎಂದು ವಿವರಿಸುತ್ತಾರೆ. ಹೇಗೆ ಪ್ರಕೃತಿಯ ಅವಘಡಗಳಿಂದಾಗಿ ಜನಸಮುದಾಯ ದಿಗ್ಭ್ರಮೆಯಲ್ಲಿರುವಾಗ ಅದನ್ನು ಒಂದು



ಅವಕಾಶವೆಂದುಕೊಂಡು ಸರಕಾರಗಳು ಕಾರ್ಪೋರೇಟ್‌ಗಳ ಜೊತೆ ಸೇರಿ ತಮ್ಮ ಬಂಡವಾಳಶಾಹಿ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರುತ್ತವೆಯೋ ಹಾಗೆಯೆ ಯುದ್ಧ, ಜನಾಂಗೀಯ ಹತ್ಯೆ, ಸರ್ವಾಧಿಕಾರ ಇವುಗಳ ಮೂಲಕ shock treatment ಕೊಟ್ಟು ಅಂಥ ಕಾರ್ಯಕ್ರಮಗಳನ್ನು ಜಾರಿಗೆ ತರುತ್ತವೆ. ಅಗಾಧವಾದ ಹಿಂಸೆ ಹಾಗೂ ಆಕ್ರಮಣಗಳ ಮೂಲಕ ಜನರ ಪ್ರತಿರೋಧವೇ ಇಲ್ಲದ 'clean slate' ಪರಿಸ್ಥಿತಿಯನ್ನು ನಿರ್ಮಿಸಿ ತಮ್ಮ ಆರ್ಥಿಕ ನೀತಿಗಳನ್ನು ಪ್ರಯೋಗಿಸುತ್ತವೆ. ವಿಶೇಷವೆಂದರೆ ಇದೆಲ್ಲವೂ ಪೂರ್ವಯೋಜಿತವಾಗಿ, ಖಚಿತವಾದ ಯೋಜನೆಗಳ ಮೂಲಕ ನಡೆಯುವ ಹಿಂಸೆ. ಇದಕ್ಕೆ ಬೆಂಬಲವಾಗಿರುವುದು ಬಂಡವಾಳಶಾಹಿಯ ಮಹಾಗುರುವಾಗಿದ್ದ ಮಿಲ್ಟನ್ ಫ್ರೀಡ್‌ಮನ್ ಎನ್ನುವ ನೋಬೆಲ್ ಪ್ರಶಸ್ತಿ ವಿಜೇತ ಅರ್ಥಶಾಸ್ತ್ರಜ್ಞನ ಸಿದ್ಧಾಂತಗಳು.

ಅವನ ಪ್ರಕಾರ ಸಮಾಜವಾದ, ಸಾಮಾಜಿಕ ಕಲ್ಯಾಣ ಯೋಜನೆಗಳು, ಬಡಜನರ ಉದ್ಧಾರ ಇವೇ ಮುಂತಾದ ಅಡಚಣೆಗಳಿಂದಾಗಿ ಬಂಡವಾಳಶಾಹಿ ಅರ್ಥವ್ಯವಸ್ಥೆಯ ನೈಜವಾದ ಬೆಳವಣಿಗೆಯಾಗಿಲ್ಲ. ಆದ್ದರಿಂದ ಸರಕಾರಗಳು 'ಕಠಿಣವಾದ ನಿರ್ಧಾರ'ಗಳ ಮೂಲಕ ಜನರಿಗೆ ಬಲವಾದ ಆಘಾತವನ್ನು ನೀಡಿ, ಅದರಿಂದ ಉಂಟಾಗುವ ಅನುಕೂಲಕರ ಪರಿಸ್ಥಿತಿಯಲ್ಲಿ ಸಂಪೂರ್ಣವಾದ ಬಂಡವಾಳಶಾಹಿ ನೀತಿಗಳನ್ನು ಜಾರಿಗೆ ತರಬೇಕು. ಅಮೇರಿಕಾ ಹಾಗೂ ಯೂರೋಪಿನ ಪ್ರಗತಿಪರ ಚಳುವಳಿಗಳು, ಚಿಂತನೆಗಳು ಮಾಡಲಾದ ಕಾಲದಲ್ಲಿ ದಕ್ಷಿಣ ಅಮೇರಿಕದ ಬ್ರಾಜಿಲ್, ಚಿಲಿ, ಉರುಗ್ವೆ ಮುಂತಾದ ರಾಷ್ಟ್ರಗಳಲ್ಲಿ ಅವನ ಸಿದ್ಧಾಂತಗಳನ್ನು ಪ್ರಯೋಗಿಸಲಾಯಿತು. ಈ ದೇಶಗಳಿಗೆ ಸ್ವತಃ ಮಿಲ್ಟನ್ ಫ್ರೀಡ್‌ಮನ್ ಭೇಟಿಯಿತ್ತು ಅಲ್ಲಿಯ ಸರಕಾರಗಳಿಗೆ ನೀತಿ–ಯೋಜನೆಗಳನ್ನು ನಿರೂಪಿಸಿಕೊಟ್ಟಿದ್ದು ಮಾತ್ರವಲ್ಲ, ಶಿಕಾಗೋ ವಿಶ್ವವಿದ್ಯಾನಿಲಯಗಳಲ್ಲಿ ಓದಿದ ಅವನ ಶಿಷ್ಯರೇ ಅಲ್ಲಿ ಪ್ರಭಾವಿ ಅಧಿಕಾರಿಗಳಾಗುತ್ತಾರೆ. ಸರ್ವಾಧಿಕಾರ, ದಮನ, ಸೆರೆಮನೆವಾಸ, ಕೊಲೆ ಇವುಗಳ ಮೂಲಕ ಕಾರ್ಪೋರೇಟ್ ಬಂಡವಾಳಶಾಹಿ ಕಾರ್ಯಕ್ರಮಗಳನ್ನು ಅಲ್ಲಿಯ ಮಿಲಿಟರಿ ಟೆಂಟ್‌ಗಳು ಅನುಷ್ಠಾನಕ್ಕೆ ತರುತ್ತವೆ. ಅದೆಷ್ಟು ಲಕ್ಷ ಜನ ಬರಹಗಾರರು, ಶಿಕ್ಷಕರು, ಕಾರ್ಮಿಕರು, ಈ ಕಾಲದಲ್ಲಿ 'ಕಣ್ಮರೆ'ಯಾದರು ಎನ್ನುವ ಖಚಿತವಾದ ಲೆಕ್ಕ ಇನ್ನೂ ಲಭ್ಯವಿಲ್ಲ. ಅವರುಗಳ ಮೇಲೆ ಅಲ್ಲಿಯ ಸೆರೆಮನೆಗಳಲ್ಲಿ ಮಾಡಿದ ಹಿಂಸೆಯ ಪ್ರಯೋಗಗಳ ವಿವರಗಳು ನಾಓಮಿ ಕ್ಲೇನ್‌ಳ ಕೃತಿಯಲ್ಲಿವೆ. ಜಾಗತೀಕರಣದ ಆರ್ಥಿಕ ನೀತಿಗಳು ಅವು ಒಡ್ಡುವ ಪ್ರಲೋಭನೆಯಿಂದ ಯಶಸ್ವಿಯಾಗುತ್ತವೆಯೆಂದು ನಂಬುವ ನಮಗೆ ಇದು ಆಗುತ್ತಿರುವುದು ಅತ್ಯಂತ ವ್ಯವಸ್ಥಿತವಾದ, ನಮ್ಮ ಕಲ್ಪನೆಯನ್ನು ಮೀರುವ ಹಿಂಸೆಯ ಮೂಲಕ ಎನ್ನುವುದನ್ನು ಈ ಕೃತಿ ತಿಳಿಸಿಕೊಡುತ್ತದೆ. ಹಲವಾರು ದಶಕಗಳಿಂದ ನೋಮ್ ಚಾಮ್‌ಸ್ಕಿ ಬರೆಯುತ್ತಲೇ ಬಂದಿರುವ ಸತ್ಯಗಳನ್ನು ಈ ಕೃತಿ ಬೆಚ್ಚಿಬೀಳಿಸುವ ರೀತಿಯಲ್ಲಿ ಪ್ರತಿಪಾದಿಸುತ್ತದೆ. ನನಗಂತೂ ಜಾಗತೀಕರಣದ ಬಗ್ಗೆ ನಾವೆಲ್ಲ ಮಾಡುತ್ತ ಬಂದಿರುವ ಚಿಂತನೆ ಈಗ ಬಾಲಿಶವಾಗಿ ಹಾಗೂ ಭೋಳೆಯಾಗಿ ಕಾಣತೊಡಗಿದೆ. ಈ ಜಾಗತೀಕರಣವನ್ನೇ, ಅದು ಪ್ರತಿಪಾದಿಸುವ ಅಭಿವೃದ್ಧಿಯನ್ನೇ ಅನುಷ್ಠಾನಕ್ಕೆ ತರುವುದಕ್ಕಾಗಿ ಜನಸಮುದಾಯಗಳ ಮೇಲೆ ಹಲವಾರು 'ಪ್ರಯೋಗ'ಗಳನ್ನು ಮಾಡಿದ ವ್ಯಕ್ತಿಯನ್ನು ಅಧಿಕಾರಕ್ಕೆ ತಂದಿರುವ ಹುಂಬರಾದ ನಾವು ಇತ್ತೀಚಿನ 'ಕಠಿಣ' ನಿರ್ಧಾರಗಳು ಮುಂದೆ ಬರಲಿರುವ 'shock treatment'ನ ಮುನ್ಸೂಚನೆಯೆಂದು ಅರಿಯಲಾಗದ ಸ್ಥಿತಿಯಲ್ಲಿದ್ದೇವೆ. ಆದ್ದರಿಂದಲೇ ನನಗೆ ಅನ್ನಿಸಿದ್ದೆಂದರೆ ನಾವು ನಮ್ಮ ಸದ್ಯದ ಚರಿತ್ರೆಯ ಸತ್ಯಗಳನ್ನು ಎದುರಿಸಲಾರೆವು ಎಂದು.

ಈ ಕೃತಿಯಲ್ಲಿ ನಾಓಮಿ ಹೇಳುವ ಇನ್ನೊಂದು ಮಾತು ಮುಖ್ಯವಾಗಿದೆ. ನವ ಬಂಡವಾಳಶಾಹಿ, ಕಾರ್ಪೋರೇಟ್ ಆರ್ಥಿಕ ನೀತಿಗಳನ್ನು ಅನುಷ್ಠಾನಕ್ಕೆ ತರಲು ಬಳಸಲಾದ ವ್ಯಾಪಕವಾದ ಹಿಂಸೆಯನ್ನು ಪ್ರತಿಭಟಿಸಿದೆ. ಅನೇಕ ಸಂಸ್ಥೆಗಳು, ಮಾನವ ಹಕ್ಕು ಹೋರಾಟಗಾರರು ಈ ಹಿಂಸೆಗೆ ಕೆಲವು ಸರ್ವಾಧಿಕಾರಿಗಳು, ಅವರ ವ್ಯಕ್ತಿತ್ವ ಹಾಗೂ ಕೆಲವು ಅಧಿಕಾರಿಗಳು ಕಾರಣವೆಂದು ಹೇಳಿದವೆ ಹೊರತು ಎಲ್ಲದಕ್ಕೂ ಮೂಲಕಾರಣವಾದ ನವ ಉದಾರೀಕರಣದ ಆರ್ಥಿಕ ನೀತಿಗಳನ್ನು ವಿಮರ್ಶಿಸಲಿಲ್ಲ. ಅಂದರೆ ನಡೆದ ಹಿಂಸೆಯನ್ನು ಕೈಮೀರಿ ಹೋದ excesses ಎಂದು ವಿವರಿಸಿದವೇ ಹೊರತು ಈ ಆರ್ಥಿಕ ನೀತಿಗಳು ಹಿಂಸೆ ಇಲ್ಲದೇ ಅನುಷ್ಠಾನಕ್ಕೆ ಬರುವುದು ಅಸಾಧ್ಯವೆನ್ನುವುದನ್ನು ಅರ್ಥಮಾಡಿಕೊಳ್ಳಲಿಲ್ಲ.

ಮೊನ್ನೆ ಪತ್ರಿಕೆಯಲ್ಲಿ ಪ್ರಕಟವಾದ WHO ಸಂಸ್ಥೆಯ ಅಂಕಿಸಂಖ್ಯೆಗಳ ಪ್ರಕಾರ ಜಗತ್ತಿನ ಅತಿ ಹೆಚ್ಚು ಕಡುಬಡವರು ಭಾರತದಲ್ಲಿ ವಾಸಮಾಡುತ್ತಿದ್ದಾರೆ. ಖಂಡಿತಾ ಒಳ್ಳೆಯ ದಿನಗಳು ಬರುತ್ತಿವೆ!

---

## ಸೋನ್‌ಭದ್ರಾ : 'ಅಭಿವೃದ್ಧಿ' ಎಂಬ ರೌರವ ನರಕ...

–ಪ್ರಿಯದರ್ಶಿನಿ ಸೇನ್

**ಜನರಿಗೆ ನಾಗರೀಕ ಸೌಲಭ್ಯಗಳನ್ನು ಕಲ್ಪಿಸಬಲ್ಲ ಅಭಿವೃದ್ಧಿಯನ್ನು ಯಾರು ವಿರೋಧಿಸಿಯಾರು? ಆದರೆ ರಾಷ್ಟ್ರ ಇಂದು ಅನುಸರಿಸುತ್ತಿರುವ ಅಭಿವೃದ್ಧಿ ನೀತಿ ಎಷ್ಟು ಜನ ವಿರೋಧಿಯಾಗಿದೆ ಎನ್ನುವುದಕ್ಕೆ ಸೋನ್‌ಭದ್ರಾ ಒಂದು ದುರಂತಮಯವಾದ ಉದಾಹರಣೆಯಾಗಿದೆ. ಇಂದು ಇಂತಹ ಹಲವು ನರಕಗಳು ಭಾರತದಾದ್ಯಂತ ಸೃಷ್ಟಿಯಾಗುತ್ತಿದ್ದರೆ ಅದಕ್ಕೆ ಕಾರಣ ಈ ಅಭಿವೃದ್ಧಿ ಮೂಲತಃ ಕೆಲವರ ಮಿತಿಯಿಲ್ಲದ ಸುಖ ಮತ್ತು ಲಾಭದಾಸೆಗಳನ್ನು ಪೂರೈಸುವ ಮುಕ್ತ ಬಂಡವಾಳಶಾಹಿ ತರ್ಕ ಇದರಲ್ಲಿ ಅಂತರ್ಗತವಾಗಿದ್ದು, ಅದು ಯಾರ ನಿಯಂತ್ರಣಕ್ಕೂ ಸಿಗದಂತೆ ಸ್ವಯಂಚಾಲಿತವಾಗಿರುವುದು**–ಸಂಪಾದಕ

**ಸೋ**ನ್‌ಭದ್ರಾ ವಾರಣಾಸಿಯಿಂದ ೯೬ ಕಿ.ಮೀ. ದಕ್ಷಿಣಕ್ಕಿರುವ ಉತ್ತರ ಪ್ರದೇಶದ ಒಂದು ಜಿಲ್ಲೆ. ವಿಸ್ತೀರ್ಣದಲ್ಲಿ ಇದು ಈ ರಾಜ್ಯದ ಎರಡನೆಯ ಅತಿದೊಡ್ಡ ಜಿಲ್ಲೆ. ಬಾಗೇಸತಿ ಎಂಬುದು ಸೋನ್‌ಭದ್ರಾ ಜಿಲ್ಲೆಯ ಒಂದು ಗ್ರಾಮ. ಬಾಗೇಸತಿಯ ಹಾಗೆ ಖಿಫ್‌ಮಾ, ನಯಿಬಸ್ತಿ, ಗೋವರ್ಧಾ, ಕಿರ್ವಾನಿ, ಖೈರಾಹಿ, ಮನ್ಯಾಸಾ, ಬೆಲವದ್, ಪಿಪ್ರಿ, ಸೋನಾವಾನಿ, ಅನ್ಯಾರಾ ದಿಬುಲ್ಗಂಜ್ ಮುಂತಾದವು ಬಾಗೇಸತಿಯ ಸುತ್ತಮುತ್ತಲ ಗ್ರಾಮಗಳು.

ಬಾಗೇಸತಿಯ ಶಾಲೆಯೊಂದು ಮುಗಿದು ಮಕ್ಕಳು ಹೊರನಡೆಯುವುದನ್ನು ಕಂಡ ಯಾರಿಗಾದರೂ ಹೃದಯವೇ ಬಾಯಿಗೆ ಬಂದಂತಹ ಅನುಭವವಾದೀತು. ಹಾರಿಕುಣಿದು ಕುಪ್ಪಳಿಸಬೇಕಾದ ವಯಸ್ಸಿನ ಮಕ್ಕಳಲ್ಲಿ ಹಲವರ ದೇಹ ವಕ್ರ, ಬಿಲ್ಲಿನಂತೆ ಬಾಗಿದ ಕಾಲುಗಳು, ಅವರಲ್ಲಿ ಹಲವರ ಹಲ್ಲುಗಳು ಕೊಳೆತುಹೋಗಿವೆ, ಕೆಲವರು ಪಾರ್ಶ್ವವಾಯು ಪೀಡಿತರು, ಇನ್ನು ಕೆಲವರು ಮಾನಸಿಕ ಅಸ್ವಸ್ಥರು. ಈ ಮಕ್ಕಳ ತಾಯಂದಿರ ಸ್ಥಿತಿಯಾದರೂ ಇದಕ್ಕಿಂತ ಭಿನ್ನವಾಗಿಲ್ಲ. ಅವರ ದೇಹಗಳು ಬಿಲ್ಲಿನಂತೆ ಬಾಗಿವೆ. ತೂರಾಡುತ್ತಾ ಕಾಲುಗಳನ್ನು ಎಳೆದುಹಾಕುತ್ತಾ ಕಷ್ಟದಿಂದ ಅವರು ಹೆಜ್ಜೆ ಹಾಕುತ್ತಾರೆ. ಒಟ್ಟಾರೆ ಇದೊಂದು ನರಕದ ತುಣುಕು. ಮೇಲೆ ಹೆಸರಿಸಿದ ಹಲವಾರು ಹಳ್ಳಿಗಳ ಸ್ಥಿತಿಯಾದರೂ ಬಾಗೇಸತಿಗಿಂತ ಬೇರೆಯಾಗಿಲ್ಲ. ಇದರ ಹಿಂದಿನ ಮರ್ಮವೇನು ಎಂಬುದನ್ನು ತಿಳಿಯಲು ನಡೆಸಿದ ಪ್ರಯತ್ನದ ಫಲವೇ ಈ ಭೂಮಿಯ ಮೇಲಿನ ನರಕವೊಂದರ ಅನಾವರಣ.



ಈ ನರಕವನ್ನೇ ಸ್ವರ್ಗವೆನ್ನುವವರಿಗೇನೂ ಕಡಿಮೆಯಿಲ್ಲ. ಆಯ್ಕೆ ನಿಮ್ಮದು.

ಸೋನ್‌ಭದ್ರಾದ ಕಥೆ ೧೯೬೦ರಿಂದ ಪ್ರಾರಂಭವಾಗುತ್ತದೆ. ಆ ವರ್ಷ ಇಲ್ಲಿನ ರಿಹಂದ್ ಅಣೆಕಟ್ಟು ನಿರ್ಮಾಣವಾಯಿತು. ನೀರಿನ ಸಮೃದ್ಧಿ, ನೆರೆಯಲ್ಲೇ ಒಂದು ಬಿಲಿಯನ್ ಟನ್ ಕಲ್ಲಿದ್ದಲಿನ ನಿಕ್ಷೇಪ, ಸುಣ್ಣದ ಕಲ್ಲಿನ ಬೆಟ್ಟಗಳು.

ಸೋನ್‌ಭದ್ರಾದ ಉಷ್ಣ ವಿದ್ಯುತ್ ಸ್ಥಾವರಗಳು ಉತ್ಪಾದಿಸುವ ವಿದ್ಯುತ್‌ನ ಪ್ರಮಾಣ ೧೧೦೦೦ ಮೆ.ವ್ಯಾ. ಇಡೀ ದೇಶದಲ್ಲಿ ಉತ್ಪಾದಿಸಲ್ಪಡುವ ಉಷ್ಣ ವಿದ್ಯುತ್‌ನ ೧೦% ಇಲ್ಲಿಂದಲೇ ಬರುತ್ತದೆ. ನೀರು, ವಿದ್ಯುತ್, ಕಲ್ಲಿದ್ದಲು, ಸುಣ್ಣದಕಲ್ಲು ಲಭ್ಯವಿದ್ದ ಮೇಲೆ ಕೈಗಾರಿಕೆಗಳನ್ನು ತಡೆಯುವವರು ಯಾರು? ಸರಿ, HINDALCO ಎಂಬ ಅಲ್ಯೂಮಿನಿಯಂ ಕಾರ್ಖಾನೆ ಬಂತು. ಎರಡು ವರ್ಷಗಳ ನಂತರ ಕನೋರಿಯಾ ಕೆಮಿಕಲ್ಸ್ ಬಂತು. ಇದು HINDALCO ಕಾರ್ಖಾನೆಗೆ ಕಾಸ್ಟಿಕ್ ಸೋಡಾ ಪೂರೈಸುವ ಕಂಪೆನಿ. ೧೯೬೭ರಲ್ಲಿ ಇಲ್ಲಿಂದ ಉತ್ತರಕ್ಕೆ ಓಬ್ರಾ ಬಳಿಯ ಡಲ್ಲಾದಲ್ಲಿ ಸಿಮೆಂಟ್ ಘಟಕ ಪ್ರಾರಂಭವಾಯಿತು. ಇದು ಪ್ರಾರಂಭದ ದಿನಗಳಲ್ಲಿ ಆದ ಅಭಿವೃದ್ಧಿ. ನಂತರ NTPC ಬಂತು. ಖಾಸಗೀ ವಲಯದಲ್ಲಿ LANCO, JP ಸಮೂಹದ ಕಾರ್ಖಾನೆಗಳು, ಆದಿತ್ಯ ಬಿರ್ಲಾ ಸಮೂಹ ಹಾಗೆಯೇ ಹಲವಾರು ಪೂರಕ ಘಟಕಗಳೂ ಮೇಲೆದ್ದವು. ಅಸಂಖ್ಯಾತ ಸುಣ್ಣದ ಕಲ್ಲು ಪುಡಿಮಾಡುವ ಘಟಕಗಳೂ, ಕ್ವಾರಿಗಳೂ ಪ್ರಾರಂಭವಾದವು.

ಸೋನ್‌ಭದ್ರಾ ಜಿಲ್ಲೆಯ ೭೦೦೦ ಚ.ಕಿ.ಮೀ. ವ್ಯಾಪ್ತಿಯಲ್ಲಿ ಇಂದು ಹತ್ತು ಪ್ರಮುಖ ವಿದ್ಯುತ್ ಸ್ಥಾವರಗಳು ಕಾರ್ಯಾಚರಿಸುತ್ತಿವೆ. ಇನ್ನೂ ನಾಲ್ಕು ವಿದ್ಯುತ್ ಸ್ಥಾವರಗಳೂ, ಮೂರು ಗಣಿಗಳೂ ಯೋಜನೆಯ ಹಂತದಲ್ಲಿವೆ. ಹೀಗಾಗಿ ಸೋನ್‌ಭದ್ರಾ ಜಿಲ್ಲೆ ದಕ್ಷಿಣ ಏಷ್ಯಾದ ಅತಿದೊಡ್ಡ ಕೈಗಾರಿಕಾ ವಲಯಗಳಲ್ಲಿ ಒಂದಾಗಿದೆ. ಅದೊಂದು ಕೈಗಾರಿಕಾ ದಟ್ಟಣೆಯ ಪ್ರಾಂತ್ಯ. ಇಲ್ಲಿ ಪ್ರತಿನಿತ್ಯ ಎರಡೂವರೆ ಲಕ್ಷ ಟನ್ ಕಲ್ಲಿದ್ದಲನ್ನು ಉರಿಸಲಾಗುತ್ತದೆ. ಇನ್ನೂರು ಮೀಟರ್ ಎತ್ತರದವರೆಗಿನ ಹೊಗೆ ಕೊಳವೆಗಳು ಗಂಧಕ, ನೈಟ್ರೋಜನ್ ಆಕ್ಸೈಡ್‌ಗಳಂತಹ ವಿಷವನ್ನು ಸತತವಾಗಿ ವಾತಾವರಣಕ್ಕೆ ಉಗುಳುತ್ತವೆ. ಫ್ಲೋರೈಡ್, ಪಾದರಸದಂತಹ ವಿಷಗಳೂ ಗಾಳಿಗೆ ಸೇರುತ್ತವೆ. ಹಾರುಬೂದಿಯು ತ್ಯಾಜ್ಯವಾಗಿ ಕೊಳಗಳಲ್ಲಿ ಸುರಿಯಲ್ಪಡುತ್ತವೆ. ಒಟ್ಟಾರೆ ಇದೊಂದು ಅತ್ಯಂತ ಹೆಚ್ಚು ಕೈಗಾರಿಕೀಕೃತ ಜಿಲ್ಲೆ. ಅಂತಯೇ ಇದು ಅತಿ ಹೆಚ್ಚು ಮಲಿನಗೊಂಡ ಜಿಲ್ಲೆಯೂ ಹೌದು.

ಇಲ್ಲಿ ಉತ್ಪಾದಿಸಲ್ಪಡುವ ವಿದ್ಯುತ್ ಯಾವುದೋ ನಗರವನ್ನು ಬೆಳಗುತ್ತದೆ. ಯಾವುದೋ ಕಾರ್ಖಾನೆಯನ್ನು ನಡೆಸುತ್ತದೆ. ಯಾರದೋ ಜೇಬನ್ನು ತುಂಬಿಸುತ್ತದೆ. ಆದರೆ ಇಲ್ಲಿನ ಭೂಮಿಯನ್ನು ನಂಬಿ ಬದುಕುವ ಸ್ಥಳೀಯರ ಪಾಲಿಗೆ ಈ ಸ್ಥಾವರಗಳು ನರಕದ ಪ್ರತೀಕಗಳು. ಸ್ಥಳೀಯರ ಭೂಮಿಗೆ, ಕುಡಿಯುವ ನೀರಿಗೆ, ಉಸಿರಾಡುವ ಗಾಳಿಗೆ ಇವು ವಿಷವನ್ನು ತುಂಬುತ್ತಿವೆ. ಇವರ ಬದುಕು ನರಕವಾಗುತ್ತಿದೆ. ವಿಷಮಯವಾದ ವಾತಾವರಣದ ಪೀಡೆಯಿಂದ ಯಾರಿಗೂ ಮುಕ್ತಿಯಿಲ್ಲ. ಹೆಂಗಸರು, ಮಕ್ಕಳು, ವಯಸ್ಕರು, ಹಿರಿಯರು, ಇನ್ನೂ ಗರ್ಭದಲ್ಲಿರುವ ಶಿಶುಗಳು ಎಲ್ಲರೂ ಪೀಡಿತರೇ. ಹುಟ್ಟುವ ಮೊದಲೇ ಜೀವ ಕಳೆದುಕೊಳ್ಳುವ ಭ್ರೂಣಗಳು, ಮುಟ್ಟಿನ ಸಮಸ್ಯೆ, ನಿಶ್ಶಕ್ತಿ, ಕರುಳಿಗೆ ಸಂಬಂಧಿಸಿದ ಸಮಸ್ಯೆಗಳು, ತಲೆಸುತ್ತು, ದೃಷ್ಟಿದೋಷಗಳು, ಕಿವಿಯ ತೊಂದರೆ, ನರಸಂಬಂಧೀ ರೋಗಗಳು ಹೀಗೆ ಪಟ್ಟಿ ಮಾಡಲಾರದಷ್ಟು ಆರೋಗ್ಯ ಸಮಸ್ಯೆಗಳು ಇಲ್ಲಿನ ಜನರನ್ನು ಕಾಡುತ್ತಿವೆ. ಆದರೆ ಅಭಿವೃದ್ಧಿಯ ಭ್ರಮೆಯ ಸುಳಿಯಲ್ಲಿ ಸಿಲುಕಿರುವ ಸಮಾಜಕ್ಕೆ ಈ ಜನರ ಸಮಸ್ಯೆ ಅರ್ಥವಾಗುವುದಿಲ್ಲ. ಸಮುದಾಯದೊಳಗಿನ ಕಟ್ಟಕಡೆಯ ಮನುಷ್ಯನ ನೋವನ್ನು ಕೇಳಲಾರದಷ್ಟು, ನೋಡಲಾರದಷ್ಟು, ಅರಿಯಲಾರದಷ್ಟು ವಿಕೃತವಾಗಿರುವ ಸ್ವಹಿತ ಕೇಂದ್ರಿತ ಸಮಾಜವೊಂದು ನಿರ್ಮಾಣವಾಗುತ್ತಿದೆ.



ದೆಹಲಿಯ ಸೆಂಟರ್ ಫಾರ್ ಸೈನ್ಸ್ ಅಂಡ್ ಎನ್ವಿರಾನ್ಮೆಂಟ್, ಲಕ್ನೋ ಮೂಲದ ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿ, ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಟಾಕ್ಸಿಕಾಲಜಿ ಹೀಗೆ ಹಲವಾರು ಸಂಸ್ಥೆಗಳು ಇಲ್ಲಿನ ಮಾಲಿನ್ಯವನ್ನು ಕುರಿತು ಅಧ್ಯಯನ, ಸಂಶೋಧನೆ ನಡೆಸಿವೆ. ಇಲ್ಲಿನ ನೀರು, ಗಾಳಿ, ಮಣ್ಣು, ಜನರ ಉಗುರು, ಕೂದಲು ಮುಂತಾಗಿ ವಿವಿಧೆಡೆಗಳಲ್ಲಿ ಪತ್ತೆಯಾಗಿರುವ ಪಾದರಸ, ಫ್ಲೋರೈಡ್, ಗಂಧಕ, ಸೀಸ, ಆರ್ಸೆನಿಕ್, ಕ್ರೋಮಿಯಂ ನಂತಹ ಮಾರಕ ಧಾತುಗಳು ಅಪಾಯಕಾರಿ ಮಟ್ಟದಲ್ಲಿ ಕಂಡುಬಂದಿವೆ.

ಇಷ್ಟಾದರೂ ಈ ಪರಿಸರ ಸಮಸ್ಯೆ, ಸ್ಥಳೀಯರ ಗೋಳು ಯಾರನ್ನೂ ತಲುಪುತ್ತಿಲ್ಲ. ಯಾವ ಪರಿಹಾರವೂ ಕಂಡುಬರುತ್ತಿಲ್ಲ. ಸಮಸ್ಯೆಯನ್ನು ಪರಿಹರಿಸುವುದು ಒತ್ತಟ್ಟಿಗಿರಲಿ, ಸರ್ಕಾರಿ ಸಂಸ್ಥೆಗಳು ನಡೆಸಿರುವ ಅಧ್ಯಯನದ ಫಲಿತಾಂಶವನ್ನು ಪ್ರಕಟಿಸಲೂ ಸಹ ಸಿದ್ಧವಿಲ್ಲ.

NTPC ಯ ಉನ್ನತ ಅಧಿಕಾರಿಯೊಬ್ಬರು ನಾವು ದೇಶಕ್ಕೆ ೨೦೦೦ಮೆ.ವ್ಯಾ ವಿದ್ಯುತ್ತನ್ನು ನೀಡುತ್ತಿರುವಾಗ ಸಣ್ಣ ಪುಟ್ಟ ತೊಂದರೆಗಳು ಅನಿವಾರ್ಯ. ಅಷ್ಟಕ್ಕೂ ನಮ್ಮ ಘಟಕದಿಂದ ಭಾರೀ ಮಾಲಿನ್ಯವೇನೂ ಉಂಟಾಗುತ್ತಿಲ್ಲ ಎನ್ನುತ್ತಾರೆ!. ಜಲಮಂಡಳಿ, ಮಾಲಿನ್ಯ ನಿಯಂತ್ರಣ ಮಂಡಳಿಗಳು ನೀರು, ಮಣ್ಣು, ಗಾಳಿಯಲ್ಲಿ ಪಾದರಸದ ಅಂಶವೇ ಕಂಡುಬಂದಿಲ್ಲ. ಎಲ್ಲೋ ಕೆಲವು ಕಡೆ ಕಂಡುಬಂದರೂ ಅದು ನಿಗದಿತ ಮಿತಿಯೊಳಗೇ ಇದೆ ಎನ್ನುತ್ತವೆ. ಬೃಹತ್ ಕಾರ್ಖಾನೆಗಳ ಕೃಪೆಯಲ್ಲೇ ಬದುಕಬೇಕಾದ ರಾಜಕಾರಣಿಗಳು ಇವುಗಳ ವಿರುದ್ಧ ಸೊಲ್ಲೆತ್ತರಾರರು. ಜಿಲ್ಲಾ ನ್ಯಾಯಾಧೀಶರ ಮಾತನ್ನೂ ಈ ಕೈಗಾರಿಕೆಗಳು ಕೇಳುವುದಿಲ್ಲ.

ಪ್ರತಿನಿತ್ಯ ೨.೫ ಲಕ್ಷ ಟನ್ ಕಲ್ಲಿದ್ದಲು ಉರಿಸಿ ೧೧೦೦೦ ಮೆ.ವ್ಯಾ. ವಿದ್ಯುತ್ ಉತ್ಪಾದಿಸುವ ಸೋನ್‌ಭದ್ರಾ ಜಿಲ್ಲೆಗೇ ವಿದ್ಯುತ್ ಇಲ್ಲ. ದಿನಕ್ಕೆ ೬ ಗಂಟೆ ಇದ್ದರೆ ಅದೇ ಹೆಚ್ಚು ಎನ್ನುತ್ತಾರೆ ಸ್ಥಳೀಯರು. ೧೯೫೬ರ ಜಪಾನ್‌ನ ಕುಖ್ಯಾತ ಮಿನಾಮಾಟ ದುರಂತದ ನಂತರ ಇದೇ ರೀತಿಯ ದುರಂತಗಳು ಇರಾಕ್‌ನಲ್ಲಿ, ನಮ್ಮ ಕೊಡೈಕೆನಾಲ್‌ನಲ್ಲಿ ವರದಿಯಾಗಿವೆ. ಅದಕ್ಕೆ ಹೋಲಿಸಿದರೆ ಸೋನ್‌ಭದ್ರಾದ ಸ್ಥಿತಿ ಬಹಳ ಗಂಭೀರವಾದದ್ದು. ಕೆಲವರ ದುರಾಸೆ ಹಲವರ ಪಾಲಿನ ಶಾಪ ಎಂಬ ಮಾತಿನಂತೆ ನಾವು ಹೊರಟಿರುವ 'ಅಭಿವೃದ್ಧಿ'ಯ ಹಾದಿಯಲ್ಲಿ ಇನ್ನೂ ಎಷ್ಟೋ ಸೋನ್‌ಭದ್ರಾಗಳು ಸೃಷ್ಟಿಯಾಗಲಿವೆ. ಸೋನ್‌ಭದ್ರಾದ ಜನ ತಮ್ಮ ದುರ್ವಿಧಿಯನ್ನು ಶಪಿಸುತ್ತಾ ಸಾವಿನಲ್ಲೇ ಬಿಡುಗಡೆ ಕಾಣುವ ನಂಬಿಕೆಯೊಂದಿಗೆ ನರಳುತ್ತಲೇ ಬದುಕಿದ್ದಾರೆ.

(ಸಂಗ್ರಹಾನುವಾದ : **ಎಂ. ರಾಜು**
ಕೃಪೆ: ***ಔಟ್‌ಲುಕ್*** , ನವೆಂ. ೧೦, ೨೦೧೪)

---

೭ನೇ ಪುಟದಿಂದ)

ಈಗ ಮಾನವರಲ್ಲಿ ಪ್ರಚಲಿತವಾಗಿರುವ ಅನೇಕ ಆರ್ಥಿಕ ಮತ್ತು ಸಾಮಾಜಿಕ ವ್ಯವಸ್ಥೆಗಳಲ್ಲಿ ವಸ್ತುಗಳ ಸಂಗ್ರಹಣೆಗೆ ಮತ್ತು ಐಶ್ವರ್ಯ ಸಂಪಾದನೆಗೆ ಅತಿಯಾದ ಪ್ರಾಮುಖ್ಯತೆಯನ್ನು ಕೊಡುತ್ತಿದ್ದೇವೆ. ಹಾಗೆ ಮಾಡುವುದರಿಂದ ಮಾನವರ ಅನಾಥಪ್ರಜ್ಞೆಯನ್ನು ಹೆಚ್ಚಿಸುತ್ತಿದ್ದೇವೆ. ಇಂತಹ ವಾತಾವರಣದಲ್ಲಿ ಅತಿಯಾದ ಕ್ರೌರ್ಯ, ಮಾನವ ಮತ್ತು ಪ್ರಕೃತಿಯ ಮೇಲೆ ದ್ವೇಷ, ಹಿಂಸಾತ್ಮಕ ಮನೋಭಾವ ಇತ್ಯಾದಿ ನಕಾರಾತ್ಮಕ ಗುಣಗಳು ಹೆಚ್ಚು ಹೆಚ್ಚು ಜನಗಳಲ್ಲಿ ಬೆಳೆಯುತ್ತಿವೆ. ಅಂತಹವರಿಗೆ ತಮ್ಮ ಹೆಂಡತಿ–ಗಂಡ–ಮಕ್ಕಳು, ಇತರ ಮಾನವರು, ಇತರ ಜೀವಿಗಳು, ಮತ್ತು ಪ್ರಕೃತಿಯೊಡನೆ ತೃಪ್ತಿಕರವಾದ ಮತ್ತು ಮಧುರವಾದ ಸಂಬಂಧವನ್ನು ಬೆಳೆಸಿಕೊಳ್ಳುವುದು ಕಷ್ಟವಾಗುತ್ತದೆ.

ಕೈಯಲ್ಲಿ ಮಾಡುವ ಕೆಲಸಗಳಿಗೆ ಪ್ರಾಮುಖ್ಯತೆ, ಆಸಕ್ತಿ ಮತ್ತು ಅವಕಾಶಗಳು ಕಡಿಮೆಯಾಗಿ, ದೊಡ್ಡ ದೊಡ್ಡ ಯಂತ್ರಗಳ ಪಾತ್ರ ಹೆಚ್ಚಿ, ಕೈಕೆಲಸಗಳಿಂದ ದೊರಕುತ್ತಿದ್ದ ಆಳವಾದ ತೃಪ್ತಿಯು ಕಡಿಮೆಯಾಗುತ್ತಿದೆ. ಮಾತ್ರವಲ್ಲ ಇಂತಹ ಸೃಜನಶೀಲ ಕಾರ್ಯಗಳನ್ನು ಕೀಳಾಗಿ ಕಾಣುವ ಪ್ರವೃತ್ತಿ ಕೂಡ ಬೆಳೆಯುತ್ತಿದೆ. ಆರೋಗ್ಯಕರವಾದ, ಆಳವಾದ ತೃಪ್ತಿಯನ್ನು ಕೊಡುವ, ಅನಾಥ ಪ್ರಜ್ಞೆಯನ್ನು ಬಹುಕಾಲ ಕಡಿಮೆ ಮಾಡುವ ಸೃಜನಾತ್ಮಕ ಕೆಲಸಗಳನ್ನು ಮಾಡದೇ ಇರುವ ಅನೇಕ ಮಾನವರಲ್ಲಿ ಸಹಜವಾಗಿ ಹಿಂಸಾತ್ಮಕ ಪ್ರವೃತ್ತಿಯು ಬೆಳೆಯುತ್ತಿದೆ. ತಮ್ಮ ವೈಯಕ್ತಿಕ, ವರ್ಗದ, ಅಥವಾ ದೇಶದ ಹಿತಕ್ಕಾಗಿ–ಲಾಭಕ್ಕಾಗಿ ಇತರರಿಗೆ ನೋವುಂಟು ಮಾಡುವುದು ಅಥವಾ ಜನಸಮೂಹಗಳನ್ನೇ ನಾಶಮಾಡುವುದು, ಇತರರ ಮೇಲೆ ಯುದ್ಧ ಮಾಡುವುದು, ಕೊಲೆ, ರೇಪುಗಳು, ಕೋಮು ಗಲಭೆಗಳು, ಹೊಡೆದಾಟಗಳಲ್ಲಿ ತೊಡಗಿಸಿಕೊಳ್ಳುವುದು, ಅಥವಾ ತಮಗೇ ನೋವುಂಟು ಮಾಡಿಕೊಳ್ಳುವ ಪ್ರವೃತ್ತಿ (ಆತ್ಮಹತ್ಯೆ) ಇತ್ಯಾದಿ ನಕಾರಾತ್ಮಕ ಗುಣಗಳು ಮಾನವರಲ್ಲಿ ಹೆಚ್ಚು ಹೆಚ್ಚಾಗಿ ಬೆಳೆಯುತ್ತಿವೆ.

ಎರಿಕ್ ಫ್ರಾಮ್‌ರವರ ಪ್ರಕಾರ, ಸಮಾಜದಲ್ಲಿ ಸಕಾರಾತ್ಮಕ ಸೃಜನಶೀಲ ಕೆಲಸಗಳಿಗೆ ಹೆಚ್ಚು ಹೆಚ್ಚು ಉತ್ತೇಜನ ಮತ್ತು ಅವಕಾಶಗಳನ್ನು ಕೊಟ್ಟರೆ, ನಮಗೂ ಮತ್ತು ಇತರ ಮಾನವರಿಗೂ ಇರುವ ಅನೇಕ ಸಾಮ್ಯತೆಗಳನ್ನು ಗುರುತಿಸಿ ಆತ್ಮೀಯ ಮಾನವ ಸಂಬಂಧಗಳನ್ನು ಬೆಳೆಸಿಕೊಳ್ಳುವುದನ್ನು ಕಲಿಸಿಕೊಟ್ಟರೆ, ಮಾನವನಿಗೂ ಪ್ರಕೃತಿಗೂ ಇರುವ ನಿಕಟವಾದ ಸಂಬಂಧವನ್ನು ಗುರುತಿಸಿ, ಆನಂದಿಸಿ ಅನುಭವಿಸುವುದನ್ನು ಕಲಿಸಿದರೆ, ಅಂತಹ ಸಮಾಜದ ಮಾನವರಲ್ಲಿ ಅನಾಥಪ್ರಜ್ಞೆ ಕಡಿಮೆಯಾಗಿ ಹಿಂಸಾತ್ಮಕ ಪ್ರವೃತ್ತಿಗಳು ಅಪರೂಪವಾಗುತ್ತವೆ.

೮ನೇ ಪುಟದಿಂದ)

ಅದ್ಸರಿ, ಅಷ್ಟು ತಣ್ಣಗೆ ನಟಿಸೋಕೆ ನನಗೆ ಸಾಧ್ಯ ಆಗ್ಬಹುದಾ?... ಅಂತೆಲ್ಲ ಯೋಚಿಸುವಷ್ಟರಲ್ಲಿ ಅರಸೀಕೆರೇಲಿ ಬಸ್ ನಿಂತಿತ್ತು.

ಬಸ್ ಇಳಿದು ಅಷ್ಟು ದೂರದವರೆಗೂ ಯಾರೂ ಹಿಂಬಾಲಿಸ್ತಾಯಿಲ್ಲ ಅನಿಸಿದಮೇಲಷ್ಟೆ ಆ ಕಂಡಕ್ಟರ್ ಬಗ್ಗೆ ಸ್ವಲ್ಪ ನಂಬಿಕೆ ಬಂದಿತ್ತು! ಆದ್ರೆ, ಹಿಂದಿನ ದಿನ ಟೀವೀಲಿ ಕಂಡಿದ್ದ ಆ ಕೇಡಿ ರೇಪಿಸ್ಟ್ ಈ ರೈಲ್ವೆ ಸ್ಟೇಷನ್ನಲ್ಲೆಲ್ಲಾದ್ರು ಹೊಂಚುಹಾಕೊಂಡಿರಬಹುದಾ? ಅನ್ನೋ ಆತಂಕ ಮತ್ತೆ ಬಿಗಿಯಾಗಿ ಉಸಿರುಗಟ್ಟಿಸುವಂತೆ ಆವರಿಸಿಕೊಳ್ಳತೊಡಗಿತ್ತು! ಅಂತೂ ಆ ಟ್ರೇಯ್ನು ನನ್ನನ್ನೂ, ನನ್ನ ಪ್ರೀತಿಯ ಬ್ಯಾಗನ್ನೂ, ನನ್ನ ದುಗುಡ, ಆತಂಕಗಳನ್ನೂ ಇಡಿಯಾಗಿ ದಾವಣಗೆರೆವರೆಗೂ ತಲುಪಿಸಿತ್ತು...

ಪ್ರಯಾಣ ಅನ್ನೋದು ಎಷ್ಟು ಚೇತೋಹಾರಿ! ಹೊಸ ಜನ, ಹೊಸ ಜಾಗ, ಕಾಣೋದು–ತಿಳಿಯೋದು ಎಷ್ಟ್ ಚೆಂದ! ಅಂತೆಲ್ಲ ಹಾರಾಡುತ್ತಿದ್ದೋಳ ರೆಕ್ಕೆಗಳು ಎಲ್ಲಿ ಕಳೆದುಹೋದವು?! ಆ ಉತ್ಸಾಹದ ಬದಲು ಈ ಆತಂಕ ಜಾಗ ಪಡೆದಿದ್ದು ಹೇಗೆ? ದಾರಿಹೋಕರೆಲ್ಲ ಕಳ್ಳರ ಹಾಗೆ, ರೇಪಿಸ್ಟ್‌ಗಳ ಹಾಗೆ ಕಾಣೋಕೆ ಶುರುವಾಗಿದ್ಯಾಕೆ? ಆಟೋ ಹತ್ತೋಕೆ ಮುಂಚೆ, ಎಟಿಎಮ್ ಹೊಕ್ಕೋಕೆ ಮುಂಚೆ ಇಪ್ಪತ್ತು ಸರ್ತಿ ಯೋಚಿಸೋ ಹಾಗೆ ಆಗಿರೋದ್ಯಾಕೆ? ರೆಕ್ಕೆಗಳನ್ನು ಕಳಚಿಟ್ಟು, ಮರೆತುಬಿಟ್ಟಂತೆ ಹೀಗೆಲ್ಲಾ ನಾನು ಬದಲಾದದ್ದಾದರೂ ಯಾಕೆ?..

ಸ್ವಾತಂತ್ರ್ಯ, ಐಡೆಂಟಿಟಿ, ಸೇಫ್ಟಿ – ಇವಕ್ಕೆಲ್ಲ ಇರಬಹುದಾದ ವ್ಯಾಖ್ಯಾನಗಳನ್ನು ಬಹುಶಃ ಇಂಥಾ ಆತಂಕ, ತಲ್ಲಣ, ದಿಗಿಲುಗಳ ಒಳಹರಿವಿನಲ್ಲೇ ಕಟ್ಟಿಕೊಳ್ಳಬೇಕಾಗಿದೆ! 'ನಾನು' ಅಂದರೆ ಕೇವಲ ಸುಂದರ ಕನಸುಗಳ ಮೂಟೆಯಷ್ಟೇ ಅಲ್ಲ; ಆ ಕನಸುಗಳ ಸುತ್ತ ಕಾವಲುಪಡೆಯಂತೆ ನಿಲ್ಲಬೇಕಾದ ಎಚ್ಚರದ ವೇದನೆಯೂ ಆಗಬೇಕಿದೆ!

....ಆ ಭೇಟಿಯ ನಂತರ ಮತ್ತೆ ಮೈಸೂರಿಗೆ ಮರಳುವ ಹಾದಿಯಲ್ಲಿ ನನ್ನ ಕಣ್ಣು–ಕಿವಿ–ಮನಸನ್ನೆಲ್ಲ ಇಡಿಯಾಗಿ ಆವರಿಸಿಕೊಂಡಿದ್ದುದು ಆ ಸುಂದರಿ ಅಜ್ಜಿಯ ಗುಂಗು... ನಗು, ಬೆರಗು, ಶುದ್ಧ ಸಂಭ್ರಮದ ಬೆಡಗು. ದೇವದಾಸಿಯಾಗಿದ್ದವಳು ಆಕೆ ..ನೋವು, ಸಂಕಟ, ರೋಷ, ಕಿಚ್ಚೆಲ್ಲವನ್ನೂ ಬಸಿದು ಎದೆಯ ಹಾಡಾಗಿಸಿಕೊಂಡವಳು,... ಕಂಬನಿಯುನೆಣ್ಣೆಯಾಗಿಸಿ ಕಣ್ಣದೊಂದಿ ಹೊತ್ತಿಸಿಕೊಂಡವಳು... ಅವಳೇ ನನ್ನೊಳಗಿಳಿದು ಕೂತಿದ್ದರಿಂದಲೋ ಏನೋ ನನಗೆ ಅಕ್ಕಪಕ್ಕದ ಸೀಟಿನ ಗಂಡಸರ್ಯಾರೂ ಮತ್ತೆ ಕಾಣಲೇ ಇಲ್ಲ...!!

**( ಚರಿತಾ 'ಕಾವಾ' ಮತ್ತು ಶಾಂತಿನಿಕೇತನದಲ್ಲಿ ಚಿತ್ರಕಲೆಯಲ್ಲಿ ಉನ್ನತ ಶಿಕ್ಷಣ ಪಡೆದು ಮೈಸೂರು ವಿಶ್ವವಿದ್ಯಾಲಯದಲ್ಲಿ ಡಾಕ್ಟೊರೇಟ್ ಮಾಡಿ ಈಗ ಅಲ್ಲಿಯೇ ಉನ್ನತ ಸಂಶೋಧನಾ ಕಾರ್ಯದಲ್ಲಿ ತೊಡಗಿದ್ದಾರೆ. ಸಾಹಿತ್ಯ ಮತ್ತು ಸಂಗೀತದಲ್ಲೂ ಆಸಕ್ತಿ ಹೊಂದಿರುವ ಚರಿತಾ, ದೃಶ್ಯಕಲೆ ಕುರಿತಂತೆ 'ಉಸಿರಾಡುವ ಬಣ್ಣಗಳು' ಎಂಬ ಲೇಖನಗಳ ಸಂಗ್ರಹವನ್ನೂ ಪ್ರಕಟಿಸಿದ್ದಾರೆ.)**

---

## ಭಾಷೆ, ಶಿಕ್ಷಣ, ಸಾಹಿತ್ಯ ಇತ್ಯಾದಿ

# ಕನ್ನಡ ಸೇವೆಯ ವಿವಿಧ ರೂಪುಗಳೂ, ರೂಹುಗಳೂ...

**ಎ**ಲ್ಲ ನಿರೀಕ್ಷೆಯಂತೇ ಆಗಿದೆ! ದೇವನೂರು ಮಹಾತ್ಮೆ ಮತ್ತೊಮ್ಮೆ ನಡೆದಿದೆ!! ಸಿದ್ದಲಿಂಗಯ್ಯ ಈ ಬಾರಿ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಶಾಲಾ ಶಿಕ್ಷಣ ಮಾಧ್ಯಮ ಮಾತೃಭಾಷೆಯಲ್ಲಿರಬೇಕೆಂಬ ಪುರಾತನ ಹೋರಾಟದ ನೆಪವೊಡ್ಡಿ ಸಾಹಿತ್ಯ ಸಮ್ಮೇಳನದ ಪ್ರಸ್ತುತತೆಯನ್ನು ಪ್ರಶ್ನಿಸಿ ಅದರ ಅಧ್ಯಕ್ಷತೆಯನ್ನು ನಿರಾಕರಿಸಿದ್ದ ಮಹಾದೇವ, ತಾವು ನಿರಾಕರಿಸಿದ್ದ ಈ ಅಧ್ಯಕ್ಷ ಸ್ಥಾನಕ್ಕೆ ಬದಲಿ ವ್ಯಕ್ತಿಯನ್ನು ನಿರ್ಧರಿಸುವ ಸರಿಯಾಗಿ ಒಂದು ದಿನ ಮುಂಚೆ ಒಂದು ದೀರ್ಘ ಪತ್ರಿಕಾ ಪ್ರಕಟಣೆ ನೀಡಿ ತಮ್ಮ ಗೆಳೆಯ ಸಿದ್ದಲಿಂಗಯ್ಯನವರ ಆಯ್ಕೆಯನ್ನು ಸುಗಮಗೊಳಿಸಿದ್ದಾರೆ. ಈ ಪ್ರಕಟಣೆಯಲ್ಲಿ ಮಹಾದೇವ, ಅವರನ್ನು ಯಾವುದಕ್ಕಾಗಿ ಒಳ್ಳೆಯ ಶಿಕ್ಷಣದ ಪರವಾಗಿದ್ದವರು ಮತ್ತು ಅವರ ಅಭಿಮಾನಿಗಳು ಬೆಂಬಲಿಸಿದ್ದರೋ ಆ ಕನ್ನಡ ಪರವಾದ ಪ್ರಾಮಾಣಿಕ ನಂಬಿಕೆ ಮತ್ತು ದೃಢನಿಶ್ಚಯದ ನಿಲುವು ಮಾಯವಾಗಿವೆ. ಹೋರಾಟದ ಹುರುಪಿನ ಜಾಗದಲ್ಲಿ ಉಪದೇಶ ಮತ್ತು ರಾಜಕೀಯ ಭೋಳೆ ತುಂಬಿ ಹೋಗಿ, ಪರಿಸ್ಥಿತಿ ತಹಬಂದಿಗೆ ಬಂದಿದೆ! ಸಿದ್ದಲಿಂಗಯ್ಯ ಈಗ ಯಾವುದೇ ಮುಜುಗರವಿಲ್ಲದೆ ತಮ್ಮ ಆಯ್ಕೆಯನ್ನು ಒಪ್ಪಿಕೊಳ್ಳಲು ಅನುವು ಮಾಡಿಕೊಟ್ಟಿದೆ.. ಎಲ್ಲವೂ ಹಾವೂ ಸಾಯಬಾರದು, ಕೋಲೂ ಮುರಿಯಬಾರದೆಂಬ ಅವರ ಅಚ್ಚುಕಟ್ಟಾದ ಲೆಕ್ಕಾಚಾರದ ಜೀವನ ದರ್ಶನಕ್ಕೆ ತಕ್ಕಂತೆಯೇ ನಡೆದಿದೆ!

ಇದರಿಂದ ಪರಿಷತ್ತಿನ ಅಧ್ಯಕ್ಷರೂ ಸೇರಿದಂತೆ ಸಮ್ಮೇಳನದ ಊಟ–ಪೆಂಡಾಲು–ಗೋಷ್ಠಿ ಇತ್ಯಾದಿ ವ್ಯಾಪಾರಗಳ ಕಂಟ್ರಾಕ್ಟುದಾರರೂ ಮತ್ತು ಮುಂದೆ ಪರಿಷತ್ತಿನ ಉಸ್ತುವಾರಿ ವಹಿಸಿಕೊಳ್ಳಲು ಸ್ಪರ್ಧೆಗೆ ಕಾದು ನಿಂತಿರುವ ಬಕಪಕ್ಷಿಗಳೂ ಸಂತುಷ್ಟಗೊಂಡಿದ್ದಾರೆ. ಮಹಾದೇವ ಅವರ ಆಶಯದಂತೆಯೇ ಸಮ್ಮೇಳನ ನಡೆಯುವುದಾಗಿ ಹಾಲಂಬಿ ಅಪ್ಪಣೆ ಕೊಟ್ಟು ಮಹಾದೇವರನ್ನೂ ಸಂತುಷ್ಟಗೊಳಿಸಿದ್ದಾರೆ. ಮಹಾದೇವ ಅವರೂ ತಮ್ಮ ಜೀವನ ದರ್ಶನಕ್ಕೆ ತಕ್ಕಂತೆ ತಾವೂ ಒಂದು ಅರ್ಧ ದಿನ ಸಮ್ಮೇಳನಕ್ಕೆ ಆಗಮಿಸಿ (ತಮ್ಮ ಆಶಯದಂತೆಯೇ ಎಲ್ಲವೂ ನಡೆಯುತ್ತಿದೆಯೇ ಎಂದು ಪರಿಶೀಲಿಸಲು, ಅಷ್ಟೆ!) ಅಭಿಮಾನಿಗಳಿಗೆ ಒಂದಷ್ಟು ಆಟೋಗ್ರಾಫ್ ಹಾಕಿ ಅಭಿಮಾನಿ ಪತ್ರಕರ್ತರಿಂದ ಫೋಟೋ ತೆಗೆಸಿಕೊಂಡು ಹೋಗಲೂಬಹುದು. ಹೇಗೂ ತಮ್ಮ ಮೂಲ ಹೇಳಿಕೆಯ ಆಶಯಕ್ಕೆ ವಿರುದ್ಧವಾಗಿ ಸಮ್ಮೇಳನ ನಡೆಯುತ್ತಿರುವುದರಿಂದ, ಮಾತೃಭಾಷಾ ಶಿಕ್ಷಣದ ಪರವಾದ ಹೋರಾಟದ ನೇತೃತ್ವ ವಹಿಸಿಕೊಳ್ಳುವ ತರಲೆ–ತಾಪತ್ರಯವಿಲ್ಲದೆ ಹಾಯಾಗಿ ನಿದ್ದೆ ಹೊಡೆಯಬಹುದಲ್ಲಾ! ಭಲೇ ಮಹಾದೇವ, ಭಲೇ! ಬರೀ ಜಾಣ ಹೇಳಿಕೆಗಳ ಮೂಲಕವೇ 'ಕ್ರಾಂತಿ' ಮಾಡಿದ ಕೀರ್ತಿ ಸಂಪಾದಿಸಿಕೊಳ್ಳುವ ನಿಮ್ಮ ಕೌಶಲ್ಯ ನಿಜವಾಗಿಯೂ ಮೆಚ್ಚಬೇಕಾದದ್ದೇ. ನಿಜವಾಗಿ ಹೇಳಿ, ನಿಮ್ಮ ನಿಲುವಿನಿಂದಾಗಲೀ, ನಂತರ ನೀವು ಹಾಲಂಬಿಯವರಿಗೆ ಬರೆದ ಪತ್ರದಿಂದಾಗಲೀ ನಿಮ್ಮ ಮೆಚ್ಚಿನ ಮುಖ್ಯಮಂತ್ರಿಯವರೂ ಸೇರಿದಂತೆ ಯಾವ ಕನ್ನಡಿಗನ್ನಲ್ಲಾಗಲೀ, ಕನ್ನಡ ಮತ್ತು ಪ್ರಾಥಮಿಕ ಶಿಕ್ಷಣದ ಬಗ್ಗೆ ಹೊಸ ಉತ್ಸಾಹ ಉಂಟಾಗಿದೆಯೇ? ಅವರ ಆತ್ಮ ಸಾಕ್ಷಿ ಎಚ್ಚರಗೊಂಡ ಸೂಚನೆಗಳೇನಾದರೂ ನಿಮಗೆ ಸಿಕ್ಕಿವೆಯೇ?

ಇರಲಿ, ಇದೆಲ್ಲ ಮಾಯಾ ಬಜಾರ್ ನಡುವೆ ಕನ್ನಡದ ಇಂದಿನ ಸ್ಥಿತಿಗತಿಗಳ ಬಗ್ಗೆ ತುಂಬಾ ದಿಟ್ಟ, ನೇರ ಹೇಳಿಕೆ ನೀಡಿರುವವರೆಂದರೆ ನಮ್ಮ ಚಂಪಾ! ಅವರ ಪ್ರಕಾರ, ಸಮ್ಮೇಳನಕ್ಕೂ ಕನ್ನಡದ ಹೋರಾಟಕ್ಕೂ ಸಂಬಂಧವಿಲ್ಲ. ಏಕೆಂದರೆ ಕನ್ನಡದ ಹೋರಾಟ ನಿರಂತರ! ಅಲ್ಲವೇ ಮತ್ತೆ? ಅದು ನಿರಂತರವಾಗಿರದೆ, ಎಲ್ಲಾದರೂ ನಿಂತು ಹೋದರೆ ಅದೆಷ್ಟು ಜನಕ್ಕೆ ಉದ್ಯೋಗ, ಆದಾಯ, ಕುರ್ಚಿ ನಷ್ಟ!

ಕನ್ನಡ ಸಾಹಿತ್ಯ ಸಮ್ಮೇಳನವನ್ನು ವಿರೋಧಿಸಿ ಮಹಾದೇವ ಅವರು ನೀಡಿದ್ದ ಮೂಲ ಹೇಳಿಕೆಯನ್ನು ಅವರ ಅಭಿಮಾನಿ ಬಳಗ ನನಗೆ(ಮತ್ತು ಹಲವರಿಗೆ) ಕಳಿಸಿ ಬೆಂಬಲ ಕೋರಿತ್ತು. ಅವರಿಗೆ ಆಗ ನೀಡಿದ ಉತ್ತರ, ನನ್ನ ಈ ಮೇಲಿನ ಮಾತುಗಳನ್ನು ಸ್ವಲ್ಪವಾದರೂ ಸಹಾನುಭೂತಿಯಿಂದ ಅರ್ಥ ಮಾಡಿಕೊಳ್ಳಲು ನೆರವಾಗಬಹುದೆಂದು ಇಲ್ಲಿ ನೀಡುತ್ತಿರುವೆ:.

೨, ಡಿಸೆಂಬರ್, ೨೦೧೪

ಪ್ರಿಯರೇ,

**ಸಾಹಿತ್ಯ ಸಮ್ಮೇಳನದ ಸಂದರ್ಭದಲ್ಲಿ ಶಿಕ್ಷಣ ಮಾಧ್ಯಮ ಕುರಿತಂತೆ ದೇವನೂರ ಮಹಾದೇವ ತೆಗೆದುಕೊಂಡಿರುವ ನಿಲುವು ಅಪೂರ್ವವಾದದ್ದು ಮತ್ತು ಎಲ್ಲ ವಿವೇಕಿ ಕನ್ನಡಿಗರು ಒಪ್ಪುವಂತಹದ್ದು. ಅದಕ್ಕಾಗಿ ಅವರಿಗೆ ಅಭಿನಂದನೆಗಳು.**

**ಏಳೆಂಟು ವರ್ಷಗಳ ಹಿಂದೆ ಕೆಲವು ದಾರಿ ತಪ್ಪಿದ 'ಪ್ರಗತಿಪರ'ರ ಮಾತುಗಳಿಗೆ ಮಣಿದು ಮಹಾದೇವ ಕನ್ನಡದ ಮಕ್ಕಳಿಗೆ ಒಂದನೇ ತರಗತಿಯಿಂದಲೇ ಇಂಗ್ಲಿಷ್ ಕಲಿಸಬೇಕೆನ್ನುವ ಸರ್ಕಾರದ ನೀತಿಯನ್ನು ಬೆಂಬಲಿಸಿದಾಗ ನಾನು ಆಘಾತಗೊಂಡಿದ್ದೆ. ಅದನ್ನು ಸಾಮಾಜಿಕ ನ್ಯಾಯದ ವಾದದ ನೆಲೆಯಲ್ಲಿ ಸಮರ್ಥಿಸಿದ ಕೆಲವರ ನೀತಿಯಂತೂ ಕನ್ನಡವನ್ನು ಇನ್ನಷ್ಟು ನಿಕೃಷ್ಟ ಸ್ಥಾನಕ್ಕೆ ತಳ್ಳುವಂತೆಯೇ ಇತ್ತು. ಆ ನಿಲುವು, ಆ ಬೆಂಬಲ ಈ ಯೋಜನೆಯ ಸಾಫಲ್ಯ–ವೈಫಲ್ಯಗಳೇನೇ ಇದ್ದರೂ, ಈಗಾಗಲೇ ಸ್ಥಾಪಿತವಾಗಿದ್ದ ಕನ್ನಡದ ಮೇಲಿನ ಇಂಗ್ಲಿಷ್ ಸವಾರಿಯನ್ನು ತಾತ್ವಿಕವಾಗಿ ಒಪ್ಪಿಕೊಂಡಿದ್ದರ ಸೂಚನೆಯಾಗುತ್ತದೆ ಮತ್ತು ಈಗಾಗಲೇ ಹದಗೆಟ್ಟಿರುವ ಕನ್ನಡದ ಪರಿಸ್ಥಿತಿಯನ್ನು ಇನ್ನೂ ಹದಗೆಡಿಸುತ್ತದೆ ಎಂದು ಸೂಚಿಸಿದ್ದೆ. ಜೊತೆಗೆ ಒಂದನೇ ತರಗತಿಯಿಂದ ಇಂಗ್ಲಿಷ್ ಕಲಿಸಬೇಕೆಂಬ ನೀತಿಯನ್ನು ಬೆಂಬಲಿಸುವುದು ಅನಿವಾರ್ಯವೇ ಆದರೆ, ಕನ್ನಡ ಮಾಧ್ಯಮ ಶಿಕ್ಷಣವನ್ನು ಕಡ್ಡಾಯ ಮಾಡಿ, ಆನಂತರ ಆ ನೀತಿಯನ್ನು ಜಾರಿಗೆ ತನ್ನಿ ಎಂದು ಹೇಳಬಹುದು ಎಂದೂ ತಿಳಿಸಿದ್ದೆ. ಆದರೆ ಸ್ವತಃ ಮಹಾದೇವ ಅವರೇ ಅದನ್ನು 'ಅವಾಸ್ತವಿಕ' ಎಂದು ತಳ್ಳಿಹಾಕಿದ್ದರು ಮತ್ತು ಸಾಮಾಜಿಕ ನ್ಯಾಯದ ಹೆಸರಿನಲ್ಲಿ ಯಾರೂ ಆ ಬಗ್ಗೆ ಮಾತಾಡಲಿಲ್ಲ.**

ಆಗ ಮಾಡಿದ ಕನ್ನಡ ದ್ರೋಹದ ಪಾಪವನ್ನು ತೊಳೆದುಕೊಳ್ಳಲಾದರೂ ಸರಿ, ಮಹಾದೇವ ಈಗ ಈ ನಿರ್ಧಾರ ತೆಗೆದುಕೊಂಡಿದ್ದರೆ, ಅವರನ್ನು ಅಭಿನಂದಿಸುತ್ತೇನೆ ಮತ್ತು ಅದನ್ನು ಮನಃಪೂರ್ವಕವಾಗಿ ಬೆಂಬಲಿಸುತ್ತೇನೆ. ಆದರೆ ಒಂದು ಮಾತು: ಮಹಾದೇವ ಜಾಣ ಮಾತುಗಳಿಗೆ ಹೆಸರುವಾಸಿ. ಅವರು ಸಮ್ಮೇಳನವನ್ನು ನಿಲ್ಲಿಸಿದರೆ ತಾವು ಶಿಕ್ಷಣ ಮಾಧ್ಯಮ ಆಂದೋಲನದ ನೇತೃತ್ವ ವಹಿಸಿಕೊಳ್ಳುವುದಾಗಿ ಹೇಳಿದ್ದಾರೆ. ಒಂದು ವೇಳೆ ಸಾಹಿತ್ಯ ಸಮ್ಮೇಳನ ನಡೆಯುವಂತಾದರೆ? ನೀವು ಮಾತೃಭಾಷಾ ಶಿಕ್ಷಣ ಮಾದ್ಯಮದ ಪರವಾಗಿ ಆಡಿರುವ ಮಾತುಗಳೆಲ್ಲವೂ ನಿಜವಾಗಿದ್ದರೆ ಮತ್ತು ಅವುಗಳಲ್ಲಿ ನಿಮಗೆ ನಂಬಿಕೆ ಇದ್ದರೆ, ಸಮ್ಮೇಳನ ನಡೆಯಲಿ-ನಡೆಯದಿರಲಿ, ಮಾತೃಭಾಷಾ ಶಿಕ್ಷಣ ಮಾಧ್ಯಮ ಆಂದೋಲನದ ನೇತೃತ್ವ ವಹಿಸುವುದು ನಿಮ್ಮ ನೈತಿಕ ಜವಾಬ್ದಾರಿಯಾಗಿರುತ್ತದೆ ಎಂದು ಅವರಿಗೆ ಹೇಳಬೇಕಿದೆ. ಇದು ಸಾಧ್ಯವಾದರೆ, ಅದು ಅವರ ಈವರೆಗಿನ ಸಾಹಿತ್ಯಕ್ಕಿಂತ ದೊಡ್ಡ ಸಾಧನೆ ಎನಿಸೀತು.

ಕನ್ನಡ ಶಿಕ್ಷಣ ಮಾಧ್ಯಮದ ವಿಷಯವಾಗಿ ಕನ್ನಡ ಸಾಹಿತ್ಯ ಪರಿಷತ್ತು ಮಾಡಬೇಕಿರುವ ಕೆಲಸದ ಬಗ್ಗೆ ಅದರ ಅಧ್ಯಕ್ಷ ಶ್ರೀ ಪುಂಡಲೀಕ ಹಾಲಂಬಿಯವರಿಗೆ ಎರಡು ವರ್ಷಗಳ ಹಿಂದೆ ನಾನು ಬರೆದಿದ್ದ ಪತ್ರವನ್ನೂ ಇಲ್ಲಿ ಲಗತ್ತಿಸಿರುವೆ:

ದಿನಾಂಕ: ೩.೫.೨೦೧೨

ಪ್ರಿಯ ಶ್ರೀ ಪುಂಡಲೀಕ ಹಾಲಂಬಿ ಅವರಲ್ಲಿ,

ವಂದನೆಗಳು. ಮೊದಲಿಗೆ, ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಆಯ್ಕೆಯಾಗಿರುವುದಕ್ಕಾಗಿ ನಿಮಗೆ ನನ್ನ ಹಾರ್ದಿಕ ಅಭಿನಂದನೆಗಳು. ನಿಮ್ಮ ಸಾರಥ್ಯದಲ್ಲಿ ಪರಿಷತ್ತು ಕನ್ನಡ ನಾಡು ನುಡಿಯ ಭವಿಷ್ಯವನ್ನು ಕಾಪಾಡುವ ದಿಸೆಯಲ್ಲಿ ನಿಸ್ಪೃಹತೆಯಿಂದ ಕೆಲಸ ಮಾಡುವುದೆಂದು ಆಶಿಸುತ್ತೇನೆ. ಹಾಗೇ ಈ ದಿಸೆಯಲ್ಲಿನ ನಿಮ್ಮೆಲ್ಲ ಪ್ರಯತ್ನಗಳು ಯಶಸ್ವಿಯಾಗಲಿ ಎಂದೂ ಹಾರೈಸುವೆ.

ನೀವಿನ್ನೂ ಇದೀಗ ಅಧಿಕಾರ ವಹಿಸಿಕೊಳ್ಳುತ್ತಿರುವಿರಿ. ಆದರೆ ನೀವು ತಕ್ಷಣವೇ ಕೈಗೆತ್ತಿಕೊಳ್ಳಬೇಕಾದ ಕನ್ನಡದ ತುರ್ತು ಕೆಲಸವೊಂದಿದೆ ಎಂದು ಭಾವಿಸಿ ನಾನು ಈ ಪತ್ರ ಬರೆಯುತ್ತಿರುವೆ. ರಾಜ್ಯಾದ್ಯಂತ ಇನ್ನು ಕೆಲವೇ ದಿನಗಳಲ್ಲಿ ಶಾಲೆಗಳು ಆರಂಭವಾಗಲಿವೆ. ನಾಡು-ನುಡಿಯ ಭವಿಷ್ಯವನ್ನು ಭದ್ರಪಡಿಸುವ ಕೆಲಸ ಈ ಹಂತದಲ್ಲಿ ಆರಂಭವಾಗಬೇಕಾದ ಸ್ಥಿತಿ ಇಂದು ಕನ್ನಡಕ್ಕೆ ಒದಗಿ ಬಂದಿದೆ ಎಂಬುದನ್ನು ತಾವೂ ಬಲ್ಲಿರಿ. ನಾಡು ನುಡಿಯನ್ನು ಕಟ್ಟಬೇಕಾದ ಕನ್ನಡದ ಮಕ್ಕಳನ್ನು ಅಡಿಪಾಯದ ಹಂತದಲ್ಲೆ ಕನ್ನಡದಿಂದ ದೂರವಿರಿಸುವ ದುರ್ಬುದ್ಧಿ ಕನ್ನಡ ಜನಕ್ಕೆ ಬಂದಿದೆ. ಇದಕ್ಕೆ ಸರ್ಕಾರದ ನೀತಿ-ನಿಲುವುಗಳೂ ಕಾರಣವಾಗಿದೆ.

ಆದರೆ ಇದನ್ನೆಲ್ಲ ಬೌದ್ಧಿಕವಾಗಿ ವಿಶ್ಲೇಷಿಸುತ್ತಾ ಯಾರ ತಪ್ಪು, ಎಷ್ಟು, ಏಕೆ ಇತ್ಯಾದಿಗಳನ್ನು ತೀರ್ಮಾನಿಸುತ್ತಾ ಕೂರುವ ಕಾಲವಿದಲ್ಲ. ಹಾಗಾಗಿ ಶಿಕ್ಷಣದ ವಿಷಯದಲ್ಲಿ ಕನ್ನಡಪರ ವಾತಾವರಣ ನಿರ್ಮಾಣ ಮಾಡುವಂತಹ ಕಾರ್ಯಕ್ರಮಗಳನ್ನು ಆ ಮೂಲಕ ನಮ್ಮ ತಂದೆತಾಯಂದರು ತಮ್ಮ ಮಕ್ಕಳನ್ನು ಕನ್ನಡ ಶಾಲೆಗಳಿಗೆ ಸೇರಿಸಲು ಪ್ರೇರೇಪಿಸುವ ಕೆಲಸವನ್ನು ಪರಿಷತ್ತು ಈಗ ರೂಪಿಸಿ ಕಾರ್ಯಗತ ಮಾಡುವುದು ಅದರ ತುರ್ತು ಕರ್ತವ್ಯವೇ ಆಗಿದೆ ಎಂದು ನಾನು ಭಾವಿಸುವೆ. ಏಕೆಂದರೆ, ನಮ್ಮ ಮಕ್ಕಳ ಬುದ್ಧಿ ಬೆಳವಣಿಗೆಯ ಅಡಿಪಾಯ ಕನ್ನಡದ ಮಾತೃಕೆಗಳಿಂದ ನಿರ್ಮಿತವಾಗದಿದ್ದಲ್ಲಿ ಕನ್ನಡ ನಾಡು-ನುಡಿಗಳೆಂಬುವು ಬರೀ ಬಾಯಿ ಮಾತಿನ ಬೊಗಳೆಯಾಗಿ ಉಳಿಯಬಲ್ಲುವಷ್ಟೆ. ಈ ದಿಸೆಯಲ್ಲಿ ಸಾಹಿತ್ಯ ಪರಿಷತ್ತಿನ ಇತ್ತೀಚಿನ ಒಲವು-ನಿಲುವುಗಳು ನಿರಾಶಾದಾಯಕವಾಗಿದ್ದವು ಎಂದು ವಿಷಾದದಿಂದ ಹೇಳಬೇಕಾಗಿದೆ. ನಿಮ್ಮ ನೇತೃತ್ವದಲ್ಲಾದರೂ, ಈ ತಪ್ಪು ಸರಿಯಾಗಲಿ.

ಸಾಹಿತ್ಯ ಪರಿಷತ್ತು ಶಾಲಾ ಪ್ರವೇಶಾತಿ ಆರಂಭವಾಗುವ ಮುನ್ನವೇ ಪ್ರತಿ ಊರಿನಲ್ಲಿ-ಕನಿಷ್ಟ ಹೋಬಳಿ ಮಟ್ಟದಲ್ಲಾದರೂ-ಕನ್ನಡ ಶಾಲೆಗಳ ಪರ ಪ್ರಚಾರ ಸಭೆ, ಮೊಹಲ್ಲಾ-ಬೀದಿ ಮೆರವಣಿಗೆ, ಮನೆ ಮನೆಗೆ ಭೇಟಿ, ಕರಪತ್ರ-ಭಿತ್ತಿಪತ್ರಗಳ ಆಂದೋಲನವೊಂದನ್ನು ಆರಂಭಿಸುವ ಬಗ್ಗೆ ಕೂಡಲೇ ಯೋಚಿಸಿ ಎಂದು ಕೇಳಿಕೊಳ್ಳುವೆ. ಇದಕ್ಕಾಗಿ ನೀವು, ಪ್ರಾಥಮಿಕ ಶಾಲಾ ಶಿಕ್ಷಣ ಇಲಾಖೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ವಿವಿಧ ಅಕಾಡೆಮಿಗಳು ಮತ್ತು ಕನ್ನಡಪರ ಸಂಘಟನೆಗಳ ಸಹಕಾರವನ್ನೂ ಪಡೆಯಬಹುದು. ಈ ಆಂದೋಲನದ ಭಾಗವಾಗಿ ಪರಿಷತ್ತಿನ ನೇತೃತ್ವದಲ್ಲೇ ಶಾಲಾ ಗುಣಮಟ್ಟ ಖಾತರಿ/ನಿಗಾ ಸಮಿತಿಗಳನ್ನೂ ರಚಿಸಬಹುದು. ಈ ಆಂದೋಲನ ಕನ್ನಡ ಭಾಷೆಯ, ಕನ್ನಡದ ಮಕ್ಕಳ ಬೆಳವಣಿಗೆಯ ದೃಷ್ಟಿಯಿಂದಷ್ಟೇ ಅಲ್ಲ, ಸಾಹಿತ್ಯ ಸಮ್ಮೇಳನಗಳ ಸಂದರ್ಭದಲ್ಲಿ ಮಾತ್ರ ಜನರ ನೆನಪಿಗೆ ಬರುವಷ್ಟು ಜನದೂರವಾಗಿರುವ ಸಾಹಿತ್ಯ



ಪರಿಷತ್ತನ್ನು ಜನರ ಹತ್ತಿರಕ್ಕೆ ಒಯ್ಯುವ ಪರಿಣಾಮಕಾರಿ ಕಾರ್ಯಕ್ರಮವೂ ಆದೀತು. ಕನ್ನಡ ಶಾಲೆಗಳೂ ಉಳಿದಾವು.

ನನ್ನ ಈ ಸಲಹೆಯನ್ನು ನೀವು ಅಗತ್ಯ ಸಹಾನುಭೂತಿಯಿಂದ ಪರಿಶೀಲಿಸಿ ಕಾರ್ಯಕ್ರಮ ರೂಪಿಸುವಿರಿ ಎಂದು ಆಶಿಸುವೆ. ನನ್ನ ಪತ್ನಿ ಸವಿತಾ ನಿಮಗೆ ಅಭಿನಂದನೆ ಮತ್ತು ನಿಮ್ಮ ಪತ್ನಿಗೆ ನೆನಪು ತಿಳಿಸಿದ್ದಾಳೆ.

ವಿಶ್ವಾಸದ

**(ಡಿ.ಎಸ್. ನಾಗಭೂಷಣ)**

## ಸಾಹಿತ್ಯ ಅಕಾಡೆಮಿ ಕಂದಾಯ ಇಲಾಖೆಯ ಸುಪರ್ದಿಗೆ ?!

ಮಾಲತಿ ಪಟ್ಟಣಶೆಟ್ಟಿವರ ಅಧ್ಯಕ್ಷತೆಯ ಕರ್ನಾಟಕ ಸಾಹಿತ್ಯ ಅಕಾಡೆಮಿ ಹೆಮ್ಮೆಯಿಂದ ೨೦೧೦ ಮತ್ತು ೨೦೧೧ರ ತನ್ನ ಬ್ಯಾಕ್‌ಲಾಗ್ ಪ್ರಶಸ್ತಿಗಳನ್ನು ಪ್ರಕಟಿಸಿದೆ. ಆ ಪ್ರಶಸ್ತಿ ಪಟ್ಟಿಯನ್ನು ನೋಡಿದ ಗೆಳೆಯರೊಬ್ಬರು ಗಾಬರಿಯಾಗಿ ನನಗೆ ಕರೆ ಮಾಡಿ, 'ಅಯ್ಯೋ, ಹೆಸರೇ ಕೇಳದವರಿಗೆಲ್ಲ ಗೌರವ ಪ್ರಶಸ್ತಿ ನೀಡಿದ್ದಾರಲ್ಲಾ! ಎಂದಾಗ ಅವರಿಗೆ ನಾನು, ಈ ಅಕಾಡೆಮಿಯ ಸದಸ್ಯರ ಪಟ್ಟಿಯನ್ನೂ ಪ್ರಶಸ್ತಿ ವಿಜೇತರ ಈ ಪಟ್ಟಿಯನ್ನೂ ಜೊತೆಗಿಟ್ಟುಕೊಂಡು ನೋಡಿದ್ದರೆ ನಿಮಗೆ ಇಂತಹ ಗಾಬರಿಯೇನೂ ಆಗುತ್ತಿರಲಿಲ್ಲ! ಅಕಾಡೆಮಿ ಹೇಗಿರುತ್ತದೋ ಹಾಗಿರುತ್ತವೆ ಅವು ನೀಡುವ ಪ್ರಶಸ್ತಿಗಳು' ಎಂದೆ. ಅವರು ಮುಂದೆ ಏನೂ ಮಾತನಾಡಲಿಲ್ಲ!

ಈ ಗೆಳೆಯರು ಪತ್ರಿಕೆಗಳಲ್ಲಿ ಪ್ರಶಸ್ತಿ-ಬಹುಮಾನ ವಿಜೇತರ ಪಟ್ಟಿಯ ಕೆಳಗೆ ಅಕಾಡೆಮಿಯ ವಕ್ತಾರರು ಆಡಿರುವ ಮಾತುಗಳನ್ನು ಗಮನಿಸಿದ್ದಂತಿರಲಿಲ್ಲ. ಆ ವಕ್ತಾರರು, ರಾಜ್ಯದ ಕಂದಾಯ ವಿಭಾಗಗಳನ್ನು ಗಮನದಲ್ಲಿಟ್ಟುಕೊಂಡು ಪ್ರಶಸ್ತಿಗಳನ್ನು 'ನ್ಯಾಯಬದ್ಧ'ವಾಗಿ ಹಂಚಿರುವುದಾಗಿ ಹೇಳಿದ್ದಾರೆ. ಅಯ್ಯೋ, ನಮಗೆ ಗೊತ್ತೇ ಇರಲಿಲ್ಲ, ಅಕಾಡೆಮಿ ಈಗ ಕಂದಾಯ ಇಲಾಖೆಯ ಸುಪರ್ದಿಗೆ ಬಂದು 'ಕಂದಾಯ ನ್ಯಾಯ' ಪದ್ಧತಿಗೆ ಒಳಗಾಗಿದೆ ಎಂದು! ಸಾಹಿತಿಗಳು ಇನ್ನು ಮುಂದೆ ತಮ್ಮ (ಸಾಹಿತ್ಯಿಕ)ಆಸ್ತಿಪಾಸ್ತಿಯ 'ಕಂದಾಯ'ವನ್ನು ಸಕಾಲದಲ್ಲಿ ಸ್ಥಳೀಯ ಸಾಹಿತ್ಯ ಸಂಬಂಧಿ ರೆವೆನ್ಯೂ ಇನ್‌ಸ್ಪೆಕ್ಟರ್‌ಗಳಿಗೆ(ಈ ಹಿಂದೆ ಶಾನುಭೋಗರುಗಳಿಗೆ ಸಲ್ಲಿಸುತ್ತಿದ್ದಂತೆ) ಸಲ್ಲಿಸದರೆ ಮಾತ್ರ ಪ್ರಶಸ್ತಿ-ಬಹುಮಾನಗಳು ಎಂದು ಈಗ ಗೊತ್ತಾಯಿತು. ಹಾಗಾಗಿ, ಅಕಾಡೆಮಿಯ ಸದಸ್ಯರೊಬ್ಬರು, ಇದು ಸರ್ಕಾರಿ ಸಂಸ್ಥೆಯಾದ್ದರಿಂದ ಸರ್ಕಾರದ ನೀತಿಯಂತೆ ಜಾತಿ, ಮತ, ಲಿಂಗ, ಭೂಗೋಳ ಇತ್ಯಾದಿಗಳನ್ನು ನೋಡಿ ಸಾಹಿತ್ಯ ಪ್ರಶಸ್ತಿಗಳನ್ನು ಹಂಚಬೇಕು ಎಂದು ಮಾಡಿದರೆಂದು ಹೇಳಲಾದ ವಾದ ಸರಿಯಾಗಿಯೇ ಇದೆ.

ಇದೆಲ್ಲ ಸರಿಯೇ. ಆದರೆ ಇದನ್ನು ಎಲ್ಲರೂ ಸಹಾನುಭೂತಿಯಿಂದ ಒಪ್ಪಿಕೊಳ್ಳಲಾಗುವಂತೆ ಕನ್ನಡ ಸಾಹಿತ್ಯ ಕ್ಷೇತ್ರದ ಒಂದು ಸಮೀಕ್ಷೆ ಮಾಡಿ, ಸಾಹಿತ್ಯದ ಬಡತನ ರೇಖೆಯೊಂದನ್ನು ನಿಶ್ಚಯಿಸಿ, ಅಗತ್ಯವಿದ್ದವರಿಗೆ ಬಿ.ಪಿ.ಎಲ್ ಕಾರ್ಡ್ ನೀಡಬೇಕು. ನಂತರ ಅವರಲ್ಲಿ ನಿಜ ಅರ್ಹರನ್ನು ಗುರುತಿಸಿ ಕ್ರಮವಾಗಿ ಈ ಸಾಹಿತ್ಯ ಅಕಾಡೆಮಿಯ ಮತ್ತು ಇತರೆ ಸರ್ಕಾರಿ ಪ್ರಶಸ್ತಿಗಳನ್ನು ನೀಡಿದರೆ ಅದು ಕಂದಾಯ ನಿಯಮಗಳ ಅನುಸಾರವಾಗಿಯೂ ನ್ಯಾಯಬದ್ಧವೆನಿಸೀತು. ಈ ಸಮೀಕ್ಷೆಯ ಸಾರಥ್ಯವನ್ನು ಕಾಂಗ್ರೆಸ್ ಪಕ್ಷ ಹಮ್ಮಿಕೊಂಡ ಇಂತಹುದೇ ಕಂದಾಯ ಸಮೀಕ್ಷೆಯಲ್ಲಿ ಹೆಚ್ಚು ಅರ್ಹತೆ ಗಳಿಸಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷತೆ ಗಿಟ್ಟಿಸಿಕೊಂಡಿರುವ 'ಕವಿ' ಎಲ್ ಹನುಮಂತಯ್ಯನವವರಿಗೆ ವಹಿಸಬೇಕು.! ಮಾಲತಿ ಪಟ್ಟಣಶೆಟ್ಟಿಯವರು ಗಂಭೀರವಾಗಿ ಆಲೋಚಿಸಬೇಕು!!

ಒಂದು ಕಡೆ ಸಾಹಿತ್ಯದ ಈ ಖೂಳ ಸರ್ಕಾರೀಕರಣ, ಇನ್ನೊಂದೆಡೆ ಸಾಹಿತ್ಯ, ಹಬ್ಬ, ಸಂಭ್ರಮಗಳ ಅಸಹ್ಯ ಕಾರ್ಪೋರೇಟೀಕರಣ. ಸಾಹಿತ್ಯಕ್ಕೆ ನಿಜವಾಗಿಯೂ ಇದು ಕಷ್ಟದ ಕಾಲ. ಈ ಎರಡೂ ಸುಳಿಗಳಿಂದ ಪಾರಾಗಿ ಬರೆಯುವುದೇ ಇಂದು ಬರಹಗಾರರ ಮುಂದಿರುವ ನಿಜವಾದ ಸವಾಲು.

ಈ ಎಲ್ಲದರ ನಡುವೆ ಹಿರಿಯ ವಿಮರ್ಶಕ ಜಿ.ಹೆಚ್. ನಾಯಕರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಸಂದಿದೆ. ಅವರಿಗೆ ಪತ್ರಿಕೆಯ ಅಭಿನಂದನೆಗಳು.

**-ಡಿ.ಎಸ್. ನಾಗಭೂಷಣ**

## ಪುಸ್ತಕಾವಲೋಕನ

ಪು: **ನಾವೇನು ಬಡವರಲ್ಲ** (ಆಲೋಚನೆ ಮತ್ತು ಅನುಭವಗಳ ಕಥನ) ಲೇ: **ಕೆ. ಸತ್ಯನಾರಾಯಣ** ಪ್ರ: **ಅಭಿನವ**, ಬೆಂಗಳೂರು ಪು: ೧೫೨ ಬೆಲೆ: **ರೂ. ೧೦೦/-**

### ಅಸ್ಮಿತೆಯ ಹುಡುಕಾಟದಲ್ಲಿ ಕಳೆದುಹೋಗುವ ಕಥನ




**ಜೀ**ವನಾನುಭವ ಸೃಜನಶೀಲ ಲೇಖಕನ ಅಭಿವ್ಯಕ್ತಿಯ ಮೂಲಧಾತು. ಅವನು ಬದುಕುತ್ತಿರುವ ಸಾಮಾಜಿಕ ಸಂದರ್ಭ, ಓದು ವಿವೇಕಕ್ಕೆ, ಅನುಗುಣವಾಗಿರುತ್ತದೆ. ಲೇಖಕನಾದವನು ರೂಡಿಸಿಕೊಂಡ ವೈಚಾರಿಕತೆ ಮತ್ತು ಸಾಂದರ್ಭಿಕ ಪ್ರಭಾವಗಳು ಅವನನ್ನು ಬೆಳಸುತ್ತಿರುತ್ತದೆ. ಚಲನಶೀಲವಾದ ಸಾಮಾಜಿಕ ಸಂದರ್ಭಗಳು ಸಂಸ್ಕೃತಿ ಚರಿತ್ರೆಯೊಂದಿಗೆ ಸಂವಾದವನ್ನು ನಡೆಸುತ್ತಾ, ಬಿಕ್ಕಟ್ಟುಗಳನ್ನು ಎದುರಾಗುತ್ತಲೇ ತನ್ನ ದರ್ಶನವನ್ನು ಕಂಡುಕೊಳ್ಳುತ್ತಾನೆಂದು ನಾನಾದರೂ ಭಾವಿಸುತ್ತೇನೆ. ಈ ಪ್ರಕ್ರಿಯೆಯಲ್ಲಿ ಸಂವೇದನೆಗೆ ಅನುಗುಣವಾಗಿ ಕೃತಿಯ ರೂಪವೂ ಆಯಾ ಲೇಖಕ ಅಥವಾ ಲೇಖಕಿಯ ಕೌಶಲ್ಯದ ನಿರ್ಮಿತಿಯಾಗಿರುತ್ತದೆ.

ಕೆ. ಸತ್ಯನಾರಾಯಣ ಅವರ ಇತ್ತೀಚಿನ 'ನಾವೇನು ಬಡವರಲ್ಲ' ಕೃತಿಯ ನನ್ನ ಸದ್ಯದ ಓದಿನ ಗ್ರಹಿಕೆಯಾಗಿದೆ ಈ ಟಿಪ್ಪಣಿ: ಮೂರು ದಶಕಗಳನ್ನೂ ಮೀರಿದ 'ಕೃತಿಯ ಹೂರಣ' ಲೇಖಕರ ಅನುಭವ, ವಿಸ್ತಾರವಾದ ಸಂವೇದನೆ ಅಭಿವ್ಯಕ್ತವಾಗಿರುವ ಬಗೆ ಮತ್ತು ಕೃತಿ ಪಡೆದಿರುವ ರೂಪ ಓದುಗರನ್ನು ತೃಪ್ತಿಪಡಿಸಲೂಬಹುದು ಇಲ್ಲಾ ಪ್ರಶ್ನೆಗಳನ್ನು ಹುಟ್ಟು ಹಾಕಬಹುದು.

'ನಾವೇನು ಬಡವರಲ್ಲ' ಸತ್ಯನಾರಾಯಣ ಅವರ 'ಆಲೋಚನೆ ಮತ್ತು ಅನುಭವಗಳ ಕಥನ' ಆತ್ಮವೃತ್ತಾಂತಗಳನ್ನು ಒಳಗೊಂಡದ್ದು: ಅವರ ತಾಯಿ ತಂದೆಯ ಮನೆಗಳ ಎರಡು ಹಳ್ಳಿಯ ಜೀವನಾನುಭವಗಳು: ಬೀದಿಯಿಂದ ಊರುಗಳಿಗೆ, ವಿದ್ಯಾಭ್ಯಾಸಕ್ಕಾಗಿ, ವೃತ್ತಿಯ ನಿಮಿತ್ತ ರಾಜಧಾನಿಯಿಂದ, ಇಂಡಿಯಾದ Cosmopolitan ಸಿಟಿಗಳಿಗೆ, ಬೇರೆ ಬೇರೆ ಭಾಷಿಕ ಪ್ರದೇಶಗಳಿಗೆ ವಿಸ್ತರಿಸಿಕೊಳ್ಳುತ್ತಾ ಹೋಗುತ್ತದೆ. ಅನೂಚಾನವಾಗಿ ಆವರಿಸಿರುವ ಜಾತಿ ಸಂಬಂಧವಾದ ನಡವಳಿಕೆ ರೀತಿ ರಿವಾಜುಗಳು, ಬಿಕ್ಕಟ್ಟುಗಳು, ಮೇಲ್ಜಾತಿಯ ಮುಗ್ಧ ಮನಸ್ಸಿನ ಮೇಲೆ ಉಂಟುಮಾಡಿದ ಪ್ರಭಾವಗಳು ಒಂದು ಭಾಗ. ನಂತರದ ವಿದ್ಯಾಭ್ಯಾಸ – ವೃತ್ತಿ, ತಿರುಗಾಟ, ಓದು – ವೈಚಾರಿಕತೆ – ಪ್ರಭಾವಗಳ ಸಂವೇದನೆಯದು ಮುಂದಿನ ಭಾಗ. ಅನುಭವಗಳು, ವೈಚಾರಿಕವಾದ ಆಲೋಚನೆಗಳು ಒಂದರೊಳಗೊಂದು ಬೆಸೆದುಕೊಳ್ಳುತ್ತಾ ಸಾಗುತ್ತದೆ. ಒಂದು ರೀತಿಯ 'Thought process'(ವಿವೇಕ್ ಶಾನಭಾಗ್ ಸೂಚಿಸಿರುವುದು) ಕೃತಿಯ ಬರವಣಿಗೆಯನ್ನು ನಿರ್ವಹಿಸುತ್ತದೆ. ಸಾಮಾಜಿಕ ನ್ಯಾಯದ ಸಿದ್ಧಾಂತದ ಬೆಳಕಿನಲ್ಲಿ, ಸಮಾಜ ಶಾಸ್ತ್ರೀಯ ಮನೋಭೂಮಿಕೆಯಲ್ಲಿ ಚರಿತ್ರೆ ಮತ್ತು ವರ್ತಮಾನ ತಾಕಲಾಟಕ್ಕೂ ಸಂದಿಗ್ಧಕ್ಕೂ ಒಳಗಾಗಿ ಇವತ್ತಿನ ಚಲನಶೀಲ ಸಮಾಜದ ಪ್ರಕ್ರಿಯೆಯನ್ನು ವಿಶ್ಲೇಷಿಸುವ ಕ್ರಮ ಕುತೂಹಲಕಾರಿಯಾಗಿದೆ. ಆದರೆ ಇವತ್ತಿನ ಜಾತಿ ಸಂಬಂಧದ ಬಿಕ್ಕಟ್ಟು ಇವತ್ತಿನದಲ್ಲ. ತಲತಲಾಂತರದ ಜಾಡ್ಯ. ಬಿಡುಗಡೆ ಸಾಧ್ಯವೇ? ದಾರಿ ಯಾವುದು? ಪ್ರಶ್ನೆಗಳು ಬಿಗಡಾಯಿಸುತ್ತಲೇ ಹೋಗುತ್ತವೆ. ಅದಕ್ಕೆ ಕಾರಣ, ಇಂದು ಪ್ರಜ್ವಲವಾಗಿರುವ ಅಸ್ಮಿತೆಯ ಹುಡುಕಾಟದ ಸಂದರ್ಭದಿಂದ; 'ವೈವಿಧ್ಯತೆ'ಯ ಭಯದಿಂದ ಎಂಬುದು ಕಾಣಬರುತ್ತದೆ.

'ಪಲ್ಲಟ' ಕಾಲಧರ್ಮಾನುಸಾರಿಯಾದುದು. ಅದರಲ್ಲೂ ಇಂದಿನ 'ಕ್ಷಣ ಕ್ಷಣದ ಪಲ್ಲಟ'ಗಳಿಗೆ ಕಾರಣವಾದ 'ಆರ್ಥಿಕ –ಸಾಮಾಜಿಕ ('ಶಿಕ್ಷಣ ಮತ್ತು ರಾಜಕಾರಣ'–ನನ್ನ ಮಾತು) ಪ್ರಗತಿಯ ದೆಸೆಯಿಂದಾಗಿ ಜಾತಿ–ವರ್ಗ ಸ್ವರೂಪದಲ್ಲಾಗಿರುವ ಬೇರೆ ಬೇರೆ ದಿಕ್ಕಿನ ಬದಲಾವಣೆಗಳು ಜಾತಿ ವರ್ಗಗಳನ್ನು ಸಡಿಲಿಸಿರುವುದು ಮಾತ್ರವಲ್ಲ, ಹಾಗೆ ಸಡಿಲವಾದಾಗ ಉಂಟಾಗುವ ಚೈತನ್ಯ ಮತ್ತು ವೈವಿಧ್ಯತೆಯ ಸ್ಫೋಟಕ್ಕೂ ಕೂಡ ಕಾರಣವಾಗಿದೆ.' (ಪುಟ ೧೧೮). ' ಈ ವಿದ್ಯಮಾನ, ಈ ಕ್ಷೇತ್ರ, ಈ ವಲಯಗಳನ್ನು ವಿಸ್ತರಿಸುವುದರ ಜೊತೆಗೆ ನಮ್ಮ ನಮ್ಮ ವ್ಯಕ್ತಿತ್ವವನ್ನು ಕೂಡ ವಿಸ್ತರಿಸಿದೆ. ಹೀಗಿದ್ದರೂ ಈ ವೈವಿಧ್ಯವನ್ನು ವಿರೋಧಿಸುವ, ನಿರಾಕರಿಸುವ ರೀತಿ ಯಾವದಿರುತ್ತದೆ?' ಈ ಪ್ರಶ್ನೆಗೆ ಉತ್ತರವನ್ನು ಹುಡುಕುತ್ತಾ ಲೇಖಕರು ಮದ್ರಾಸಿನ, ಕೊಲ್ಲಾಪುರದ, ಮಹಾರಾಷ್ಟ್ರದ, ಆಂಧ್ರದ ಬೇರೆ ಬೇರೆ ವರ್ಗ ಜಾತಿಯ ಧರ್ಮದ ಜನಾಂಗಕ್ಕೆ ಸೇರಿದ, ವ್ಯಕ್ತಿಗಳ, ಸಂಸ್ಥೆಗಳ, ವೃತ್ತಿಯ, ಭಿನ್ನ ಭಿನ್ನ ಅಭಿರುಚಿಯ ಜನರೊಡನೆ, ಭಿನ್ನ ಭಿನ್ನ ಸಂದರ್ಭದಲ್ಲಿ ನಡೆಸಿದ ಸಂವಾದಗಳ ಸಂದರ್ಭಗಳನ್ನು ಗಾಂಧಿ ರಾಮಕೃಷ್ಣರಂತಹ ಸಂತರ ತೆರದ ಮನಸ್ಸಿನವರೊಡನೆ ಇಟ್ಟು ನೋಡುವುದು ಗಮನಾರ್ಹವಾದುದಾಗಿ ತೋರುತ್ತದೆ. ಮತ್ತು ಅವರವರ ನಂಬಿಕೆಗೆ ಅನುಗುಣವಾಗಿ 'ಹೊರಗೆ ಕಾಣಿಸುವ ಲೈಫ್‌ಸ್ಟೈಲ್‌ನ ವೈವಿಧ್ಯ, ತೋರುಗಾಣಿಕೆ ಬೇರೆ. ನಮ್ಮೊಳಗೆ ಸದಾ ಜಾಗ್ರತವಾಗಿರಬೇಕಾದ ವೈವಿಧ್ಯದ ಹಸಿವು ಬೇರೆ'(ಪುಟ ೧೨೭) ಎಂಬ ಅಭಿಪ್ರಾಯವು ಸಂಕಥನದ ಸಂವಾದದಲ್ಲಿ ಏರ್ಪಟ್ಟಿದೆ.

ವೈಚಾರಿಕ ಸಾಂಸ್ಕೃತಿಕ ಸಂಕಥನದಂತೆ ತೋರುವ 'ನಾವೇನು ಬಡವರಲ್ಲ' ಕೃತಿ ಸೃಜನಶೀಲ ಲೇಖಕರೂ ಆಗಿರುವ ಸತ್ಯನಾರಾಯಣ ಅವರ ಅನುಭವ ಆಲೋಚನೆಗಳಿಗೆ ಅಲ್ಲಲ್ಲಿ ಸೃಜನಾತ್ಮಕ ಸ್ಪರ್ಷವೂ ಗೋಚರಿಸುತ್ತದೆ. ಮೊದಲ ಎರಡು ಭಾಗಗಳಲ್ಲಿ ಈ ಗುಣವನ್ನು ಹೆಚ್ಚಾಗಿ ಕಾಣಬಹುದು. ಹಳ್ಳಿಯ ವಾತಾವರಣ, ಜನಮನದ ನುಡಿಗಟ್ಟುಗಳು. ಪ್ರತಿಮಾತ್ಮಕವಾಗಿಯೂ ಓದಿಸಿಕೊಳ್ಳುತ್ತದೆ. ನಂತರದ ಭಾಗಗಳಲ್ಲಿ ಲೇಖಕರು ಸಂವಾದಿಸಿದ ಮಹನೀಯರುಗಳ ಅಭಿಪ್ರಾಯಗಳು, ಹೇಳಿಕೆಗಳು ವರದಿಗಳಂತಿವೆ. ವಿಶ್ಲೇಷಣಾತ್ಮಕ ಬಿಡಿ ಲೇಖನಗಳಂತೆಯೂ ಓದಬಹುದು. ಲೇಖಕರ ಓದಿನ ಹರವು, ಲೋಹಿಯಾವಾದದ ಬಗ್ಗೆ ಇರುವ ಒಲವು ಮತ್ತು ಸ್ವಾನುಭವ ಸಂಶ್ಲೇಷಣಾತ್ಮಕವಾಗಿ ಹಲವೆಡೆ ಗೋಚರಿಸುತ್ತದೆ. ಅನುಭವದ ಸಾಂದ್ರತೆ, ವೈವಿಧ್ಯತೆ, ಸಮೀಕರಣ ಗುಣದಿಂದ ಬಿಡಿ ಬಿಡಿಯಾಗಬಹುದಾದುದನ್ನು ಓದುಗ ಕ್ರೋಢೀಕರಿಸಿಕೊಳ್ಳಬಹುದೇನೋ ಅನ್ನಿಸುತ್ತದೆ. ಇಲ್ಲಿ ಪಾತ್ರಗಳಿವೆ ಪ್ರತಿನಿಧಿಗಳಿಲ್ಲ, ನಿರೂಪಕ–ಲೇಖಕರ ಅನುಭವದ ಸಂದರ್ಭಗಳು ಸಾಮಾನ್ಯೀಕರಣಗೊಳ್ಳುತ್ತವೆ. ಉತ್ಕಟತೆಯಿಲ್ಲ. ನಿರ್ಲಿಪ್ತವಾಗಿ ಹರಿಯುತ್ತದೆ.

ಹೀಗೆಲ್ಲಾ ಹೇಳುವುದೇಕೆಂದರೆ: ಆತ್ಮಕಥೆಯ ತೀವ್ರವಾದ ಅನುಭವವಾಗಲಿ, ಕಥನ ಕಲೆಯ ಕೌಶಲ್ಯವಾಗಲಿ ಹರಳುಗಟ್ಟದೆ, ನಿರೂಪಣೆ ವಿಶ್ಲೇಷಣಾತ್ಮಕ ಧಾಟಿಯಿಂದಾಗಿ ಜಾರಿಹೋಗುತ್ತವೆ. ಇಷ್ಟಾದರೂ ಸತ್ಯನಾರಾಯಣ ಅವರ ಈ ಕೃತಿ ಅವರ ಈ ಹಿಂದಿನ ಕಥನ ಕೃತಿಗಳಿಗಿಂತ ಭಿನ್ನ ನೆಲೆಯಲ್ಲಿ ಓದುಗರನ್ನು ತಟ್ಟುತ್ತದೆ. ಅವರ ವೈಶಿಷ್ಟ್ಯತೆ ಇರುವುದೆ ಈ ರೀತಿಯ ಬರಹದ ಮೂಲಕ ವಿಚಾರವನ್ನು ಭಾವನೆಗಳನ್ನು ಕಟ್ಟಿಕೊಡುವ ಸಾಮರ್ಥ್ಯದಿಂದ. ಆಧುನಿಕ ಕಾಲಮಾನದ ಸಂದರ್ಭಗಳ ಆಲೋಚನೆಗಳು, ಸಿದ್ಧಾಂತಗಳು, ನಂಬಿಕೆ, ಸಂವೇದನೆ ಮತ್ತು ನಡಾವಳಿಗಳನ್ನು ಸಂಶ್ಲೇಷಿಸುವ ಈ ಕೃತಿ ಅವರ ವೈವಿಧ್ಯಮಯ ಬರವಣಿಗೆಗೆ ಅನುಗುಣವಾಗಿದೆ.

**–ಸತ್ಯನಾರಾಯಣರಾವ್ ಅಣತಿ**

ಪ್ರಿಯ ಓದುಗರೇ,

**ಹೊಸ ಮನುಷ್ಯ' ಪತ್ರಿಕೆಗೆ ಚಂದಾದಾರರಾಗ ಬಯಸುವವರು ಸಂಪಾದಕರು, ಹೊಸ ಮನುಷ್ಯ–ಈ ಹೆಸರಿನಲ್ಲಿ ಶಿವಮೊಗ್ಗದ ಸ್ಟೇಟ್ ಬ್ಯಾಂಕ್ ಆಫ್ ಮೈಸೂರ್‌ನ(IFSC Code: SBMY 0040444) ವಿನೋಬನಗರ ಶಾಖೆಯಲ್ಲಿ ತೆರೆದಿರುವ ಕರೆಂಟ್ ಅಕೌಂಟ್ ಸಂಖ್ಯೆ: 64110358330 ಇಲ್ಲಿಗೆ ಚಂದಾ ಮೊತ್ತವನ್ನು ವರ್ಗಾಯಿಸಿ ಪತ್ರ ಮುಖೇನ ಅಥವಾ ದೂರವಾಣಿ ಸಂದೇಶದ ಮೂಲಕ ತಮ್ಮ ವಿಳಾಸವನ್ನು ತಪ್ಪದೆ ಸಂಪಾದಕರಿಗೆ ತಿಳಿಸಬೇಕು.**

**ಚಂದಾ ವಿವರ, ದೂರವಾಣಿ ಸಂಖ್ಯೆಗಳು, ಈ ಮೇಲ್ ವಿಳಾಸ ಹಾಗೂ ಅಂಚೆ ವಿಳಾಸ ಪತ್ರಿಕೆಯ ಮುಖಪುಟದಲ್ಲಿದೆ.**

**ಪತ್ರಿಕೆಯಲ್ಲಿನ ಲೇಖನಗಳ ಬಗ್ಗೆ ಅಭಿಪ್ರಾಯ/ಪ್ರತಿಕ್ರಿಯೆಗಳನ್ನು ಬರೆಯ ಬಯಸುವವರು, ಅವನ್ನು ಸಂಕ್ಷಿಪ್ತವಾಗಿ ಬರೆದು ಆಯಾ ತಿಂಗಳ ೨೦ರೊಳಗೆ ನಮಗೆ ತಲುಪುವಂತೆ ಕಳಿಸಬೇಕು. ಈ ಮೇಲ್ ಮಾಡುವುದಾದರೆ ಅದು ನುಡಿ/ಬರಹದಲ್ಲಿ ಇರಬೇಕು.–ಸಂ.**

'ಹೊಸ ಮನುಷ್ಯ' ಓದುಗರೆಲ್ಲರಿಗೂ
ಹೊಸ ವರ್ಷದ ಶುಭಾಶಯಗಳು



**ಜೆ.ಎಲ್. ಪಾಟೀಲ್**
**ಮತ್ತು ಆರ್.ಜೆ. ಪಾಟೀಲ್**

ಸಿವಿಲ್ ಕಂಟ್ರಾಕ್ಟರುಗಳು
ಹುಬ್ಬಳ್ಳಿ

ದೂ: 9591317402

'ಹೊಸ ಮನುಷ್ಯ' ಪತ್ರಿಕೆಗೆ
ಹಾರ್ದಿಕ ಶುಭಾಶಯಗಳು



**ಮೆ. ಬ್ರೈಟ್ ಏಜೆನ್ಸೀಸ್**
ಎಸ್.ಎಲ್. ಆರ್ ರಸ್ತೆ
ಶಿವಮೊಗ್ಗ–೫೭೭೨೦೧
(ಕರ್ನಾಟಕ)

ದೂ: 08182-290057
ಟೆಲಿಫ್ಯಾಕ್ಸ್: 08182-279850

**Email: brightagency@dataone.in**
**brightagencies@gmail.com**

'ಹೊಸ ಮನುಷ್ಯ' ಓದುಗರೆಲ್ಲರಿಗೂ
ಹೊಸ ವರ್ಷದ ಶುಭಾಶಯಗಳು




ಬೆಂಗಳೂರಿನಲ್ಲಿ ಕ್ಯಾಬ್‌ಗಳನ್ನು ಬುಕ್ ಮಾಡಲು ಸಂಪರ್ಕಿಸಿ: 080- 30 600 600

**ತಿಂಗಳ ಸಾಲುಗಳು...**



ವಿಸ್ತರಣವೇ ಜೀವನ. ಸಂಕುಚಿತತೆಯೇ ಮರಣ.
ಪ್ರೀತಿಯೇ ವಿಸ್ತರಣ, ಎಲ್ಲ ಸ್ವಾರ್ಥವೂ ಸಂಕುಚಿತವೇ.

-ಸ್ವಾಮಿ ವಿವೇಕಾನಂದ

ಪತ್ರಿಕೆಗೆ ಶುಭ ಕೋರುತ್ತಾ...

-ಬಿ.ಸುರೇಶ

ಡಾ. ವಿಜಯಾ

HOSA MANUSHYA, a kannada monthly solely owned, edited, published and printed by D. S. Nagabhushana, at HIG-5, Kallahally Extn.,Vinoba Nagara, SHIVAMOGGA-577204. Printed at Ila Mudrana, Bengaluru-560 026 Ph.: 080-26757159

**Regd. News Paper** RNI No. KARKAN/2012/47568
Rgd No. KA/SK/SMG-1209/2013-15

ಇವರಿಗೆ \ To

If undelivered, please return to D.S. Nagabhushana, Editor,
'Hosa Manushya', 'HIG-5, 'Nudi', Kallahalli Extension,
Vinoba Nagara, Shivamogga -577204 (Karnataka)